ಖಾಸಗಿ ಪ್ರಸಾರಕ್ಕಾಗಿ

# ನವ ಮಾನವ ಮಾಸಿಕ

**ಡಿಸೆಂಬರ್, ೨೦೧೧** **ಪುಟ:** ೧೬ **ಚಂದಾ:** ನೀವು ಕೊಟ್ಟಷ್ಟು

ಸಂಪಾದಕ: **ಡಿ.ಎಸ್.ನಾಗಭೂಷಣ**

ವಿಳಾಸ: **ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ- ೫೭೭ ೨೦೪**

**ದೂ: ೦೮೧೮೨-೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್:** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

**ಕ**ರ್ನಾಟಕದ ರಾಜಕಾರಣ ಅಧೋಗತಿ ತಲುಪಿದೆ. ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ಇದು ಎದ್ದು ಕಂಡಿದೆ. ಲೋಕಾಯುಕ್ತ ವರದಿಯ ಪರಿಣಾಮವಾಗಿ ಸಂಪುಟದಿಂದ ತನ್ನ ಇತರ ಗೆಣೆಕಾರರೊಂದಿಗೆ ಹೊರಹಾಕಲ್ಪಟ್ಟ ಶ್ರೀರಾಮುಲು ಮತ್ತೆ ಸಂಪುಟ ಸೇರಲು ಎಲ್ಲ ಸಾಧ್ಯ ಕಸರತ್ತು ಮಾಡಿ, ಕೊನೆಯ ಅಸ್ತ್ರವಾಗಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ಅದನ್ನು ಬಹುಕಾಲ ಅಂಗೀಕರಿಸದೆ ನಮ್ಮ ವಿಧಾನಸಭಾಧ್ಯಕ್ಷರು ತೋರಿದ ವರ್ತನೆ ನಮ್ಮ ಪ್ರಜಾಪ್ರಭುತ್ವದ ಗರ್ಭಗುಡಿಯಲ್ಲೇ ಎಲ್ಲೋ ಬಿರುಕು ಮೂಡಿರುವ ಆತಂಕವನ್ನು ಸೃಷ್ಟಿಸಿದೆ. ಇನ್ನು ಅನಿವಾರ್ಯವೆಂಬಂತೆ ಆ ರಾಜೀನಾಮೆಯನ್ನು ವಿಧಾನಸಭಾಧ್ಯಕ್ಷರು ಅಂಗೀಕರಿಸಬೇಕಾಗಿ ಬಂದ ಪರಿಣಾಮವಾಗಿ ಉಂಟಾದ ಈ ಉಪಚುನಾವಣೆಯಲ್ಲಿ ಬಿಜೆಪಿ ತನ್ನ ಪಕ್ಷದ ಟಿಕೆಟ್ಟನ್ನು ಅದೇ ಶ್ರೀರಾಮುಲುಗೆ ನೀಡಲು ಕೊನೆವರೆಗೆ ದುಂಬಾಲು ಬಿದ್ದ ರೀತಿ ಮತ್ತು ತನ್ನ ಈ ಪ್ರಯತ್ನ ವಿಫಲವಾದ ನಂತರ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮತ್ತೆ ಅದೇ ಶ್ರೀರಾಮುಲು ವಿರುದ್ಧ ಮಾಡಿದ ಆರೋಪಗಳನ್ನು ಗಮನಿಸಿದಾಗ ಈ ಪಕ್ಷ ಮುಟ್ಟಿರುವ ನಿರ್ಲಜ್ಜೆ ಮತ್ತು ಆತ್ಮವಂಚನೆಯ ಮಟ್ಟವನ್ನು ಕಂಡು ಯಾರಿಗಾದರೂ ಗಾಬರಿಯಾಗುತ್ತದೆ.

ಬಳ್ಳಾರಿಯಲ್ಲಿ ಅಭಿವೃದ್ಧಿ ಆಗಿಲ್ಲವಂತೆ! ಶ್ರೀರಾಮುಲುದು ಗೂಂಡಾಗಿರಿ ಸಂಸ್ಕೃತಿಯಂತೆ! ಇದೆಲ್ಲ ಈ ಪಕ್ಷಕ್ಕೆ ಈಗ ಅರಿವಾಗಿದೆಯೇ? ಪಕ್ಷಕ್ಕೆ ಕೈಕೊಟ್ಟ ಶ್ರೀರಾಮುಲು ಮಾಡಿದ್ದು ಮಾತೃದ್ರೋಹವಂತೆ! ಸ್ವತಃ ತಾನು 'ಆಪರೇಷನ್ ಕಮಲ'ದ ಮೂಲಕ ಎಷ್ಟು ಜನರಿಂದ ಇಂತಹ ಮಾತೃದ್ರೋಹ ಮಾಡಿಸಿರುವೆ ಎಂಬುದು ಈ ಪಕ್ಷಕ್ಕೇನಾದರೂ ನೆನಪಿದೆಯಾ? ಇನ್ನು ಈ ಚುನಾವಣೆಯಲ್ಲಿ ಶ್ರೀರಾಮುಲು ಪರ ನಿಂತ ತಮ್ಮ ಪಕ್ಷದ ಶಾಸಕರು ಮತ್ತು ಸಂಸದರನ್ನು ಕೊನೆ ಘಳಿಗೆಯವರೆಗೆ ಕಾದು ಪಕ್ಷದಿಂದ ಅಮಾನತು ಮಾಡಿರುವ ಬಿಜೆಪಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತೆ ಮಾತೃದ್ರೋಹದ ರಾಜಕಾರಣಕ್ಕೇ ಕೈಹಾಕದೆ ಬೇರೆ ಮಾರ್ಗವಿಲ್ಲದಂತೆ ತೋರುತ್ತಿದೆ. ಬಿಜೆಪಿ ತಾನು ಮಾಡಿದ ಮಾಡಿದ ಪಾಪ ತನ್ನನ್ನೇ ಸುತ್ತುವರೆಯುತ್ತಿರುವ ಈ ವಿದ್ಯಮಾನದ ನಂತರವಾದರೂ ನೈತಿಕತೆಯ ಪರಿಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿದರೆ ಒಳ್ಳೆಯದು!

ಇನ್ನು ಈ ಚುನಾವಣೆ ಶ್ರೀರಾಮುಲು ಅಕ್ರಮ ಗಣಿಗಾರಿಕೆಯ ಭ್ರಷ್ಟಾಚಾರದ ಕಳಂಕವನ್ನು ಮರುಚುನಾವಣೆಯನ್ನು ಗೆಲ್ಲುವ ಮೂಲಕ ತೊಡೆದುಕೊಳ್ಳಲು ಯತ್ನಿಸುತ್ತಿರುವ ಪರಿಯೇ ಪ್ರಜಾಪ್ರಭುತ್ವದ ಬಹಿರಂಗ ಅಣಕದಂತಿದೆ. ನಮ್ಮ ಸಂವಿಧಾನದ ಪ್ರಕಾರ ಭ್ರಷ್ಟಾಚಾರದ ಆಪಾದನೆಯನ್ನು ಎದುರಿಸಬೇಕಾದದ್ದು ನ್ಯಾಯಾಂಗದ ನೆಲೆಯಲ್ಲಿ. ಆದರೆ ನ್ಯಾಯಾಂಗವನ್ನೇ ಹೀಗೆ 'ಬೈಪಾಸ್' ಮಾಡಲು ಯತ್ನಿಸುವ ಮೂಲಕ ಒಂದು ಅಪಾಯಕಾರಿ ಸಂಪ್ರದಾಯವನ್ನು ಶುರು ಮಾಡಲು ಹೊರಟಿರುವ ಶ್ರೀರಾಮುಲುವನ್ನು ಈ ನೆಲೆಯಲ್ಲಿ ಪ್ರಶ್ನಿಸಿ ಎದುರಿಸಲು ಯಾವ ಪಕ್ಷವೂ ಮುಂದಾಗದಿರುವುದು ನಮ್ಮೆಲ್ಲ ರಾಜಕೀಯ ಪಕ್ಷಗಳ ತಾತ್ವಿಕ ದಿವಾಳಿತನವನ್ನು ತೋರುತ್ತದೆ. ಜೆಡಿಎಸ್ ಎಂಬ ಪಕ್ಷವಂತೂ ತನಗೆ ಯಾವ ತತ್ವ-ಸಿದ್ಧಾಂತವೂ ಇಲ್ಲ, ಸಮಯ ಸಾಧಕತನವೇ ತನ್ನ ಕಾರ್ಯಕ್ರಮವೆಂಬುದನ್ನು ಈ ಚುನಾವಣೆಯಲ್ಲಿ ಜಾತಿ ಲೆಕ್ಕಾಚಾರ ಮಾಡಿ, ರಾಜ್ಯ ರಾಜಕಾರಣದ ಖಳನಾಯಕ ಯಾರೆಂದು ತಾನು ಈವರೆಗೆ ಬೊಬ್ಬರಿದಿತ್ತೋ ಆ ರೆಡ್ಡಿ ಸೋದರರ ಬಲಗೈ ಬಂಟ ಶ್ರೀರಾಮುಲುವನ್ನು ತನ್ನೆಡೆಗೆ ಸೆಳೆಯುವ ವಿಫಲ ಪ್ರಯತ್ನ ಮಾಡಿ ಕೊನೆಗೆ ಬೆಂಬಲಿಸುವ ಮೂಲಕ ಮತ್ತೆ ಸಾಬೀತುಪಡಿಸಿದೆ. ಇನ್ನು ಕಾಂಗ್ರೆಸ್ ಅಕ್ರಮ ಗಣಿಗಾರಿಕೆಯಿಂದ ಕಳಂಕಿತರಾದ ಶ್ರೀರಾಮುಲು ವಿರುದ್ಧ ಪ್ರಚಾರ ಮಾಡಲು ಅದೇ ಅಕ್ರಮ ಗಣಿಗಾರಿಕೆಯ ಕಳಂಕ ಹೊತ್ತ ಅನಿಲ್ ಲಾಡ್ ಎಂಬ ಸಂಶಯಾಸ್ಪದ ಆಸಾಮಿಯನ್ನು ಮುಂದಿಟ್ಟುಕೊಂಡು ಹೊರಟು ಲೋಕಾಯುಕ್ತ ವರದಿ ಕುರಿತ ತನ್ನ ನಿಜ ನಿಲುವೇನೆಂಬುದನ್ನು ಪರೋಕ್ಷವಾಗಿ ಸೂಚಿಸಿದೆ. ಹಾಗೇ ಅದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ನಾಯಕರ ಮಾನ ಉಳಿಸಿಕೊಳ್ಳಲು ಈಗ ಸಾರ್ವತ್ರಿಕವಾಗಿ ಲೋಕಾಯುಕ್ತದ ವಿರುದ್ಧ ಮತ್ತು ನಿರ್ದಿಷ್ಟವಾಗಿ ನ್ಯಾ. ಸಂತೋಷ್ ಹೆಗ್ಡೆಯವರ ವಿರುದ್ಧ ಆರಂಭಿಸಿರುವ ಅಪಪ್ರಚಾರವನ್ನು ಒಮ್ಮನದಿಂದ ಮತ್ತು ಸಮರ್ಥವಾಗಿ ಎದುರಿಸಲು ವಿಫಲವಾಗಿರುವುದು ಎದ್ದು ಕಾಣುತ್ತಿದೆ.

ಹೀಗೆ ರಾಜ್ಯದ ಇಡೀ ರಾಜಕೀಯ ಕುಲವೇ ಒಂದಲ್ಲ ಒಂದು ರೀತಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಸಂಸ್ಥೆ ತನ್ನ ದಿಟ್ಟ ಮತ್ತು ಪ್ರಾಮಾಣಿಕ ಕಾರ್ಯಾಚರಣೆಯ ಮೂಲಕ ಆರಂಭಿಸಿರುವ ಕಾನೂನಾತ್ಮಕ ಸಮರದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡಲು ಯತ್ನಿಸುತ್ತಿರುವಾಗ, ಇದರ ವಿರುದ್ಧ ದನಿಯೆತ್ತಬೇಕಾದ ನಮ್ಮ ಮಾಧ್ಯಮದ ಒಂದು ಭಾಗ ಭ್ರಷ್ಟ ರಾಜಕಾರಣಿಗಳ ಜೊತೆ ಕೈಜೋಡಿಸಲು ಹವಣಿಸುತ್ತಿರುವ ರೀತಿ ಆಘಾತಕಾರಿಯಾಗಿದೆ. ಕನ್ನಡದ ದಿನಪತ್ರಿಕೆಯೊಂದು ಇದರ ಸಿಬ್ಬಂದಿಯೊಬ್ಬರು ಈ ಹಿಂದೆ ಲೋಕಾಯುಕ್ತದ ಮಾಜಿ ಅಧಿಕಾರಿಯೊಬ್ಬರೊಡನೆ ಲೋಕಾಭಿರಾಮವಾಗಿ ನಡೆಸಿದ್ದ ಮಾತುಕತೆಯನ್ನೇ ಈಗ ಲೋಕಾಯುಕ್ತ ಸಂಸ್ಥೆಯೇ ಭ್ರಷ್ಟಾಚಾರದಿಂದ ತುಂಬಿದೆ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಮೂಲಕ ಜನತೆಗೆ ದ್ರೋಹ ಬಗೆದಿದೆ. ಈ ಪತ್ರಿಕೆಯ ಸಂಪಾದಕ ತಾನು ಈ ಮೊದಲು ಸಂಪಾದಕನಾಗಿದ್ದ ಪತ್ರಿಕೆಯನ್ನೂ ಹೀಗೇ ರಾಜ್ಯ ರಾಜಕಾರಣದಲ್ಲಿ ತನ್ನ ವೈಯುಕ್ತಿಕ ಹಿತಾಸಕ್ತಿಗಳಿಗನುಗುಣವಾಗಿ ಸಕ್ರಿಯ ಪಾತ್ರಧಾರಿಯನ್ನಾಗಿ ಮಾಡುತ್ತಾ ಬಂದಿದ್ದನೆಂದೂ, ಆ ಕಾರಣದಿಂದಾಗಿ ಮತ್ತು ಈತನ ಮೇಲಿದ್ದ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರಗಳ ಆರೋಪಗಳ ತನಿಖೆ ನಡೆಸಿ ಅದರ ಪ್ರಕಾಶಕರು ಈತನನ್ನು ಅಲ್ಲಿಂದ ಹೊರದೂಡಿದರೆಂದೂ ಹೇಳಲಾಗುತ್ತಿದೆ. ಈ ಸಂಪಾದಕ ಅಕ್ರಮ ಗಣಿಗಾರಿಕೆ ಲೂಟಿಯಷ್ಟೇ ಅಲ್ಲ, ಕುಪ್ರಸಿದ್ಧ 'ಸುದ್ದಿಗಾಗಿ ಕಾಸು' ಕಾರ್ಯಕ್ರಮದ ಫಲಾನುಭವಿ ಕೂಡ ಎಂಬ ಸುದ್ದಿಯೂ ಪ್ರಚಲಿತದಲ್ಲಿದೆ..

ಒಂದೆಡೆ ಸಾರ್ವಜನಿಕ ಜೀವನದ ಬಗ್ಗೆ ಸದಾ ನೀತಿ ಪಾಠ ಹೇಳುತ್ತಾ, ಇನ್ನೊಂದೆಡೆ ಮಾಧ್ಯಮದ ಸ್ವಾತಂತ್ರ್ಯದ ಹೆಸರಿನಲ್ಲಿ ತನ್ನ ಮೇಲೆ ಯಾವ ಬಾಹ್ಯ ನಿಯಂತ್ರಣವೂ ಇರಬಾರದೆಂದು ವಾದಿಸುತ್ತಾ ಪತ್ರಿಕಾ ಮಂಡಳಿಯ ಅಧ್ಯಕ್ಷ ಕಟ್ಜು ಅವರ ವಿರುದ್ಧ ಸಮರ ಸಾರಿರುವ ನಮ್ಮ ಮಾಧ್ಯಮ ಮಿತ್ರರು ಈ ಪ್ರಕರಣದ ತ್ವರಿತ ತನಿಖೆಗಾಗಿ ಏಕೆ ಆಗ್ರಹಿಸುತ್ತಿಲ್ಲವೋ ತಿಳಿಯದಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ, ರಾಜಕಾರಣಿಗಳಂತೆಯೇ ಪತ್ರಕರ್ತರೂ ಸ್ವಯಂಪ್ರೇರಿತರಾಗಿ ಪ್ರತಿ ವರ್ಷ ತಮ್ಮ ಆಸ್ತಿಯನ್ನು ಬಹಿರಂಗವಾಗಿ ಏಕೆ ಘೋಷಿಸಿಕೊಳ್ಳಬಾರದೆಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಿಲ್ಲ. ಸಾಂವಿಧಾನಿಕ ಆಡಳಿತ ಮುರಿದು ಬಿದ್ದು ಪ್ರಜಾಪ್ರಭುತ್ವವೆಂಬುದು ಲೂಟಿಕೋರರ ಪ್ರಭುತ್ವವಾಗಿ ಮಾರ್ಪಾಡಾಗುತ್ತಿರುವ ಇವೊತ್ತಿನ ಆತಂಕಕಾರಿ ಪರಿಸ್ಥಿತಿಯಲ್ಲಿ ಭ್ರಷ್ಟ ರಾಜಕಾರಣಿಗಳ ಜೊತೆ ಭ್ರಷ್ಟ ಮಾಧ್ಯಮವೂ ಸೇರಿಕೊಂಡರೆ ಗತಿ ಏನು? ಜವಾಬ್ದಾರಿಯುತ ಮಾಧ್ಯಮ ಮಿತ್ರರು ಮತ್ತು ಜನತೆ ಯೋಚಿಸಬೇಕು.

**-ಸಂಪಾದಕ**

# ಅಶೋಕ ಮೆಹ್ತಾ ಜನ್ಮಶತಮಾನೋತ್ಸವ ಆಚರಣೆ: ಒಂದು ವರದಿ



ಈ ವರ್ಷದ ಅಕ್ಟೋಬರ್ ೨೪ ಸಮಾಜವಾದಿ ಚಳುವಳಿಯ ಆದ್ಯ ಪ್ರವರ್ತಕರಲ್ಲೊಬ್ಬರಾದ ಅಶೋಕ ಮೆಹ್ತಾರ ಜನ್ಮ ಶತಮಾನೋತ್ಸವದ ದಿನ. ಅದನ್ನು ಬೆಂಗಳೂರಿನ ಸಮಾಜವಾದಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಇದೇ ಅಕ್ಟೋಬರ್ ೨೩ರ ಭಾನುವಾರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಸಂಭ್ರಮದೊಂದಗೆ ಆಚರಿಸಲಾಯಿತು.

ಒಂದು ಕಾಲದಲ್ಲಿ ಪ್ರಜಾ ಸಮಾಜವಾದಿ ಪಕ್ಷದಲ್ಲಿದ್ದ ಹಾಲಿ ವಿದೇಶಾಂಗ ಸಚಿವ ಎಸ್. ಎಂ. ಕೃಷ್ಣ ಅವರು ಅಶೋಕ ಮೆಹತಾ ಕುರಿತು ಸಮಾಜವಾದಿ ಅಧ್ಯಯನ ಕೇಂದ್ರ ತಯಾರಿಸಿದ್ದ ಸಾಕ್ಷ್ಯಚಿತ್ರಕ್ಕೆ ಲ್ಯಾಪ್‌ಟ್ಯಾಪ್ ಗುಂಡಿಯೊತ್ತಿ ಚಾಲನೆ ನೀಡುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅವರು ಕೇಂದ್ರವು ಹೊರ ತಂದಿರುವ ಅಶೋಕ ಮೆಹ್ತಾರ 'ಜನತಾಂತ್ರಿಕ ಸಮಾಜವಾದ', 'ಸಮಾಜವಾದದಲ್ಲಿ ಅಧ್ಯಯನ', ಬಾಪು ಹೆದ್ದೂರಶೆಟ್ಟಿಯವರು ಬರೆದಿರುವ ಅಶೋಕ ಮೆಹ್ತಾರ ಜೀವನ ಚರಿತ್ರೆ ಮತ್ತು ಸದರಿ ಶತಮಾನೋತ್ಸವ ಸ್ಮರಣ ಸಂಚಿಕೆಗಳ ಬಿಡುಗಡೆಯನ್ನೂ ಮಾಡಿದರು. ಎಸ್. ಎಂ. ಕೃಷ್ಣ ಅವರು ಸಾಕಷ್ಟು ಸುದೀರ್ಘವಾಗಿ ಮಾತನಾಡುತ್ತಾ, ಪ್ರಜಾ ಸಮಾಜವಾದಿ ಪಕ್ಷದ ಮೂಲಕ ಆರಂಭಿಸಿದ ತಮ್ಮ ರಾಜಕೀಯ ಜೀವನದ ಹಲವು ನೆನಪುಗಳನ್ನು ಮೆಲುಕು ಹಾಕಿದರು.

ಸಮಾಜವಾದ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಮೂಲಧ್ಯೇಯವನ್ನಾಗಿ ಹೊಂದಿದ್ದು, ಅದರಿಂದ ಆಕರ್ಷಿತರಾಗಿ ತಾವು ಪಿ.ಎಸ್.ಪಿ. ಯನ್ನು ಸೇರಿದ್ದಾಗಿ ಕೃಷ್ಣ ಹೇಳಿದರು. ತಾವು ಪಕ್ಷ ಬಿಟ್ಟ ಮೇಲೂ ತಮ್ಮ ಮತ್ತು ಮೆಹ್ತಾ ಅವರ ಒಡನಾಟ ಮುಂದುವರೆದಿತ್ತು ಎಂದು ಅವರು ನೆನಪಿಸಿಕೊಂಡರು. ಅಶೋಕ ಮೆಹ್ತಾ ಆದರ್ಶಪ್ರಾಯ ಜನತಾಂತ್ರಿಕ ಸಮಾಜವಾದಿ ವ್ಯಕ್ತಿತ್ವ ಹೊಂದಿದ್ದು, ಅಧಿಕಾರದಲ್ಲಿದ್ದಾಗ ಹಲವು ಜನಪರ ಯೋಜನೆಗಳನ್ನು ರೂಪಿಸಿದರು ಎಂದೂ ಕೃಷ್ಣ ವಿವರಿಸಿದರು. ಆದರೆ ಅವರು ತಾವು ಸಮಾಜವಾದಿ ಆಂದೋಲನದ ಹೊರವಲಯದಲ್ಲೇ ಇದ್ದು, ಅದರ ಗರ್ಭಗುಡಿ ಪ್ರವೇಶ ಮಾಡಲಿಲ್ಲವೆಂದು ಹೇಳಿದ್ದು ಮಾತ್ರ ಕುತೂಹಲಕಾರಿಯಾಗಿತ್ತು. ಅಂದಿನ ಸಮಾಜವಾದಿಗಳ ತಾತ್ವಿಕ ಬದ್ಧತೆ ಮತ್ತು ಪ್ರಾಮಾಣಿಕತೆಗಳನ್ನು ನೆನಪಿಸಿಕೊಂಡ ಕೃಷ್ಣ ಅವರು ಹಿರಿಯ ಸಮಾಜವಾದಿ ನಾಯಕರ ನಡುವಣ ತಾತ್ವಿಕ ಸಂಘರ್ಷಗಳ ಪ್ರಸ್ತಾಪ ಮಾಡಿದರು. ಈ ಸಂದರ್ಭದಲ್ಲಿ ಅವರು ಲೋಹಿಯಾ ಸಂಬಂಧವಾಗಿ ಆಡಿದ ಕೆಲವು ಮಾತುಗಳು ಸಭೆಯಲ್ಲಿದ್ದ ಕೆಲವು ಹಿರಿಯ ಲೋಹಿಯಾ ನಿಕಟವರ್ತಿಗಳನ್ನು ಕೆರಳಿಸಿದ್ದೂ, ಅದು ಸಭೆಯ ನಂತರ ವೈಯುಕ್ತಿಕ ಮಾತುಕತೆಯ ರೂಪದಲ್ಲಿ ಪ್ರಕಟವಾಗಿದ್ದೂ ನಡೆಯಿತು!

ನಂತರ ಸಭಿಕರಿಂದ ಸಮಾಜವಾದದ ಪ್ರಸ್ತುತತೆ ಕುರಿತಂತೆ ಮುಕ್ತ ಸಂವಾದ ನಡೆಯಿತು. ಇದರಲ್ಲಿ ಅಶೋಕ ಮೆಹ್ತಾರನ್ನು ನಿಕಟವಾಗಿ ಬಲ್ಲ ಹಿರಿಯ ತಲೆಮಾರಿನ ಸಮಾಜವಾದಿಗಳೂ ಮತ್ತು ಯುವಪೀಳಿಗೆಯ ಸಮಾಜವಾದಿಗಳೂ ಒಟ್ಟಿಗೇ ಭಾಗವಹಿಸಿದ್ದು ವಿಶೇಷವೆನಿಸಿತು. ಸಮಾರಂಭದ ಅಂಗವಾಗಿ ಸಮಾಜವಾದಿ ಆಂದೋಲನದ ಅಪರೂಪದ ಛಾಯಾಚಿತ್ರಗಳ ಪ್ರದರ್ಶನ ಏರ್ಪಾಡಾಗಿತ್ತು.

(ವರದಿ: **ಖಾದ್ರಿ ಎಸ್. ಅಚ್ಯುತನ್**)

---

## ನಿಮ್ಮ ಮಾತು

ಪ್ರೀತಿಯ ಸಂಪಾದಕರಿಗೆ,

ತಿಂಗಳು ತಿಂಗಳು 'ನವ ಮಾನವ' ಬರುತ್ತಿದೆ. ಪ್ರಖರ ವೈಚಾರಿಕತೆಯಿಂದ ಕೂಡಿದ ಅಪರೂಪದ ಪತ್ರಿಕೆ. ಸಶಕ್ತ ಸಂಪಾದಕೀಯ, ಸಮಕಾಲೀನ ಸಂಗತಿಗಳ ಮೇಲಿನ ಚರ್ಚೆ, ಸೂಡಿ ಬೆಳಕಿನಲ್ಲಿ ಇತಿಹಾಸ ನೋಡುವ 'ದಾಖಲೆ' ಕಾಲಂ, ರಾಜಕಾರಣಿಗಳ ಎಡಬಿಡಂಗಿತನದ ಬಗ್ಗೆ ಪಾರದರ್ಶಕ ವಿಶ್ಲೇಷಣೆ, ಜೊತೆಗೆ ಸವಿತಾ ನಾಗಭೂಷಣ ಅವರ ಅಧ್ಯಯನಯೋಗ್ಯ ಪ್ರವಾಸ ಕಥನ–ಪುಟ ಪುಟವೂ ಸಮಾಜಮುಖಿ. ಖುಷಿಯಾಗಿದೆ. 'ಪತ್ರಿಕೆಯಲ್ಲಿ ರಾಜಕೀಯ ಜಾಸ್ತಿಯಾಯಿತು' ಅಂತ ಬಿ. ಸುರೇಶ್ ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲ, ಜಾಸ್ತಿ ಆಗಿಲ್ಲ. ವ್ಯವಸ್ಥೆಗೆ ಗುದ್ದು ಹೊಡೆಯಲೇಬೇಕು. ಪ್ರಗತಿಪರ ನೆಲೆಯಲ್ಲಿ ರಾಜಕೀಯವನ್ನು ನೋಡುವ 'ಮಾನವ'ನ ಪ್ರಜ್ಞಾ ಸೆಲೆ ತುಂಬ ಹರಿತವಾಗಿದೆ.

**–ಅರವಿಂದ ಕರ್ಕಿಕೋಡಿ, ಹಳದೀಪುರ**

ನಿಮ್ಮ ಸಾಮಾಜಿಕ ಕಳಕಳಿಗೆ ಪ್ರಥಮವಾಗಿ ಶರಣು. ಸಮಾಜವಾದದ ಕೊನೆಯ ಕೊಂಡಿಗಳಂತೆ ಕಾಣುತ್ತಿರುವ ಹಲವರ ನಡುವೆ ನೀವು ವಿಶಿಷ್ಟರಾಗಿ ಕಾಣುತ್ತೀರಿ. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ ಸದಾ ಇರುತ್ತದೆ. ಈ ಬೆಂಬಲದ ಒಂದು ಕಿರು ರೂಪವಾಗಿ ಪತ್ರಿಕೆಗಾಗಿ ಎರಡು ಸಾವಿರ ರೂಪಾಯಿಗಳ ಚೆಕ್ ಕಳಿಸುತ್ತಿರುವೆ. ದಯವಿಟ್ಟು ಸ್ವೀಕರಿಸಿ.

**–ಎನ್.ಆರ್. ವಿಶುಕುಮಾರ್, ಬೆಂಗಳೂರು**

ನವ ಮಾನವದ ಪ್ರತಿ ಸಂಚಿಕೆಯೂ ಚೆನ್ನಾಗಿ ಬರುತ್ತಿದೆ. ಚೆನ್ನಾಗಿ ಅಂದರೆ, ಸರಿದಾರಿಯಲ್ಲಿ ಯೋಚನೆ ಮಾಡಲು ಪ್ರೇರಿಸುವ ಹಾಗೆ ಅಥವಾ ಇಂತಹ ಆಲೋಚನೆಗಳನ್ನು ವ್ಯಕ್ತಪಡಿಸಲು ಅಗತ್ಯವಾಗಿದ್ದ ಅಕ್ಷರ ವೇದಿಕೆಯನ್ನು ಕಲ್ಪಿಸುತ್ತಿದೆ ಎಂದು. ಪತ್ರಿಕೆ ಹೊಸ ಆಲೋಚನೆಗಳಿಗೆ ತಕ್ಕ ಹೊಸ ನುಡಿಕಟ್ಟನ್ನು ಕೂಡಾ ರೂಪಿಸಲಿ ಎಂದು ಹಾರೈಸುವೆ.

**–ಓ.ಎಲ್. ನಾಗಭೂಷಣ ಸ್ವಾಮಿ, ಮೈಸೂರು**

ನವೆಂಬರ್ ಸಂಚಿಕೆಯನ್ನು ವೆಬ್‌ನಲ್ಲಿ ಓದಿದೆ. ಮಲ್ಲಿಕಾ ಬಸವರಾಜು ಅವರ ಬರಹ ಆಪ್ತವೆನಿಸಿತು.

**–ಮಂಗ್ಳೂರ ವಿಜಯ, ಬೆಂಗಳೂರು**

ನವ ಮಾನವ ನೋಡಿ ಬಹಳ ಖುಷಿಯಾಯಿತು. ಸಂಪಾದಕೀಯ, ಪ್ರವಾಸಿ ಸವಿತಾ ಕಂಡ ಇಂಡಿಯಾ ಮತ್ತಿತರ ಲೇಖನಗಳು ಮನನೀಯವಾಗಿವೆ. ಹಲವು ತಲ್ಲಣಗಳ ನಡುವೆ ಸಮಾಜವಾದಿ ಚಿಂತನೆಯ ಈ ಪತ್ರಿಕೆ ಒಂದಿಷ್ಟು ನೆಮ್ಮದಿ ನೀಡುತ್ತಿದೆ. ಪತ್ರಿಕೆಗೆ ಯಶಸ್ಸನ್ನು ಕೋರಿ ಐದು ನೂರು ರೂಪಾಯಿಗಳ ಚೆಕ್ ಕಳಿಸುತ್ತಿರುವೆ.

**–ಎಂ.ಜಿ. ಈಶ್ವರಪ್ಪ, ದಾವಣಗೆರೆ**

ನನ್ನ ಸೋಮಾರಿತನವನ್ನು ಕ್ಷಮಿಸಿ. ಇಂದು ಒಂದು ಸಾವಿರ ರೂಪಾಯಿ ಚೆಕ್ ಕಳಿಸಿರುವೆ. ಸದ್ಯ ನಾನು ಮಾಡಲಾರದ್ದನ್ನು ನೀವು ಮಾಡುತ್ತಿರುವಿರಿ. ನನಗೆ ಇದು ಮುಖ್ಯವೆನಿಸುವ ಪತ್ರಿಕೆ. ಪತ್ರಿಕೆಗಾಗಿ ನಾನು ಸಾಧ್ಯವಾದುದನ್ನೆಲ್ಲ ಮಾಡುವೆ.

**–ಯು.ಆರ್. ಅನಂತಮೂರ್ತಿ, ಬೆಂಗಳೂರು**

ನವ ಮಾನವ ನಿಯಮಿತವಾಗಿ ತಲುಪುತ್ತಿದೆ. ಕನ್ನಡ–ಕನ್ನಡ ಶಿಕ್ಷಣ ಕುರಿತ ಕಾಳಜಿ, ಚಿಂತನೆ ಚೆನ್ನಾಗಿ ಮೂಡಿ ಬಂದಿದೆ. ಉಳಿದಂತೆ ಈ ಪತ್ರಿಕೆ ಕನ್ನಡದಲ್ಲಿ ಹೊಸ ವೈಚಾರಿಕತೆಯನ್ನು ಬೆಳೆಸುವ ಪತ್ರಿಕೆಯಾಗಿದೆ. ನಿಮ್ಮ ಪ್ರಯತ್ನ ಯಶಸ್ವಿಯಾಗಲಿ.

**–ಈಶ್ವರ ಮಮದಾಪುರ, ಗೋಕಾಕ**

ಪತ್ರಿಕೆ ಓದಲು ಖುಷಿಯೆನಿಸುತ್ತದೆ. ಕಷ್ಟವಾದರೂ ಮುಂದುವರೆಸಿ. ನಮ್ಮ ಬೆಂಬಲ ಇದೆ. ಇದರ ಜತೆ ಚಂದಾ ಹಣವೆಂದು ೫೫೦ ರೂಪಾಯಿಗಳ ಚೆಕ್ ಇಟ್ಟಿರುವೆ.

**–ಕೆ.ಎಸ್. ಅಚ್ಯುತನ್, ಬೆಂಗಳೂರು**

ಅಕ್ಟೋಬರ್ ಸಂಚಿಕೆಯಲ್ಲಿ ಕಂಬಾರ ಮತ್ತು ಚಂಪಾ ಬಗ್ಗೆ ಬರೆದಿರುವಿರಿ. ಇವರಿಬ್ಬರಿಗೆ ಪ್ರಶಸ್ತಿಗಳು ಬಂದಿರುವುದು ಸಂತೋಷವೇ ಸರಿ. ಆದರೆ ಈ ಸಂದರ್ಭದಲ್ಲಿ ಎಲ್ಲರಂತೆ ನೀವೂ ಹೊಗಳುಭಟರಾಗದೆ ನಿಮಗನ್ನಿಸಿದ್ದನ್ನು-ಅದನ್ನು ನಾನೂ ಒಪ್ಪುವೆ-ಬರೆದು ಸಂತಸವನ್ನು ಹಂಚಿಕೊಂಡದ್ದು ಸರಿಯೆನಿಸಿತು. ಪ್ರಶಸ್ತಿ ಪುರಸ್ಕೃತರಾಗಿದ್ದಕ್ಕೆ ಅವರಿಗೆ ಅಭಿನಂದನೆಗಳು. ಅನಿಸಿದ್ದನ್ನು ನೇರ ಬರೆದುದಕ್ಕೆ ನಿಮಗೆ ಅಭಿನಂದನೆಗಳು!

**-ಬಂದಗದ್ದೆ ರಾಧಾಕೃಷ್ಣ, ಕೆಳದಿ**

ಪತ್ರಿಕೆ ಮೌಲ್ಯಯುತವಾಗಿದೆ. ನವ ಮಾನವ ಸಮಾಜದ ನಿರ್ಮಿತಿಗೆ ಮಾರ್ಗದರ್ಶಕ ತತ್ವಗಳು ಅತ್ಯವಶ್ಯಕ. ಚಂದಾ ಎಂದು ನೂರು ರೂ. ಚೆಕ್ ಕಳಿಸುತ್ತಿರುವೆ.

**-ಗಿರೀಶ್ ಸಿ. ಜಕಾಪುರೆ, ಮೈಂದರ್ಗಿ, ಮಹಾರಾಷ್ಟ್ರ**

ನಾಲ್ಕೂ ಸಂಚಿಕೆಗಳು ನನ್ನ ಮನಸ್ಸನ್ನು ಅರಳಿಸಿವೆ. ಸಮಾಜವಾದಿ ತತ್ವಗಳ ಪರಿಚಯ ನನ್ನ ಬೆಳವಣಿಗೆಗೆ ಪೂರಕವಾಗಿ ಪರಿಣಮಿಸಿದೆ. ಇದೋ, ಇನ್ನೂರು ರೂಪಾಯಿಗಳ ಚಂದಾ ಕಳಿಸುತ್ತಿರುವೆ. ತಡವಾದುದಕ್ಕೆ ಕ್ಷಮೆ ಇರಲಿ.

**-ಭೈರೋಬಾ ಕಾಂಬ್ಳೆ, ಹುಬ್ಬಳ್ಳಿ**

ಇಂದಿನವರೆಗೂ ಯಾವ 'ಇಸಂ'ನ ನೇಣೂ ಆಕರ್ಷಿಸಲಿಲ್ಲ. ಎಪ್ಪತ್ತು ದಾಟಿದ ಮೇಲೆ ಅವುಗಳ ಗೊಡವೆ ನನಗೆ ಏಕೆ? ಆದರೆ ನಿಮ್ಮ ಸ್ನೇಹಕ್ಕಾಗಿ ಚಂದಾ ಕಳಿಸುತ್ತಿರುವೆ. ಸ್ನೇಹಕ್ಕೆ ಜಯವಾಗಲಿ!

**-ಡಿ.ಬಿ. ರಾಮಚಂದ್ರಾಚಾರ್, ಬೆಂಗಳೂರು**

ನವೆಂಬರ್ ಸಂಚಿಕೆಯಲ್ಲಿ ಕನ್ನಡ ಶಿಕ್ಷಣ ಕುರಿತ ಬರಹಗಳನ್ನು ಓದಿದೆ. ಆದರೆ ಆ ಬಗ್ಗೆ ಏನಾದರೂ ಬರೆಯುವ ಅರ್ಹತೆಯನ್ನೇ ನಾನೀಗ ಕಳೆದುಕೊಂಡಿದ್ದೇನೆ. ನನ್ನ ನೆರೆ ಹೊರೆಯಲ್ಲಿ ಒಂದು ಆರೋಗ್ಯಕರ ಪರಿಸರವುಳ್ಳ ಅಂಗನವಾಡಿಯನ್ನು ಹುಡುಕೀ ಹುಡುಕೀ ಸಾಕಾಗಿ, ಕೊನೆಗೆ ನನ್ನ ಮಗನನ್ನೀಗ ಅನಿವಾರ್ಯವಾಗಿ ಇಂಗ್ಲಿಷ್ ನರ್ಸರಿಗೆ ಸೇರಿಸಿರುವೆ. ಅವನ ಸೃಜನಶೀಲತೆಯ, ಕ್ರಿಯಾಶೀಲತೆಯ ದಿಕ್ಕುಗೆಡಿಸುವ ಮೊದಲ ಹೆಜ್ಜೆಯಿದು ಎಂದು ನನಗೆ ಗೊತ್ತಿದೆ. ಆದರೆ ನಾನು ಏನು ಮಾಡಲಿ, ನೀವೇ ಹೇಳಿ...

**-ಟಿ.ಎಲ್. ರೇಖಾಂಬಾ, ಶಿವಮೊಗ್ಗ**

ಪತ್ರಿಕೆಯಲ್ಲಿರುವುದೆಲ್ಲ ನನಗೆ ಹೊಸದು. ಹಾಗಾಗಿ ಪ್ರತಿಯೊಂದನ್ನೂ ಕುತೂಹಲದಿಂದ ಓದುತ್ತಿರುವೆ. ಪತ್ರಿಕೆಗೆ ಬೆಂಬಲವಾಗಿ ೫೦೦ ರೂಪಾಯಿಗಳ ಚೆಕ್ ಇಟ್ಟಿರುವೆ.

**-ಜಯವಂತ, ಬೆಂಗಳೂರು**

ನಾನು ಗಮನಿಸಿದ ಎರಡೂ ಸಂಚಿಕೆಗಳ ಎಲ್ಲ ಲೇಖನಗಳು ವೈವಿಧ್ಯಮಯವಾಗಿದ್ದು, ಚಿಂತನೆಗೆ ಹಚ್ಚುವಂತಿವೆ. ಈ ಪತ್ರಿಕೆಯ ಮುಖಾಂತರ ನಾಡಿನಲ್ಲಿ ವಿಭಿನ್ನ ನೆಲೆಯ ಚಿಂತನಾ ಕ್ರಮವನ್ನು, ಹರಿತವಾದ ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿ ಪೋಷಿಸುವ ನಿಮ್ಮ ಕೆಲಸಕ್ಕೆ ನಮ್ಮ ಬೆಂಬಲವಿದೆ. ಈ ಮೂಲಕ ಎರಡು ನೂರು ರೂಪಾಯಿಗಳ ಚಂದಾ ಕಳಿಸುತ್ತಿರುವೆ.

**-ಕಲ್ಲೇಶ ಕುಂಬಾರ್, ಹಾರೂಗೇರಿ**

ನವ ಮಾನವ ಸಮಾಜವಾದದ ಮುಖವಾಣಿಯಾದರೂ, ಸಂಪಾದಕರ ವ್ಯಕ್ತಿತ್ವದ ಹಾಗೆ, ರಾಜಕಾರಣವನ್ನು ಸಂಸ್ಕೃತಿ ಮುಖೇನ ನೋಡುವ ನಿಲುವು ಸರಿಯಾದುದೇ ಆಗಿದೆ. ಸಂಪಾದಕರ ಟಿಪ್ಪಣಿಗಳು ತನ್ನ ನೇರತೆ ಮತ್ತು ನಿಷ್ಠುರತೆಗಳಿಂದ ಗಮನ ಸೆಳೆದರೆ, 'ಕನ್ನಡ ಶಾಲೆಗಳ ಪುನರುಜ್ಜೀವನವೊಂದೇ ಉತ್ತರ' ಎಂಬ ಅನಿಸಿಕೆಯು ಒಂದು ದೃಷ್ಟಿಕೋನ ಅಷ್ಟೆ. ಇಡೀ ಸಮುದಾಯದ ಚಿಂತನೆ ರಾಜಕೀಯ ಇಚ್ಛಾಶಕ್ತಿಯಾಗಿ ಹೊಮ್ಮಿದಾಗಷ್ಟೇ ಇಂತಹ ರೋಗಗಳನ್ನು ಗುಣಪಡಿಸಲು ಸಾಧ್ಯ.

**-ವಸಂತಕುಮಾರ್ ಪೆರ್ಲ, ಮಂಗಳೂರು**

ಪತ್ರಿಕೆ ಇನ್ನಷ್ಟು ಕಡಿಮೆ ವಾಚ್ಯವಾಗಿರಬೇಕೆಂಬುದು ನನ್ನ ಅಭಿಲಾಷೆ.

**-ರಾಘವೇಂದ್ರ ಉಡುಪ (ಈ ಮೇಲ್ ಮೂಲಕ)**

ನವ ಮಾನವ ಮಾಸಿಕ ತಲುಪುತ್ತಿದೆ. ಎಲ್ಲ ಲೇಖನಗಳನ್ನೂ ಕುತೂಹಲದಿಂದ ಓದಿದೆ. ಉಪಯುಕ್ತ ಪತ್ರಿಕೆ. ನಿಮ್ಮ ಸಾಹಸ ಮೆಚ್ಚುವಂತಹದ್ದು. ಈ ಪತ್ರಿಕೆಯ ಓದಿನಿಂದ ಅರಿವು ಹೆಚ್ಚಾಗುತ್ತದೆ. ಚಿಂತನೆ ಹರಿತವಾಗುತ್ತದೆ. ಪ್ರತಿ ಲೇಖನವೂ ಪತ್ರಿಕೆಯ ಅಗತ್ಯವನ್ನು ಸಾರುತ್ತದೆ.

**-ಜಿ.ಬಿ.ವಿಸಾಜಿ, ಭಾಲ್ಕಿ**

ಪ್ರಿಯ ಡಿಎಸ್ಸೆನ್,

ಮಾನವ ಪತ್ರಿಕೆ ಹೊರಬರುತ್ತಿದ್ದ ದಿನಗಳಲ್ಲಿ ನನಗೆ ಅದರ ಪರಿಚಯವಿರಲಿಲ್ಲ. ಆದರೆ ಈಗ ನೀವು ಹೊರತರುತ್ತಿರುವ ನವ ಮಾನವ ನಮ್ಮ ಇವತ್ತಿನ ತುಂಬ ಮುಖ್ಯವಾದ ಕೊರತೆಯನ್ನು ತುಂಬುತ್ತಿದೆ. ನಿಮ್ಮ ನೇರ ನಡೆನುಡಿ ಮತ್ತು ಹರಿತವಾದ, ಆದರೆ ಆರ್ದ್ರವಾದ, ಚಿಂತನೆ ನನಗೆ ಯಾವತ್ತೂ ಇಷ್ಟವಾದುವು. ಕೆಲವೊಮ್ಮೆ ನೀವು ಬಿರುಸಾಗಿ ನುಡಿಯುತ್ತೀರಿ. ಆದರೆ, ಆಗಲೂ, ನಿಮ್ಮ ನಡೆಯಲ್ಲಿ ಸಾಚಾತನವೇ ಕಂಡುಬರುತ್ತದೆ. ಈ ಪತ್ರಿಕೆಯಲ್ಲಿ ಆ ಎಲ್ಲ ಗುಣಗಳೂ ಕಾಣಿಸಿಕೊಳ್ಳಲಿ.

ಲೋಹಿಯಾವಾದಿಗಳು ತಾವು ಎಂದು ಹೇಳಿಕೊಳ್ಳುವವರಲ್ಲಿ ಹಲವರು ತಮ್ಮ ನಡೆನುಡಿಯಲ್ಲಿ ಹಲವು ಬಾರಿ ತೀರ ಸಂಕುಚಿತವಾಗಿರುವುದನ್ನು ಕಾಣುತ್ತ ಬಂದಿದ್ದೇವೆ. ಜಾತಿ ವಿನಾಶವಾಗಬೇಕು ಅನ್ನುವವರೇ, ತಮಗಾಗದವರನ್ನು ಅವರ ಜಾತಿಯ ಹೆಸರು ಹಿಡಿದು ಹಂಗಿಸುವುದು, ಶಕ್ತಿ ರಾಜಕಾರಣ ಮತ್ತು ಅಗ್ಗದ ಸಾಂಸ್ಕೃತಿಕ ರಾಜಕಾರಣವನ್ನು ಮಾಡುವುದು, ಸಮಯಸಾಧಕರಾಗುವುದು ಮುಂತಾದ್ದನ್ನು ಕಾಣುತ್ತಬಂದಿದ್ದೇವೆ. ಇಂಥದಕ್ಕೆ, ತುಸುಮಟ್ಟಿಗೆ ಸರಿಯೇ ಅನ್ನಿಸುವ ಚಾರಿತ್ರಿಕ ಕಾರಣಗಳಿದ್ದಿರಬಹುದು. ಆದರೆ ಈಗ ಅಂಥದ್ದರಿಂದ ಬಿಡಿಸಿಕೊಂಡು, ತಿಳಿಯಾದ ಕಣ್ಣುಗಳಿಂದ, ಆಳದಿಟವಾದ ನೋಟದಿಂದ ನಮ್ಮೊಳಹೊರಗೆ ನಾವು ನೋಡಿಕೊಳ್ಳಬೇಕಾಗಿದೆ. ಯಾಕೆಂದರೆ, ನಾವು ನಮ್ಮ ಕಸುವನ್ನು ಸೋವಿಯಾದ ಜಗಳಗಳಲ್ಲಿ ಪೋಲುಮಾಡಿಕೊಳ್ಳದೇ, ಅರ್ಥವಿಲ್ಲದ ಜಾಗತೀಕರಣ, ಲಂಗುಲಗಾಮಿಲ್ಲದ ಉದಾರೀಕರಣ ಮತ್ತು ಹಗಲುದರೋಡೆಗೆ ಸಮನಾದ ಖಾಸಗೀಕರಣಗಳನ್ನು ಹೇಗೆ ಕೂಡಿ ಎದುರಿಸಬೇಕು, ಹೇಗೆ ಅವುಗಳ ವಿರುದ್ಧ ಹೋರಾಡಬೇಕು, ಹೇಗೆ ಅವುಗಳನ್ನು ನಿಭಾಯಿಸಬೇಕು ಎಂದು ಸತುಯುತವಾಗಿ ಕಂಡುಕೊಳ್ಳಬೇಕಾಗಿದೆ, ಬಾಳಬೇಕಾಗಿದೆ. ಅಂಥದ್ದರ ಕಡೆಗೆ ಈ ನವ ಮಾನವನು ನಮ್ಮನ್ನು ಕರೆದೊಯ್ಯಲಿ.

ಮಾಸಿಕದ ನಾಲ್ಕೂ ಸಂಚಿಕೆಗಳನ್ನು ಓದಿದ್ದೇನೆ. ಮೊದಲನೆಯ ಸಂಚಿಕೆಯಲ್ಲಿ ಬಂದ ಯೋಗೇಂದ್ರ ಯಾದವರ ಭಾಷಣದಲ್ಲಿನ ಚಿಂತನೆ ನನಗೆ ಇಷ್ಟವಾಯಿತು; ಹಾಗೆಯೇ, ಎರಡನೆಯ ಸಂಚಿಕೆಯಲ್ಲಿ ಬಂದ ತೋಂಟದಾರ್ಯ ಮಠದ ಸ್ವಾಮಿಗಳ ಸಂದರ್ಶನ ಮತ್ತು ಕಲಾವಿದ ಹುಸೇನರ ಸಂದರ್ಶನ ಕೂಡ. ಹುಸೇನರು ಲೋಹಿಯಾ ಅವರ ಸ್ನೇಹಿತರು ಮತ್ತು ಅವರಿಂದ ಸ್ಫೂರ್ತಿಪಡೆದರು ಅನ್ನುವ ಸಂಗತಿ ನನ್ನಮಟ್ಟಿಗೆ ಹೊಸತು! ಅಕ್ಟೋಬರ್ ತಿಂಗಳ ಸಂಚಿಕೆಯಲ್ಲಿ ಬಂದ ಗಾಂಧೀ-ಅಂಬೇಡ್ಕರ್ ವಾಗ್ವಾದ-ಸಂವಾದಗಳನ್ನು ಕುರಿತು ಲೇಖನ ತುಂಬ ಪ್ರಸ್ತುತವಾಗಿದೆ. ನವೆಂಬರ್ ಸಂಚಿಕೆಯಲ್ಲಿ, ಕನ್ನಡದ ಪ್ರಶ್ನೆ ಕುರಿತು ನೀವು ಆಡಿರುವುದು ನೂರಕ್ಕೆ ನೂರು ನಿಜ. ಕನ್ನಡದ ಒಬ್ಬ ದೊಡ್ಡ ವ್ಯಕ್ತಿ ಜಗತ್ತಿನ ಒಬ್ಬ ದೊಡ್ಡ ವ್ಯಕ್ತಿ; ಕರ್ನಾಟಕದಲ್ಲಿ ನಡೆವ ಒಂದು ದೊಡ್ಡ ಕೆಲಸ ಜಗತ್ತಿನ ದೊಡ್ಡ ಕೆಲಸ ಎಂದು ನಾನು ಕೂಡ ತಿಳಿದಿದ್ದೇನೆ.

ಇನ್ನು, ಸಿರಾಜ್ ಅಹಮದ್ ಅವರು ಅನುವಾದಿಸಿರುವ 'ಸಮಾಜವಾದಿಗಳೊಡನೆ ಮಹಾತ್ಮಾ ಗಾಂಧಿಯವರ ಮಾತುಕತೆ' ಲೇಖನಸರಣಿ ತುಂಬ ಮಾರ್ಮಿಕವಾಗಿದೆ.

ಆದಿವಾಸಿಗಳು ಮತ್ತು ಅರಣ್ಯ ಪರಿಸರಗಳನ್ನು ಕುರಿತು ಅಪೂರ್ವ ಡಿ'ಸಿಲ್ವ ಅವರು ಆರ್ತರಾಗಿ, ಆರ್ದ್ರವಾಗಿ ಬರೆಯುತ್ತಿದ್ದಾರೆ. ಅವರಿಗೆ ಅಭಿನಂದನೆಗಳು. ಆದರೊಂದು ಮಾತು. ಆಗಸ್ಟ್ ತಿಂಗಳ ಸಂಚಿಕೆಯಲ್ಲಿನ ಅವರ ಲೇಖನದ ತಲೆಬರಹ ನೋಡಿ. 'ಮುಗ್ಧ ಸೋಲಿಗರ ಲೋಕಕ್ಕೆ (ಅ)ನಾಗರಿಕರ ದಾಳಿ...' ಎಂಬಲ್ಲಿ, ಮುಗ್ಧ ಅನ್ನುವುದು ಸಲೀಸುಸಿದ್ಧವಾದ ಮಾತಾಯಿತು. ಇವತ್ತು, ಹಲವೆಡೆ, 'ಮುಗ್ಧ ಹಳ್ಳಿಗ', 'ಮಗುವಿನಂತೆ ಮುಗ್ಧ', 'ಮುಗ್ಧ ಹೆಂಗಸು' ಮುಂತಾದ ಮಾತುಗಳು ಕೇಳಿ ಬರುತ್ತವೆ, ಓದಲು ಸಿಕ್ಕುತ್ತವೆ. ಇಂಥವು ಯಾಕೆ ಸಲೀಸುಸಿದ್ಧ ಅನ್ನಿಸುತ್ತವೆ ಎಂದು ಕೊಂಚ ಯೋಚಿಸಿದರೆ ಸಾಕು, ತಿಳಿಯುತ್ತದೆ. ಇಂಥ ಮಾತುಗಳ ಹಿಂದೆಯಿರುವುದು ವಿವೇಚನೆಯ ಕೊರತೆಯೆಂದೇ ಹೇಳಬೇಕು. ಇನ್ನು, ರಾಜಾರಾಮ ತೋಳ್ಪಾಡಿ ಅವರ ಕನ್ನಡವು ಕೊಂಚ ಪೆಡಸಾಗಿದೆ. ಅವರು ತುಸು ತಿಳಿಯಾಗಿ, ಕನ್ನಡದಲ್ಲಿಯೇ ಯೋಚಿಸಿ, ಬರೆದರೆ ಚೆನ್ನು ಅನ್ನಿಸುತ್ತದೆ. ನನ್ನ ಈ ಮಾತುಗಳಿಂದ ಡಿ'ಸಿಲ್ವ ಮತ್ತು ತೋಳ್ಪಾಡಿ ಅವರು ಬೇಸರಪಟ್ಟುಕೊಳ್ಳದಿರಲಿ.

ನವ ಮಾನವಕ್ಕೆ ನನ್ನ ಶುಭಾಶಯಗಳು.

**ಬೆಂಗಳೂರು** **ರಘುನಂದನ**

# ಕುಪ್ಪಳಿಯಲ್ಲಿ ಮೂಡಿದ ಹೊಸ ಸಮಾಜವಾದದ ರೂಪುರೇಷೆಗಳು!



**ಸ**ಮಾಜವಾದದ ಕಾಲ ಮುಗಿಯಿತು ಎಂದು ನಿರ್ಣಯವಾದಂತೆ ಘೋಷಣೆಗಳು ಮೊಳಗುತ್ತಿರುವ ಹೊತ್ತಿನಲ್ಲಿ ಪ್ರಸ್ತುತ ಜಾಗತಿಕ ಸಮಸ್ಯೆಗಳಿಗೆ ಸಮಾಜವಾದವೇ ಪರಿಹಾರವಾಗಬಲ್ಲದು ಹಾಗೂ ಅದೇ ಪರ್ಯಾಯ ಎಂಬ ಚಿಂತನೆಗಳೂ ಮತ್ತೆ ಜಗತ್ತಿನಾದ್ಯಂತ ಕೇಳಿಬರತೊಡಗಿವೆ. ಈ ಸಂದರ್ಭದಲ್ಲಿ ಸಮಾಜವಾದದ ಚಿಂತನೆಯನ್ನು ಪುನರ್‌ಪರಿಶೀಲಿಸುವ ಅಗತ್ಯ ಎಲ್ಲೆಡೆ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ ತಿಂಗಳು ಕುಪ್ಪಳ್ಳಿಯಲ್ಲಿ ಸಾಗರದ *ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಕಾರದೊಂದಿಗೆ* ಆಯೋಜಿಸಿದ್ದ ಎರಡು ದಿನಗಳ ಸಮಾಜವಾದಿ ಅಧ್ಯಯನ ಶಿಬಿರದಲ್ಲಿ ಚರ್ಚಿತವಾದ ಚಿಂತನೆಗಳು ಗಮನಾರ್ಹವೆನಿಸಿದವು. ಶಿಬಿರದ ನಿರ್ದೇಶಕರಾದ ಡಿ.ಎಸ್.ನಾಗಭೂಷಣ ಹಾಗೂ ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ರಾಜಾರಾಂ ತೊಳ್ಪಾಡಿ, ರಾಘವೇಂದ್ರ ಪಾಟೀಲ, ಸಬಿತಾ ಬನ್ನಾಡಿ ಹಾಗೂ ದಿನೇಶ್ ಅಮೀನ್‌ಮಟ್ಟು ಅವರು ಈ ಸಂಬಂಧ ತಮ್ಮ ಚಿಂತನೆಗಳನ್ನು ಹಂಚಿಕೊಂಡರು. ಇಂದಿನ ಸಂದರ್ಭಕ್ಕೆ ಸಮಾಜವಾದಿ ವಿಚಾರಧಾರೆಯನ್ನು ಪ್ರಸ್ತುತಗೊಳಿಸಿಕೊಳ್ಳಲು ಸಮಾಜವಾದದ ಕೆಲವು ಆಧಾರ ಕಲ್ಪನೆಗಳ ಬಗ್ಗೆ ಪುನರಾಲೋಚಿಸುವ ಅಗತ್ಯವೆಷ್ಟು ಮತ್ತು ಅವನ್ನು ಹೇಗೆ ಪುನರ್‍ರೂಪಿಸಿಕೊಳ್ಳಬಹುದು ಎಂಬ ಬಗ್ಗೆ ಹಲವು ವಿಚಾರಗಳು ಈ ಕಾರ್ಯಕ್ರಮದಲ್ಲಿ ಪ್ರಸ್ತಾಪಿತವಾದವು. ಕರ್ನಾಟಕದ ವಿವಿಧ ಮೂಲೆಗಳಿಂದ ಬಂದಿದ್ದ ಸುಮಾರು ೮೦ಕ್ಕೂ ಹೆಚ್ಚು ವಿವಿಧ ವಯೋಮಾನಗಳ ಮತ್ತು ವೃತ್ತಿ ಹಿನ್ನೆಲೆಗಳ ಜನ ಈ ಶಿಬಿರದಲ್ಲಿ ಶಿಬಿರಾರ್ಥಿಗಳಾಗಿ ಪಾಲ್ಗೊಂಡಿದ್ದರು.

೨೩ರ ಬೆಳಿಗ್ಗೆ ರೈತ ಮುಖಂಡ ಕಡಿದಾಳು ಶಾಮಣ್ಣ ಶಿಬಿರವನ್ನು ಔಪಚಾರಿಕವಾಗಿ ಉದ್ಘಾಟಿಸಿದ ನಂತರ ಆರಂಭವಾದ ಮೊದಲ ಗೋಷ್ಠಿಯಲ್ಲಿ ಡಿ.ಎಸ್. ನಾಗಭೂಷಣ ಅವರು ಸಮಾಜವಾದಿ ಚಿಂತನೆಗಳು ಬೆಳೆದುಬಂದ ಬಗೆಯನ್ನು ಪರಿಚಯಿಸುತ್ತಾ ಶಿಬಿರಕ್ಕೆ ಸೂಕ್ತ ಹಿನ್ನೆಲೆ ಒದಗಿಸಿದರು. ಆದಿ ಮಾನವನ ಜೀವನ ಶೈಲಿಯಲ್ಲಿ ಕಂಡುಬರುವ ಸಮೂಹ ಪ್ರಜ್ಞೆಯ ರೂಪದಲ್ಲಿದ್ದ ಸಮಾನತೆ ಕ್ರಮೇಣ ಪಶುಪಾಲನೆ, ವ್ಯವಸಾಯ, ವಿವಿಧ ವೃತ್ತಿಗಳಲ್ಲಿ ವಿಸ್ತರಿಸಿಕೊಂಡು ಕುಟುಂಬ ಪದ್ಧತಿ ರೂಪಿತವಾದ ಹಿನ್ನೆಲೆಯಲ್ಲಿ ಅಧಿಕಾರ ಕೇಂದ್ರಿತ ವ್ಯವಸ್ಥೆ ನಿರ್ಮಾಣವಾಗಿ ಆ ಕಾರಣಕ್ಕಾಗಿಯೇ ಸಂಗ್ರಹ ಬುದ್ಧಿ, ಸ್ವಹಿತಾಸಕ್ತಿ, ಸ್ಪರ್ಧೆ, ಪರಸ್ಪರ ಅಸೂಯೆಗಳು ಬೆಳೆದವು. ಹೀಗೆ ಮಾನವ ಜೀವನದಲ್ಲಿ ವೈಯುಕ್ತಿಕತೆ ಚಿಗುರೊಡೆದು ಖಾಸಗಿ ಆಸ್ತಿಯ ಕಲ್ಪನೆ ಅಸ್ತಿತ್ವಕ್ಕೆ ಬಂದು ಸಮಾನತೆಯ ಅರಿವು ಮಸುಕಾಗುತ್ತಾ ಹೋಯಿತು. ಕ್ರಮೇಣ ಭೂಮಾಲಿಕತ್ವ ನಂತರ ಊಳಿಗಮಾನ್ಯ ವ್ಯವಸ್ಥೆ ಮತ್ತು ಈ ವ್ಯವಸ್ಥೆಗೆ ಒಂದು ಸ್ಥಿರತೆ ಒದಗಿಸಲು ಆವಿಷ್ಕಾರಗೊಳಿಸಲಾದ ಜಾತಿ ವ್ಯವಸ್ಥೆಯ ಮೂಲಕ ಶ್ರೇಣಿಕೃತ ಸಮಾಜ ರಚನೆಯಾಗಿ ಅಸಮಾನತೆ ಬೇರೂರುತ್ತಾ ಹೋಯಿತು. ನಂತರದ ದಿನಗಳಲ್ಲಿ ಈ ಅಸಮಾನತೆ ಶೋಷಣೆಯ ಕಲ್ಪನೆಗೆ ದಾರಿ ಮಾಡಿಕೊಟ್ಟು ಈ ಶೋಷಣೆಯಿಂದ ಶೋಷಿತರು ಒಂದಾಗಿ ಹೊಸ ವ್ಯವಸ್ಥೆಯ ಕನಸು ಕಂಡಿದ್ದೇ ಸಮಾಜವಾದದ ಹುಟ್ಟಿಗೆ ಕಾರಣವಾಯಿತು ಎಂದು ನಾಗಭೂಷಣ ವಿವರಿಸಿದರು.

ಫ್ರೆಂಚ್ ಕ್ರಾಂತಿ ನೀಡಿದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ ಎಂಬ ಮೌಲ್ಯಗಳೇ ಸಮಾಜವಾದದ ಆಧಾರ ನಂಬಿಕೆಗಳಾಗಿದ್ದು, ಇವು ಯೂರೋಪ್‌ನಲ್ಲಿ ವಿಕಾಸವಾದ ತತ್ವಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜಕೀಯಶಾಸ್ತ್ರಗಳ ಹೊಸ ಅಧ್ಯಯನಗಳಿಂದ ಪ್ರೇರಣೆ ಪಡೆದು, ಹೊಸ ಹೊಸ ಅರ್ಥವಿನ್ಯಾಸಗಳಿಗೆ ಸಿಕ್ಕಿದವು ಇದರ ಪರಿಣಾಮವಾಗಿ ಸಮಾಜವಾದದ ಬೇರೆ ಬೇರೆ ಆವೃತ್ತಿಗಳು ಸೃಷ್ಟಿಯಾದವು ಎಂಬುದನ್ನು ನಾಗಭೂಷಣ ಅವರು ಮುಖ್ಯವಾಗಿ ಹೆಗಲ್ ಮತ್ತು ಮಾರ್ಕ್ಸ್–ಏಗೆಂಲ್ಸರು ಮಾನವ ಚರಿತ್ರೆಯನ್ನು ಅರ್ಥ ಮಾಡಿಕೊಂಡ ರೀತಿಗಳನ್ನು ವಿಮರ್ಶೆ ಮಾಡುವ ಮೂಲಕ ವಿಶ್ಲೇಷಿಸಿದರು. ಹಾಗೇ ಯೂರೋಪಿನ ಶ್ಯಾಂ ಸಿಮೋಂ, ಶಾರ್ಲ್ ಫೂರಿಯೇ, ರಾಬರ್ಟ್ ಒವೆನ್, ಲೂಯಿ ಬ್ಲೋಂಕ್ ಮುಂತಾದ ಸಮಾಜವಾದಿ ಚಿಂತಕರ ಚಿಂತನೆಗಳನ್ನು ಪರಿಚಯ ಮಾಡಿಕೊಟ್ಟರು. ಜೊತೆಗೇ, ಭಾರತೀಯ ಸಮಾಜವಾದಿ ಆಂದೋಲನದ ಚರಿತ್ರೆಯನ್ನೂ ವಿವರಿಸುತ್ತಾ, ಗಾಂಧಿ ಪ್ರೇರಣೆಯಿಂದ ದೊರೆತ ಹೊಸ ಹೊಳಹುಗಳ ಮೂಲಕ ಭಾರತದ ಸಮಾಜವಾದಿಗಳು ವಸಾಹತುಶಾಹಿ ರಾಜಕಾರಣದ ಹಿನ್ನೆಲೆಯಲ್ಲಿ ಯೂರೋಪ್ ಪ್ರಣೀತ ಸಮಾಜವಾದಕ್ಕಿಂತ ಭಿನ್ನವಾದ, ಭಾರತೀಯವೆನ್ನಬಹುದಾದ ಸಮಾಜವಾದವನ್ನು ನಿರೂಪಿಸಿಕೊಂಡ ಬಗೆಗಳನ್ನು ವಿವರಿಸಿದರು.

ಪಶ್ಚಿಮದ ತಂತ್ರಜ್ಞಾನದ ನಿರಂತರ ಅನ್ವಯವನ್ನಾಧರಿಸಿದ ಸದಾ ಏರುತ್ತಾ ಹೋಗುವ ದಾಹ ಪ್ರಧಾನವಾದ ಜೀವನ ಮಟ್ಟಕ್ಕೆ ಪರ್ಯಾಯವಾಗಿ, 'ಇಷ್ಟು ಬೇಕು, ಇಷ್ಟು ಸಾಕು' ಎಂಬ ಪಾರಂಪರಿಕ ವಿವೇಕವನ್ನು ಆಧರಿಸಿದ ದೇಸಿ ತಂತ್ರಜ್ಞಾನ ಪ್ರೇರಿತವಾದ ಸರಳ ಸಭ್ಯ ಜೀವನಮಟ್ಟವನ್ನು ಪ್ರತಿಪಾದಿಸಿದ ರಾಮಮನೋಹರ ಲೋಹಿಯಾ ಪ್ರಣೀತ ಸಮಾಜವಾದವೇ ಭಾರತೀಯ ಸಮಾಜವಾದದ ಮುಖ್ಯ ಧಾರೆಯೆನಿಸಿದೆ. ಇದು ಭಾರತದ ಚರಿತ್ರೆಯ ಹಿನ್ನೆಲೆಯಲ್ಲಿ ಮಾರ್ಕ್ಸ್ ಮತ್ತು ಗಾಂಧಿ ಇಬ್ಬರ ಚಿಂತನೆಗಳನ್ನೂ ತೂಗಿ ನೋಡಿ ಹೊಸ ಮಾನವ ನಾಗರೀಕತೆಯ ಹೊಳಹುಗಳೊಂದಿಗೆ ರೂಪಿತವಾದ ವಿಚಾರಧಾರೆ. ಆದರೆ ಅದು ತಾನು ಎಲ್ಲ ರೀತಿಯ ಅಸಮಾನತೆಗಳ ವಿರುದ್ಧ ಹೋರಾಟದ ಮಾರ್ಗವಾಗಿ ಒಪ್ಪಿಕೊಂಡ ಸತ್ಯಾಗ್ರಹದ ಮೂಲ ಕಲ್ಪನೆಗೆ ವಿರುದ್ಧವಾಗಿ ಶೋಷಿತರ ಬಗೆಗಿನ ಕರುಣೆಯ ಜೊತೆಗೆ ಶೋಷಕರ ಬಗೆಗಿನ ಕ್ರೋಧವನ್ನೂ ತನ್ನ ಸಿದ್ಧಾಂತವಾಗಿ ಒಪ್ಪಿಕೊಂಡಿದ್ದರಿಂದ ಅದು ತನ್ನ ಕೇಂದ್ರವನ್ನು ಕಳೆದುಕೊಂಡಿತು ಎಂದು ಅವರು ವಿಶ್ಲೇಷಿಸಿದರು. ಹಾಗಾಗಿ ಮತ್ತೆ ಗಾಂಧಿಗೆ–ಮುಖ್ಯವಾಗಿ ಅವರ 'ಹಿಂದ್ ಸ್ವರಾಜ್'ನ ಪುನರಾವಲೋಕನಕ್ಕೆ–ಮರಳುವ ಮೂಲಕ ಮತ್ತು ಗ್ರಾಮದ ಕಲ್ಪನೆ ಮತ್ತು ವಿಕೇಂದ್ರಿಕೃತ ಅಭಿವೃದ್ಧಿ ಮಾದರಿ ಕುರಿತಂತೆ ಅಂಬೇಡ್ಕರ್ ಎತ್ತಿದ ಪ್ರಶ್ನೆಗಳನ್ನು ಮುಖಾಮುಖಿಯಾಗುವ ಮೂಲಕ ಭಾರತೀಯ ಸಮಾಜವಾದ ತನ್ನನ್ನು ತಾನು ಮುರಿದು ಕಟ್ಟಿಕೊಳ್ಳಬೇಕಾಗಿದೆ ಎಂದು ಅವರು ಸೂಚಿಸಿದರು. ಲೋಹಿಯಾ ಎತ್ತಿ ಹಿಡಿದ ಮಿತಿಗಳುಳ್ಳ ಬದುಕು ಭಾರತೀಯ ಸಮಾಜವಾದದ ಹೆಗ್ಗುರುತಾಗಬೇಕು ಮತ್ತು ಆ ಮೂಲಕ ಹೊಸ ನೈತಿಕತೆಯ ಹರಿಕಾರನಾಗಬೇಕು ಎಂದು ನಾಗಭೂಷಣ ಪ್ರತಿಪಾದಿಸಿದರು.



ರಾಜಾರಾಂ ತೋಳ್ಪಾಡಿ

ಮಧ್ಯಾಹ್ನದ ಊಟದ ನಂತರ ಆರಂಭವಾದ ಎರಡನೇ ಗೋಷ್ಠಿಯಲ್ಲಿ ರಾಜಾರಾಂ ತೋಳ್ಪಾಡಿ ಚರಿತ್ರೆಯನ್ನು ಗ್ರಹಿಸುವ ಈವರೆಗಿನ ಕ್ರಮಗಳ ಬಗ್ಗೆ ಮಾತನಾಡಿ ಸಮಾಜವಾದವನ್ನು ಇಂದಿಗೆ ಪ್ರಸ್ತುತಗೊಳಿಸಿಕೊಳ್ಳುವಲ್ಲಿ ಈ ಕ್ರಮದ ಬದಲಾವಣೆಯ ಅಗತ್ಯವನ್ನು ಒತ್ತಿ ಹೇಳಿದರು. ಸಮಾಜವಾದ ಒಂದು ಐರೋಪ್ಯ ವಿದ್ಯಮಾನವಾಗಿ ಹೇಗೆ ಆಧುನಿಕತೆಯ ಉತ್ಪನ್ನವಾಗಿದೆ ಎಂಬುದನ್ನು ಅವರು ಆಧುನಿಕತೆಯನ್ನು ವೈಜ್ಞಾನಿಕತೆ, ಚಾರಿತ್ರಿಕತೆ ಮತ್ತು ಪ್ರಗತಿಪರತೆ ಎಂಬ ಅದರ ಮೂರು ಮುಖಗಳನ್ನು ಪರಿಚಯ ಮಾಡಿಕೊಡುವ ಮೂಲಕ ವಿವರಿಸಿದರು. ನಾವು ಚರಿತ್ರೆಯ ಉತ್ಪನ್ನವೇ? ಚರಿತ್ರೆಯ ಹಂಗಿಲ್ಲದೇ ಬದುಕಲು ಸಾಧ್ಯವೇ? ಎಂಬ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಾ ಹೆಗಲ್, ಮಾರ್ಕ್ಸ್ ಮುಂತಾದ ಪಾಶ್ಚಿಮಾತ್ಯ ಚಿಂತಕರು ಯೂರೋಪಿನ

ಪುನರುಜ್ಜೀವನ ಯುಗದ ಚಿಂತನಾ ಲಹರಿಯಿಂದ ಪ್ರಭಾವಿತರಾಗಿ ಚರಿತ್ರೆಯನ್ನು ಆಧುನಿಕತೆಯ ಮಿಕ್ಕೆರಡು ಮುಖಗಳ–ವೈಜ್ಞಾನಿಕತೆ ಮತ್ತು ಪ್ರಗತಿಪರತೆಗಳ–ಪರಿಪ್ರೇಕ್ಷ್ಯದಲ್ಲಿ ಗ್ರಹಿಸಿ ಕಟ್ಟಿದರು ಎಂದು ಹೇಳಿದರು. ಹಾಗಾಗಿ ಅವರು ಪ್ರಜ್ಞೆ ಮತ್ತು ಪರಿಸರಗಳ ದ್ವಂದ್ವಾತ್ಮಕತೆಯಲ್ಲಿ ಚರಿತ್ರೆ ಕಟ್ಟಲ್ಪಡುತ್ತದೆ ಎಂದು ಭಾವಿಸಿದರು. ಆದರೆ ಈ ಸರಳ ರೇಖಾತ್ಮಕ ಚರಿತ್ರೆಯ ಗ್ರಹಿಕೆಗಿಂತ ಭಿನ್ನವಾಗಿ ಯೂರೋಪಿನವನೇ ಆದ ಸ್ಪೆಂಗ್ಲರ್ ಚರಿತ್ರೆಯನ್ನು ಕಾಲದ ಆವರ್ತನದ ರೂಪದಲ್ಲಿ ಕಾಣುವ ಪ್ರಯತ್ನ ಮಾಡಿದರು. ಇದರಿಂದ ಪ್ರಭಾವಿತರಾಗಿದ್ದ ಲೋಹಿಯಾ ನಾಗರೀಕತೆಗಳ ಏಳು ಬೀಳುಗಳ ಹಿಂದಿನ ಶಕ್ತಿಗಳ ಅಧ್ಯಯನ ಮಾಡಿ ಇತಿಹಾಸ ಚಕ್ರದ ಕಲ್ಪನೆ ನೀಡಿ, ಈ ಇತಿಹಾಸ ಚಕ್ರದ ಕೀಲು ಮುರಿಯುವ ರಾಜಕೀಯ ತತ್ವಜ್ಞಾನದ ಭಾಗವಾಗಿ ಮಾನವ ಜನಾಂಗದ ಭೌತಿಕ ಮತ್ತು ಮಾನಸಿಕ ಸಮೀಪೀಕರಣ ಮತ್ತು ಸಮಗ್ರೀಕರಣ ತತ್ವಗಳನ್ನಾಧರಿಸಿದ ಜಾಗತಿಕ ಸಮಾಜವಾದಿ ನಾಗರೀಕತೆಯ ಹೊಳಹು ನೀಡಿದರು ಎಂದು ತೋಳ್ಪಾಡಿ ವಿವರಿಸಿದರು.

ಈ ಸಂದರ್ಭದಲ್ಲಿ ಇತಿಹಾಸವನ್ನು ಕುರಿತ ಗಾಂಧೀಜಿಯವರ ನಿಲುವನ್ನು ಪ್ರಸ್ತಾಪಿಸಿದ ರಾಜಾರಾಂ, ಆಧುನಿಕ ಜಗತ್ತಿನಲ್ಲಿ ಚರಿತ್ರೆಯ ಜಿಜ್ಞಾಸೆಗೆ ಹೋಗದೆ, ಹೊಸ ಜಗತ್ತನ್ನು ಕಟ್ಟಲು ಯತ್ನಿಸಿದ ಏಕೈಕ ದಾರ್ಶನಿಕ ಗಾಂಧಿ ಎಂದರು. ಅವರ ಚಿಂತನೆಯ ಕೇಂದ್ರ ಕಾಳಜಿ ಹಳ್ಳಿಯಾಗಿದ್ದು, ಅದು ಇತಿಹಾಸದ ಹಳ್ಳಿಯಾಗಿರದೆ ಭವಿಷ್ಯದ ಹಳ್ಳಿಯಾಗಿತ್ತು ಎಂಬುದನ್ನು ಅವರು ಶಿಬಿರಾರ್ಥಿಗಳ ಗಮನಕ್ಕೆ ತಂದರು. ಇವರಿಂದ ಭಾಗಶಃ ಪ್ರಭಾವಿತರಾಗಿದ್ದ ಲೋಹಿಯಾ ಚರಿತ್ರೆಯನ್ನು ಪೂರ್ಣ ನಿರಾಕರಿಸದೆ, ಮನುಷ್ಯ ಪ್ರಜ್ಞೆ ಚರಿತ್ರೆಯ ಪರಿಧಿಯಾಚೆಗೂ ಜಿಗಿಯಬಲ್ಲುದು ಎಂಬ ಅರಿವಿನಲ್ಲಿ ಯೂರೋಪಿನ ತತ್ವ ಚಿಂತಕರನ್ನು, ವಿಶೇಷವಾಗಿ ಮಾರ್ಕ್ಸ್‌ವಾದಿ ಭೌತ ಚಿಂತನೆಯನ್ನು ಪ್ರಶ್ನಿಸಲು ಸಾಧ್ಯವಾಯಿತು ಎಂದು ತೋಳ್ಪಾಡಿ ಹೇಳಿದರು. ಈ ಎಲ್ಲ ವಿಚಾರಗಳ ಬೆಳಕಿನಲ್ಲಿ ಹೊಸ ಸಮಾಜವಾದ ಇತಿಹಾಸ ಕುರಿತ ತನ್ನ ನಿಲುವನ್ನು ಪುನರ್ರೂಪಿಸಿಕೊಳ್ಳಬಹುದಾಗಿದೆ ಎಂದು ಅವರು ಸೂಚಿಸಿದರು.

ನಂತರದ ಮೂರನೇ ಗೋಷ್ಠಿಯಲ್ಲಿ ರಾಘವೇಂದ್ರ ಪಾಟೀಲರು 'ತಂತ್ರಜ್ಞಾನ–ಅಭಿವೃದ್ಧಿ–ಹಿಂಸೆ' ಎಂಬ ವಿಷಯ ಕುರಿತು ಮಾತನಾಡಿ, ವಿಜ್ಞಾನದ ಅನ್ವಯವೇ ತಂತ್ರಜ್ಞಾನವೆನಿಸಿದ್ದು, ಈ ಅನ್ವಯಕ್ಕೆ ಬೇಕಾದ ಹಣವನ್ನು ಆರಂಭದಿಂದಲೂ ಬಂಡವಾಳಶಾಹಿ ಒದಗಿಸಲಾರಂಭಿಸಿದ ಕಾರಣದಿಂದಾಗಿ ಆಧುನಿಕ ತಂತ್ರಜ್ಞಾನವೆಂಬುದು ತನ್ನ ಸ್ವಾಯತ್ತೆಯನ್ನು ಕಳೆದುಕೊಂಡು ಮಾರುಕಟ್ಟೆಯ ಸಾಧನವಾಗಿ ಬೆಳೆದಿದೆ ಎಂದು ವಿಶ್ಲೇಷಿಸಿದರು. ಹಾಗಾಗಿ ತಂತ್ರಜ್ಞಾನ ನೀತಿ ನಿರಪೇಕ್ಷವಾಗಿಯೇ ಉಳಿದು ಜಗತ್ತಿನಲ್ಲಿ ರಾಜಕೀಯ ಬಲಶಾಲಿಗಳ ಪ್ರಬಲ ಅಸ್ತ್ರವಾಗಿದೆ ಎಂದು ಅವರು ಸೂಚಿಸಿದರು. ತಂತ್ರಜ್ಞಾನ ದಿನೇ ದಿನೇ ಮಾನವ ನಿಯಂತ್ರಣದ ಕೈತಪ್ಪಿ ಹೋಗುವ ದಿಕ್ಕಿನಲ್ಲಿ ಮತ್ತು ಗತಿಯಲ್ಲಿ ಬೆಳೆಯುತ್ತಿರುವುದರ ಉದಾಹರಣೆಯಾಗಿ ಅವರು, ನಾಗಸಾಕಿ ಮೇಲೆ ಅಣು ಬಾಂಬ್ ಹಾಕಿದ ಅಮೆರಿಕಾದ ಪೈಲಟ್ ಪಾಪಪ್ರಜ್ಞೆಯಿಂದ ನರಳಿ ಆತನಿಗೆ ಹುಚ್ಚು ಹಿಡಿದರೆ, ವಿಯಟ್ನಾಮ್ ಮೇಲೆ ಅಷ್ಟೇ ವಿನಾಶಕಾರಿ ಬಾಂಬ್ ಹಾಕಿದ ಪೈಲಟ್‌ಗೆ ಏನೇನೂ ಅನ್ನಿಸದಿದ್ದುದರ ವಿಪರ್ಯಾಸವನ್ನು ಶಿಬಿರಾರ್ಥಿಗಳ ಗಮನಕ್ಕೆ ತಂದರು. ಇದಕ್ಕೆ ಕಾರಣ, ನಾಗಸಾಕಿ ಮೇಲೆ ಪೈಲಟ್ ನೇರವಾಗಿ ತಾನೇ ಬಾಂಬ್ ಬಿಡುಗಡೆ ಮಾಡಿದ್ದರೆ, ವಿಯಟ್ನಾಮಿನ ಮೇಲೆ ಹಾಕಿದ್ದ ಬಾಂಬ್ ಗಣಕೀಕೃತ ಕಾರ್ಯಕ್ರಮದ ಪ್ರಕಾರ ನಿಗದಿತ ಸಮಯ ಮತ್ತು ಸ್ಥಳದಲ್ಲಿ ತಂತಾನೇ ಬಿಡುಗಡೆಗೊಂಡು ಅದನ್ನು ಹೊತ್ತಿದ್ದ ವಿಮಾನದ ಪೈಲಟ್‌ನನ್ನು ಅದರ ಪಾಪ–ಪುಣ್ಯಗಳ ಜವಾಬ್ದಾರಿಯಿಂದ ಮುಕ್ತಗೊಳಿಸಿತ್ತು. ಹೊಸ ಸಮಾಜವಾದವೆಂಬುದು ಹೊಸ ರಾಜಕೀಯ ಚಿಂತನೆ ಮಾತ್ರವಾಗದೆ, ಹೊಸ ನೈತಿಕತೆಯ ಅನ್ವೇಷಣೆಯಲ್ಲೂ ತೊಡಗಿ, ಅದರ ಭಾಗವಾಗಿ ತಂತ್ರಜ್ಞಾನವನ್ನು ಸಮಾಜದ ಅಗತ್ಯ ಮತ್ತು ಪೂರೈಕೆಗಳ ನಡುವಣ ಸಂಬಂಧಗಳೊಡನೆ ಬಂಧಿಸಿಡುವಂತಹ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾಗಿದೆ ಎಂದು ಪಾಟೀಲರು ಅಭಿಪ್ರಾಯಪಟ್ಟರು.

೨೪ರ ಬೆಳಿಗ್ಗೆ ಮೊದಲ ಗೋಷ್ಠಿಯಲ್ಲಿ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸೆಕ್ಯುಲರಿಸಂ ಕುರಿತಂತೆ ರಾಜಾರಾಂ ತೋಳ್ಪಾಡಿ ಮತ್ತು ಆನಂತರ ಡಿ.ಎಸ್.ನಾಗಭೂಷಣ ಮಾತನಾಡಿದರು. ರಾಷ್ಟ್ರದ ಕಲ್ಪನೆ ಪ್ರಾಚೀನವಾದರೂ, ರಾಷ್ಟ್ರ ಪ್ರಭುತ್ವ ಮತ್ತು ಅದಕ್ಕೆ ಆಧಾರವಾದ ರಾಷ್ಟ್ರೀಯತೆಯ ಕಲ್ಪನೆಗಳು ಆಧುನಿಕತೆಯ ಫಲಗಳಾಗಿದ್ದು, ಅದರ ಮೌಲ್ಯಗಳಾದ ವೈಜ್ಞಾನಿಕತೆ, ಚಾರಿತ್ರಿಕತೆ ಮತ್ತು ಪ್ರಗತಿಪರತೆಗಳನ್ನು ನೆಚ್ಚಿಕೊಂಡು ಮೂಡಿದ ಹೊಸ ಅಧಿಕಾರ ರೂಪವೇ ರಾಷ್ಟ್ರಪ್ರಭುತ್ವ ಎಂದು ತೋಳ್ಪಾಡಿ ವಿವರಿಸಿದರು. ಈ ರಾಷ್ಟ್ರಪ್ರಭುತ್ವದ ರಚನೆಗಳಿಗೆ ಕಾರಣವಾದ ರಾಷ್ಟ್ರೀಯತೆಯ ಆಂದೋಲನಗಳು, ಯಾವ ಧರ್ಮದ ನಿಯಂತ್ರಣದಿಂದ ಬಿಡುಗಡೆ ಮಾಡಿ ಈ ರಾಷ್ಟ್ರ ಪ್ರಭುತ್ವಗಳಿಗೆ ಆಧುನಿಕ ರೂಪ ನೀಡಿದವೋ ಆ ಧರ್ಮಕ್ಕಿಂತ ಹೆಚ್ಚು ರಕ್ತಪಾತಕ್ಕೆ ಕಾರಣವಾಗಿವೆ ಎಂದು ಅವರು ಹೇಳಿದರು. ಏಕೆಂದರೆ ಈ ಆಧುನಿಕ ರಾಷ್ಟ್ರ ಪ್ರಭುತ್ವಗಳು ನಿಖರ ಗಡಿ, ನಿಖರ ಸಾಂಸ್ಕೃತಿಕ ಅಸ್ಮಿತೆ ಮತ್ತು ಅವನ್ನು ಕಾಪಾಡಿಕೊಳ್ಳಲು ನಿರ್ದಿಷ್ಟ ರೂಪದ ಅಧಿಕಾರದ ಕೇಂದ್ರೀಕರಣವನ್ನು ಬೇಡುತ್ತವೆ ಎಂದು ಅವರು ಸೂಚಿಸಿದರು. ಗಾಂಧಿ ಇಂತಹ ರಾಕ್ಷಸ ರಾಷ್ಟ್ರೀಯತೆಯನ್ನೇ ನಿರಾಕರಿಸಿ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ನಮ್ಮ ಮುಂದಿಟ್ಟರು. ಲೋಹಿಯಾ ವಿಮರ್ಶಾತ್ಮಕ ರಾಷ್ಟ್ರೀಯತೆಯ ಪ್ರತಿಪಾದಕರಾಗಿ, ಅಧಿಕಾರದ ವಿಕೇಂದ್ರೀಕರಣದ ಮಾದರಿಯಾಗಿ ಚತುಸ್ತಂಭ ರಾಷ್ಟ್ರದ ಕಲ್ಪನೆ ನೀಡಿದರು ಎಂದರು. ಹಾಗೇ ಅವರು ಸೆಕ್ಯುಲರಿಸಂನ ಪ್ರಸ್ತಾಪ ಮಾಡಿ, ಭಾರತದಲ್ಲಿ ಇದನ್ನು ಜಾತ್ಯತೀತತೆ ಅಥವಾ ಧರ್ಮ ನಿರಪೇಕ್ಷತೆ ಎಂದು ಕರೆಯುವ ಬದಲಾಗಿ ಪಂಥ ನಿರಪೇಕ್ಷತೆ ಅಥವಾ ಪಂಥಾತೀತತೆ ಎಂದು ಕರೆಯುವುದು ಸಮರ್ಪಕ ಎಂದು ಅಭಿಪ್ರಾಯಪಟ್ಟರು.

ತೋಳ್ಪಾಡಿಯವರ ಮಾತುಗಳನ್ನು ಮುಂದುವರೆಸಿದ ನಾಗಭೂಷಣ ಅವರು, ಸೆಕ್ಯುಲರಿಸಂ ಕೂಡಾ ಆಧುನಿಕ ರಾಷ್ಟ್ರ ಪ್ರಭುತ್ವದ ಜೊತೆಗಾರನಾಗಿ ಹುಟ್ಟಿದ್ದು, ಅದು ಯೂರೋಪಿನ ಚಾರಿತ್ರಿಕ ಅನಿವಾರ್ಯತೆಯಲ್ಲಿ ರೂಪಿತವಾದ ತತ್ವವಾಗಿದೆ ಎಂದು ಹೇಳುತ್ತಾ, ಅದನ್ನು ನಾವು ಯಥಾವತ್ತಾಗಿ ಒಪ್ಪಿಕೊಂಡ ಫಲವಾಗಿ ನಮ್ಮ ರಾಷ್ಟ್ರಜೀವನದಲ್ಲಿ ಅನೇಕ ಗೊಂದಲಗಳಾಗಿವೆ ಎಂದು ಅಭಿಪ್ರಾಯಪಟ್ಟರು. ಯೂರೋಪಿನ ಚರ್ಚ್ ಕೇಂದ್ರಿತ ಧರ್ಮಕ್ಕೂ ಏಷ್ಯಾದ ಬಹು ಸಂಪ್ರದಾಯಗಳ ಒಕ್ಕೂಟದಂತಿರುವ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸೂಚಿಸಿದ ಅವರು, ಭಾರತೀಯನ ವ್ಯಕ್ತಿತ್ವ ಪಂಥೀಯತೆಯ ಸೋಂಕಿಲ್ಲದ ಧಾರ್ಮಿಕ ಅನುಸಂಧಾನದಲ್ಲಿ ರೂಪಿತವಾಗಿದ್ದು, ಇದಕ್ಕೆ ಭಂಗ ಬಾರದಂತೆ ನಾವು ಸೆಕ್ಯುಲರಿಸಂ ತತ್ವವನ್ನು ಪುನರ್ರೂಪಿಸಬೇಕಾಗಿದೆ ಎಂದರು. ಮುಂದುವರೆದ ಅವರು, ಸಾವರ್ಕರ್ ಒಟ್ಟಿಗೇ ನಿರೀಶ್ವರವಾದಿಯೂ, ರಾಷ್ಟ್ರೀಯವಾದಿಯೂ, ವಿಜ್ಞಾನವಾದಿಯೂ ಆಗಿದ್ದು, ಅಂತಹವರ ಕೈಯಲ್ಲಿ ಇವುಗಳ ಜೊತೆಗಾರ ಈ ಸೆಕ್ಯುಲರಿಸಂ ಕೂಡಾ ಸೇರಿ ಇಂದು ಭಾರತದ ಒಂದು ಜಾಗತಿಕ ಶಕ್ತಿಯಾಗುವ ತನ್ನ 'ಪ್ರಗತಿಪರ' ಕಾರ್ಯಕ್ರಮದ ಭಾಗವಾಗಿ ಎಂತಹ ಒಂದು ಪರ್ಯಾಯ ರಾಷ್ಟ್ರಪ್ರಭುತ್ವದ ಕನಸನ್ನು ಕಾಣತೊಡಗಿದೆ ಎಂಬುದನ್ನು ನೆನೆಸಿಕೊಂಡರೆ ಭಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜಕಾರಣವನ್ನು ಅಲ್ಪಕಾಲಿಕ ಧರ್ಮವೆಂದೂ, ಧರ್ಮವನ್ನು ದೀರ್ಘಕಾಲಿಕ ರಾಜಕಾರಣವೆಂದೂ ಕರೆದ ಗಾಂಧಿ 'ದೇವರು ಸತ್ಯ' ಎಂಬ ಪಾರಂಪರಿಕ ನಂಬಿಕೆಯನ್ನು 'ಸತ್ಯವೇ ದೇವರು' ಎಂದು ತಲೆಕೆಳಗು ಮಾಡಿ, ಈ ಸತ್ಯದ ಅನ್ವೇಷಣೆಯೇ ಧರ್ಮ ಎಂದು ವ್ಯಾಖ್ಯಾನಿಸಿದ್ದನ್ನೂ ಶಿಬಿರಾರ್ಥಿಗಳ ಗಮನಕ್ಕೆ ತಂದು ಧರ್ಮ ಕುರಿತ ಯೂರೋಪಿಯನ್ನರ ಕಲ್ಪನೆಯನ್ನು ತ್ಯಜಿಸದ ಹೊರತು ಸೆಕ್ಯಲರಿಸಂ ನಮಗೆ ಒಂದು ಅರ್ಥಪೂರ್ಣವಾದ ತತ್ವವೆನಿಸಲಾರದು ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಪೂರಕವಾಗಿ ಲೋಹಿಯಾ ನಮ್ಮ ಧಾರ್ಮಿಕ ಪರಂಪರೆಯನ್ನು ನೋಡಿದ ಸ್ಪಂದನಶೀಲ ರೀತಿ–ನೀತಿಗಳನ್ನು ವಿವರಿಸಿದ ನಾಗಭೂಷಣ ಅವರು, ಸಮಾಜವಾದ ಧರ್ಮ ಕುರಿತಂತೆ ಐರೋಪ್ಯ ರಾಜಕಾರಣದಂತೆ ಸಾರಾ ಸಗಟಾದ ಅವಿಮರ್ಶಾತ್ಮಕ ನಿಲುವನ್ನು ತಳೆಯಬಾರದೆಂಬ ಲೋಹಿಯಾ ಅವರ ಎಚ್ಚರಿಕೆಯ ಮಾತನ್ನು ನೆನಪಿಸಿಕೊಂಡರು.

ಸಂಸದೀಯ ಪ್ರಜಾಪ್ರಭುತ್ವವನ್ನು ಆಧುನಿಕ ರಾಷ್ಟ್ರಪ್ರಭುತ್ವದ ಒಂದು ಮಾದರಿ ಆಡಳಿತ ವಿಧಾನವನ್ನಾಗಿ ಒಪ್ಪಿಕೊಂಡ ನಾವು ಇಂದು ಈ ಸಂಸದೀಯ ಪ್ರಜಾಪ್ರಭುತ್ವ ತನ್ನ ಪ್ರಾತಿನಿಧಿಕತೆಯ ಎಲ್ಲ ನೆಲೆಗಳನ್ನೂ ವಿವಿಧ ರೂಪಗಳ ಭ್ರಷ್ಟತೆಯ ಕಾರಣದಿಂದಾಗಿ ಕಳೆದುಕೊಂಡು ಅನುಮಾನಾಸ್ಪದವಾಗಿರುವ ದುರಂತವನ್ನು ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಾಗಭೂಷಣ ವಿವರಿಸಿದರು. ಈ ವ್ಯವಸ್ಥೆಯಲ್ಲಿ ಪ್ರಜೆಗೂ ಪ್ರಭುತ್ವಕ್ಕೂ ಯಾವುದೇ ಸಾವಯವ ಸಂಬಂಧವಿಲ್ಲದಾಗಿ ಹೋಗಿರುವ ಈ ಸಂದರ್ಭದಲ್ಲಿ, ನೀತಿ ನಿರ್ಧಾರಗಳಲ್ಲಿ ಪ್ರಜೆ ಆದಷ್ಟೂ ಹೆಚ್ಚು ನೇರವಾಗಿ ಭಾಗವಹಿಸಲು ಸಾಧ್ಯವಿರುವ ಹೆಚ್ಚು ಸ್ವಾಯತ್ತತೆಯುಳ್ಳ ಸಣ್ಣ ಆಡಳಿತ ಘಟಕಗಳಾಗಿ ವಿಕೇಂದ್ರೀಕೃತಗೊಂಡ ರಾಜ್ಯಗಳ

ಒಕ್ಕೂಟವಾಗಿ ಮಾತ್ರ ಭಾರತ ಪ್ರಜಾಪ್ರಭುತ್ವವಾಗಿ ಉಳಿಯಬಲ್ಲುದೇನೋ ಎಂದರು. ಈ ಬಗ್ಗೆ ಸಮಾಜವಾದಿ ಚಿಂತನೆ ಗಾಂಧಿ ಮತ್ತು ಲೋಹಿಯಾರ ವಿಚಾರಗಳ ಬೆಳಕಿನಲ್ಲಿ ತನ್ನನ್ನು ತಾನು ಹೊಸ ಆಲೋಚನೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಅವರು ಸೂಚಿಸಿದರು.

ನಂತರದ ನಾಲ್ಕನೆಯ ಗೋಷ್ಠಿಯಲ್ಲಿ 'ಭಾಷೆ, ಸ್ತ್ರೀ ಮತ್ತು ಸಂಸ್ಕೃತಿ" ಕುರಿತಂತೆ ಸಬಿತಾ ಬನ್ನಾಡಿಯವರು ಮಾತನಾಡಿ ಭಾಷೆ, ಸ್ತ್ರೀ ಮತ್ತು ಸಂಸ್ಕೃತಿಗಳನ್ನು ಕುರಿತ ಇಂದಿನ ಬಿಕ್ಕಟ್ಟುಗಳನ್ನು ಅಲ್ಲಮನ 'ಒಳಗಣ ರಣರಂಗ ಹೊರಗಣ ಶೃಂಗಾರ' ಎಂಬ ಮಾತುಗಳು ಸಮರ್ಪಕವಾಗಿ ನಿರೂಪಿಸುತ್ತವೆ ಎಂದರು. ಭಾರತದ ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಸುಧಾರಣಾವಾದದ ಅಂಗವಾಗಿ ಹೊಮ್ಮಿದ ಹಲವು ವಿಚಾರಗಳು ಮುಂದೆ ತಮ್ಮ ಗಮ್ಯವನ್ನು ಸರಿಯಾಗಿ ತಲುಪಲಾಗಲಿಲ್ಲ. ಬಂಡವಾಳಶಾಹೀ ತಳಪಾಯದ ಮೇಲೆ ಸಮಾಜವಾದದ ಕಟ್ಟಡ ಕಟ್ಟಲು ಹೊರಟ ಸ್ವತಂತ್ರ ಭಾರತದ ವಿರೋಧಾಭಾಸದ ರಾಜಕಾರಣದ ಫಲ ಇದಾಗಿದೆ. ಇದರಿಂದಾಗಿ ಇಂದು ನಮ್ಮನ್ನಾಳುತ್ತಿರುವುದು ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಯಾರೂ ಅಲ್ಲ – ನಮ್ಮನ್ನಾಳುತ್ತಿರುವುದು ಮಾರುಕಟ್ಟೆ. ಆದ್ದರಿಂದ ಇಲ್ಲಿ ಸಂಸ್ಕೃತಿ, ಸ್ತ್ರೀ ಮತ್ತು ಭಾಷೆಗೆ ಸಂಬಂಧಪಟ್ಟ ಚಿಂತನೆಗಳು ಮಾರುಕಟ್ಟೆ ರಾಜಕಾರಣದ ಭಾಷೆಗೆ ತಕ್ಕಂತೆ ರೂಪಿತಗೊಳ್ಳುತ್ತಿವೆ. ಭಾಷೆ, ಸ್ತ್ರೀ ಮತ್ತು ಸಂಸ್ಕೃತಿ ಈ ಮೂರೂ ಕಲ್ಪನೆಗಳು ಇಂದು ಖಾಸಗೀಕರಣಗೊಳ್ಳುತ್ತಿವೆ. ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಇವುಗಳ ನಿರೂಪಣೆಯಾಗುತ್ತಿರುವುದರಿಂದಲೇ ಇವು ಪ್ರಗತಿಪರ ಮುಖ ತೊಟ್ಟಂತೆ ಭಾಸವಾದರೂ ಇಂದು ನವ ಪಾಳೆಗಾರಿಕೆಯ ಚಿಂತನೆಯನ್ನು ಪೋಷಿಸುವ ಸಾಧನಗಳಾಗಿ ಪರಿವರ್ತಿತವಾಗುತ್ತಿವೆ. ಇದು ಸ್ತ್ರೀಪರ ಚಿಂತಕರು, ಶಿಕ್ಷಣ ತಜ್ಞರು ಮತ್ತು ಸಂಸ್ಕೃತಿ ವಕ್ತಾರರು ನಾವು ಹಾದು ಬಂದ ಆಧುನಿಕತೆಯ ಹಾದಿಯ ಬಗ್ಗೆ ಪುನರಾಲೋಚನೆ ಮಾಡಬೇಕಾದ ಸಂಧಿ ಕಾಲ. 'ವೈಯಕ್ತಿಕ ಸಂಪತ್ತಿಗೆ ಬದಲಾಗಿ ಸಾಮೂಹಿಕ ಸಂಪತ್ತನ್ನು ವೃದ್ಧಿಸಲು ಹೊರಟರೆ ಮಾತ್ರ ಏನಾದರೂ ಬೆಳಕು ಕಂಡೀತು' ಎಂಬ ಲೋಹಿಯಾರ ಮಾತಿನ ಹಿನ್ನೆಲೆಯಲ್ಲಿ ಏನಾದರೂ ಸಂಘಟಿತ ಪ್ರಯತ್ನ ಮಾಡಿದರೆ ಮಾತ್ರ ಪರಿಸ್ಥಿತಿ ಬದಲಾಗಬಹುದು ಎಂದು ಸಬಿತಾ ಅಭಿಪ್ರಾಯಪಟ್ಟರು.


ಸಬಿತಾ ಬನ್ನಾಡಿ

ಐದನೇ ಗೋಷ್ಠಿಯಲ್ಲಿ 'ಸಾಮಾಜಿಕ ನ್ಯಾಯ: ಮರುನೋಟ ಅಗತ್ಯವೇ?' ಎಂಬ ವಿಷಯದ ಬಗ್ಗೆ ಮಾತನಾಡಿದ ದಿನೇಶ್ ಅಮೀನ್‌ಮಟ್ಟು ಅವರು ಸಾಮಾಜಿಕ ನ್ಯಾಯವೆಂಬುದು ಸಮಾಜವಾದದ ತಿರುಳಾಗಿದ್ದು, ಇಂದು ಅದು ಸಾಕಷ್ಟು ವಿವಾದಾತ್ಮಕವಾಗಿದ್ದು, ಅದರ ಬಗ್ಗೆ ಮುಕ್ತ ಮನಸ್ಸಿನಿಂದ ಚಿಂತಿಸಬೇಕಿದೆ ಎಂದರು. ಇಂದು ಜಾತಿ ಆಧಾರಿತ ಮೀಸಲಾತಿಯೇ ಸಾಮಾಜಿಕ ನ್ಯಾಯದ ಏಕೈಕ ಸಾಧನವೆಂಬಂತೆ ಪ್ರತಿಬಿಂಬಿತವಾಗುತ್ತಿದ್ದು, ಸಹಭೋಜನ, ಅಂತರ್ಜಾತೀಯ ವಿವಾಹ, ಭೂಸುಧಾರಣೆ ಮುಂತಾದವುಗಳು ಹಿನ್ನೆಲೆಗೆ ಸರಿದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಮೀಸಲಾತಿ ಜಾತಿ ಪಟ್ಟಿಗೆ ನಮ್ಮ ರಾಜಕೀಯ ನಾಯಕರ ರಾಜಕೀಯ ಹಿತಾಸಕ್ತಿಗೆ ತಕ್ಕಂತೆ ಅನರ್ಹ ಜಾತಿಗಳೂ ಅಧಿಕೃತವಾಗಿ ಸೇರ್ಪಡೆಗೊಳ್ಳುತ್ತಿದ್ದು, ಆಡಳಿತದಲ್ಲಿನ ಭ್ರಷ್ಟತೆಯಿಂದಾಗಿ ಸುಳ್ಳು ಜಾತಿ ಪತ್ರಗಳ ಹಾವಳಿ ಪರಿಸ್ಥಿತಿ ಬಿಗಡಯಿಸುವಂತೆ ಮಾಡಿದ್ದು, ಮೀಸಲಾತಿ ಒಂದು ಸಾಮಾಜಿಕ ನ್ಯಾಯ ಸಾಧನವಾಗಿ ತನ್ನ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು. ಮೀಸಲಾತಿ ಐತಿಹಾಸಿಕವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ ಉಂಟಾಗಿದ್ದ ಸಾಮಾಜಿಕ ಉನ್ನತಿಯ ಅವಕಾಶಗಳ ಅಸಮತೆಯನ್ನು ಸರಿಪಡಿಸುವ ಸಂವಿಧಾನಾತ್ಮಕ ಮಾರ್ಗವಾಗಿದ್ದು;ಹಾಗಾಗಿ ಇದರ ತಾತ್ವಿಕ ಗುರಿ ಜಾತಿ ವಿನಾಶವಾಗಿತ್ತು. ಆದರೆ ಇಂದು ಮೀಸಲಾತಿ ಜಾತಿ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಎಲ್ಲ ಸೂಚನೆಗಳೂ ಕಾಣತೊಡಗಿದ್ದು ಇದು ಆತಂಕಕಾರಿ ಸಂಗತಿಯಾಗಿದೆ ಎಂದರು.

ಇದಕ್ಕೆ ಮುಖ್ಯ ಕಾರಣ ಮೀಸಲಾತಿಯ ಪ್ರಯೋಜನ ಪಡೆದವರು ಜಾತ್ಯತೀತರಾಗದೆ, ವ್ಯವಸ್ಥೆಯ ಭಾಗವಾಗುತ್ತಿರುವುದು ಎಂದು ಅಮೀನ್‌ಮಟ್ಟು ಅಭಿಪ್ರಾಯಪಟ್ಟರು. ಉದಾಹರಣೆಯಾಗಿ ಕರ್ನಾಟಕದ ಸಾಮಾಜಿಕ ನ್ಯಾಯ ಕಾರ್ಯಕ್ರಮದ ಫಲಾನುಭವಿಗಳು ಏಕೆ ಈವರೆಗೆ ಸರ್ಕಾರಿ ವಲಯದ ಹೊರಬಂದು ಒಂದು ಜಾತ್ಯತೀತ ಮಾದರಿಯ ಉದ್ಯಮವನ್ನು ಸ್ಥಾಪಿಸಲಾಗಿಲ್ಲ ಎಂದು ಅವರು ಪ್ರಶ್ನಿಸಿದರು. ಹಾಗೇ ಸಾಮಾಜಿಕ ಅನ್ಯಾಯಕ್ಕೆ ಒಳಗಾದವರೆಂದು ಹೇಳಿಕೊಳ್ಳುವ ಸಮುದಾಯದವರು ಇಂದು ಅತಿ ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳನ್ನು ಇಂತಹ ಸಾಮಾಜಿಕ ಅನ್ಯಾಯದ ತತ್ವವನ್ನು ಪೋಷಿಸುವುದೆಂದು ಹೇಳಲಾಗುವ ರಾಜಕೀಯ ಪಕ್ಷಕ್ಕೇಕೆ ಆಯ್ದು ಕಳಿಸಿದ್ದಾರೆ ಎಂಬುದನ್ನೂ ಯೋಚಿಸಬೇಕು ಎಂದು ಸೂಚಿಸಿದರು. ಜಾತಿ ವಿನಾಶದ ಕಾರ್ಯಕ್ರಮಕ್ಕೆ ತಮ್ಮ ಸಮಾಜವಾದಿ ಕಾರ್ಯಕ್ರಮಗಳಲ್ಲಿ ಮುಖ್ಯ ಸ್ಥಾನ ನೀಡಿದ್ದ ಲೋಹಿಯಾ ಶೂದ್ರ ಜಾತಿಗಳ ಈ ಪ್ರವೃತ್ತಿ ಬಗ್ಗೆ ಎಚ್ಚರಿಕೆ ನೀಡಿದ್ದರು ಎಂಬುದನ್ನು ದಿನೇಶ್ ನೆನಪಿಸಿದರು. ಶೂದ್ರ ಜಾತಿಗಳು ಒಂದು ಹಂತದಾಚೆ ಸರ್ಕಾರದ ಕೃಪಾಶ್ರಯದಲ್ಲೇ ಸುಕ್ಷೇಮವಾಗಿ ಇರಬಯಸುವುದನ್ನು ಬಿಟ್ಟು ಸ್ವತಂತ್ರ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳದ ಹೊರತು ಸಾಮಾಜಿಕ ನ್ಯಾಯ ಕಾರ್ಯಕ್ರಮ ತನ್ನ ಉದ್ದೇಶಿತ ಗುರಿಮುಟ್ಟಲಾರದು ಎಂದು ಅವರು ಹೇಳಿದರು.

ಮೀಸಲಾತಿ ಕಾರ್ಯಕ್ರಮದಲ್ಲಿ ಎಲ್ಲ ವರ್ಗಗಳಲ್ಲೂ ಕೆನೆ ಪದರ ನಿಯಮವನ್ನು ಜಾರಿಗೆ ತಂದು, ಮೀಸಲಾತಿ ಜಾತಿ ಪಟ್ಟಿಯನ್ನು ಕಾಲಾನುಕಾಲಕ್ಕೆ ವೈಜ್ಞಾನಿಕ ಸಮೀಕ್ಷೆಗಳ ಮೂಲಕ ಪುನರ್ವಿಮರ್ಶಿಸುತ್ತಾ, ಖಾಸಗಿ ವಲಯದಲ್ಲೂ ಮೀಸಲಾತಿಯಲ್ಲದಿದ್ದರೂ, ಅಮೆರಿಕಾದಲ್ಲಿರುವಂತೆ ಸಾಮಾಜಿಕ ವೈವಿಧ್ಯತೆ ನೀತಿಯನ್ನು ಜಾರಿಗೆ ತಂದು, ಅಂತರ್ಜಾತೀಯ ವಿವಾಹಗಳಿಗೆ ವಿಶೇಷ ಪ್ರೋತ್ಸಾಹ ನೀಡುವ ಮೂಲಕ ಸಾಮಾಜಿಕ ನ್ಯಾಯ ಕಾರ್ಯಕ್ರಮವನ್ನು ಮತ್ತೆ ವಿಶ್ವಾಸಾರ್ಹಗೊಳಿಸಿ ಸಮಾಜವಾದವನ್ನು ಹೊಸ ದಿಕ್ಕಿನಲ್ಲಿ ಬೆಳೆಸಬಹುದು ಎಂದು ದಿನೇಶ್ ಅಭಿಪ್ರಾಯಪಟ್ಟರು.


ದಿನೇಶ್ ಅಮೀನ್‌ಮಟ್ಟು

ಪ್ರತಿ ಗೋಷ್ಠಿಯ ನಂತರ ಶಿಬಿರಾರ್ಥಿಗಳಿಂದ ಚರ್ಚೆಗೆ ಮತ್ತು ಮುಕ್ತ ಸಂವಾದಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಶಿಬಿರದ ಪ್ರಾಸ್ತಾವಿಕ ಮಾತುಗಳಲ್ಲಿ ಶಿಬಿರದ ನಿರ್ದೇಶಕ ಡಿ.ಎಸ್. ನಾಗಭೂಷಣ ಅವರು ಹೇಳಿದಂತೆ, ಈ ಶಿಬಿರದ ಮುಖ್ಯ ಉದ್ದೇಶ ನಮ್ಮ ಸಮಾಜವಾದಿ ಪರಂಪರೆಯತ್ತ ಒಂದು ಹಿನ್ನೋಟ ಬೀರಿ ಹೊಸ ಸಮಾಜವಾದದ ರೂಪುರೇಷೆಗಳನ್ನು ಗುರುತಿಸುವುದಾಗಿತ್ತೇ ಹೊರತು ಅದರ ಅಂತಿಮ ನೀಲ ನಕ್ಷೆ ತಯಾರಿಸುವುದಾಗಿರಲಿಲ್ಲ. ಈ ದಿಕ್ಕಿನಲ್ಲಿ ಶಿಬಿರ ಸಾಕಷ್ಟು ಸಫಲವಾಯಿತೆಂದೇ ಹೇಳಬೇಕು. ೨೧ರ ಸಂಜೆ ತೀರ್ಥಹಳ್ಳಿ ಕ್ಷೇತ್ರದ ಶಾಸಕ ಕಿಮ್ಮನೆ ರತ್ನಾಕರ ಅವರ ಸಮಾರೋಪದ ಮಾತುಗಳೊಂದಿಗೆ ಶಿಬಿರ ಔಪಚಾರಿಕವಾಗಿ ಮುಕ್ತಾಯಗೊಂಡಿತು.

**–ಬಿ.ಪಿ.ವೀರೇಂದ್ರಕುಮಾರ್**

ಪ್ರಿಯ ಓದುಗರೇ,

ನಿಮಗೆ ಪತ್ರಿಕೆ ಇಷ್ಟವಾಗಿದ್ದರೆ, ಚಂದಾ ಕಳಿಸಿ. ನಿಮ್ಮ ಗೆಳೆಯರನ್ನೂ ಚಂದಾದಾರರನ್ನಾಗಿ ಮಾಡಿ ಸಹಕರಿಸಿ. ಕನಿಷ್ಟ ಚಂದಾ ನೂರು ರೂಪಾಯಿಗಳು. ಹೆಚ್ಚಿನ ಹಣವನ್ನು ಪೋಷಕ ನಿಧಿಗೆ ನೀಡಬಹುದು. ಚಂದಾ ಅಥವಾ ಪೋಷಕ ನಿಧಿಗೆ ದೇಣಿಗೆಯನ್ನು ಪತ್ರಿಕೆಯ ಸಂಪಾದಕರ ವೈಯುಕ್ತಿಕ ಹೆಸರಿಗೆ ಎಂ.ಓ ಮಾಡಬಹುದು ಅಥವಾ ಚೆಕ್/ ಡಿ.ಡಿ. ಮೂಲಕ ಪತ್ರಿಕೆಯ ಮುಖಪುಟದಲ್ಲಿರುವ ವಿಳಾಸಕ್ಕೆ ಕಳಿಸಬಹುದು.–ಸಂ.

## ಪ್ರವಾಸಿ (ಸವಿತಾ) ಕಂಡ ಇಂಡಿಯಾ–೪

# ತಾಯಿ ದುರ್ಗೆಯ ನಿಜವನರಿಯುವ ಧೀರರಾರೋ ಜಗದೊಳು!



'ಅಗೋ ಅದೇ ದಕ್ಷಿಣೇಶ್ವರದ ಕಾಳಿ ದೇವಾಲಯ' ಎಂದು ನಮ್ಮ ಟೂರ್ ಮ್ಯಾನೇಜರ್ ಕೈದೋರಿದ. ಅವನು ತೋರಿದ ದಾರಿಯತ್ತ ಹೆಜ್ಜೆ ಹಾಕಿದರೆ, ಎದುರುಗೊಂಡದ್ದು ಭರ್ಜರಿ ಮಾರಾಟ ಮೇಳ! ಭೇಲ್ ಪುರಿ, ಪಾನಿಪುರಿ, ಪೆಪ್ಸಿ–ಮಿರಿಂಡಾದಿಂದ ಹಿಡಿದು ಹೂವು–ಕುಂಕುಮ–ಕರ್ಪೂರದವರೆಗೆ ಲೋಕದ ಸಕಲೆಂಟು ವಸ್ತುಗಳೂ ಅಲ್ಲಿ ಬಿಕರಿಗಿದ್ದವು. ಈ ಹೊತ್ತಿನ ದೇವಾಲಯಗಳೆಂದರೆ ಇವೇ ಇರಬೇಕು ಎಂದುಕೊಳ್ಳುತ್ತಾ, ಅದನ್ನೇ ಹೊಕ್ಕು ಬಳಸಿ ಮುನ್ನಡೆದಾಗ ಮಾರಾಟ ಮೇಳದ ಗುಡಾರಗಳ ಮರೆಯಲ್ಲಿ ರಾಣಿ ರಾಸಮಣಿ ಕಟ್ಟಿಸಿದ ಕಾಳಿ ದೇವಾಲಯ ಗೋಚರಿಸಿತು!

ಸಿಮೆಂಟಿನ ನೆಲ ಕಾದು ಕೊಂಡದಂತಾಗಿತ್ತಷ್ಟೆ. ನಾವು ರಣ ಬಿಸಿಲಿನಲ್ಲಿ ಕೊಂಡ ಹಾಯುವಂತೆ ಮೆಟ್ಟಿಲುಗಳ ಮೇಲೆ ಹಾರುತ್ತಾ ಸುಡು ಪಾದಗಳನ್ನೆತ್ತಿಕೊಂಡು ಕಾಳಿ ಮಾತೆಯ ಮುಂದೆ ಹೋಗಿ ನಿಂತೆವು. ದೇವಿಯ ದರುಶನ ಪಡೆಯಲು ಜನಸ್ತೋಮ ಯರ್‍ರಾಬಿರ್‍ರಿಯಾಗಿ ಚಲಿಸುತ್ತಿತ್ತು. ಸಕ್ಕರೆಗೆ ಇರುವೆಗಳು ಮುತ್ತಿಕೊಂಡಂತೆ ಭಕ್ತರು ದೇವಿಯನ್ನು ಸುತ್ತುವರೆದಿದ್ದರು. ದೇವಿಯೇನು ಓಡಿ ಹೋಗುವಳೇ? ಇದೇಕೆ ಜನ ಅವಳನ್ನು ಸುತ್ತುವರೆದಿದ್ದಾರೋ ಎಂದು ಮನಸ್ಸಿನಲ್ಲಿ ಅಂದುಕೊಂಡರೂ, ಹತ್ತಿರ ಹೋಗಿ ನೋಡುವ ಹಂಬಲದಿಂದ ಮುನ್ನುಗ್ಗಿದೆನು. ನನ್ನ ಪ್ರಯತ್ನವಿಲ್ಲದೆಯೇ ಭಕ್ತರೇ ನೂಕಿ ನೂಕಿ ನನ್ನನ್ನು ದೇವಿಯ ಮುಂದೆ ನಿಲ್ಲಿಸಿದರು! ಅವಳು ದುರು ದುರು ಎಂದೂ ನೋಡುತ್ತಿದ್ದಳು, ನಾಲಿಗೆ ಚಾಚಿ ಬೆಚ್ಚಿ ಬೀಳಿಸುತ್ತಿದ್ದಳು. ನೆರೆದ ಭಕ್ತರೆಲ್ಲ ತಾಯ ಮುಂದೆ ನಿಂತ ಮಕ್ಕಳಂತೆ ಎತ್ತಿಕೋ ಎತ್ತಿಕೋ ಎಂದು ಆರ್ತನಾದ ಮಾಡುತ್ತಿರುವಂತೆ ಅನಿಸುತ್ತಿತ್ತು.

ಹೌದು, ವ್ಯಾಕುಲತೆಯಿಂದ ಪ್ರಾರ್ಥಿಸಬೇಕು. ಪರಮಹಂಸರ ನುಡಿಗಳು ನನ್ನೊಳಗೆ ಅನುರಣಿಸುತ್ತಿದ್ದವು. ಭಕ್ತರ ಚೇಷ್ಟೆಗಳನ್ನು ಕುತೂಹಲದಿಂದ ವೀಕ್ಷಿಸುವುದರಲ್ಲೇ ಆಸ್ಥೆ ಇದ್ದ ನನಗೆ ವ್ಯಾಕುಲತೆಯಾದರೂ ಎಲ್ಲಿಂದ ಬರಬೇಕು? ಲೇಶ ಭಕುತಿಯಾದರೂ ಇದ್ದಿದ್ದರೆ! ನಂಬದೆ ನೆಚ್ಚದೆ ಬರಿದೇ ಕರೆಯುತ್ತಿರುವೆನೆ? 'ಕಪಟಿಯ ಲೆಕ್ಕಾಚಾರದ ಬುದ್ಧಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ. ಶ್ರದ್ಧಾವಂತನಾಗಿಯೂ ಇರಬೇಕು. ಯಾವ ರೀತಿ ಮಗು ತನ್ನ ತಾಯಿಯನ್ನು ಕಾಣದೆ ದಿಗ್ಭ್ರಮೆಗೊಂಡು, ಅದರ ಬಾಯಿಗೆ ಸಕ್ಕರೆ ಮಿಠಾಯಿ ಹಾಕಿದರೂ ಅದೊಂದೂ ಅದಕ್ಕೆ ಬೇಡವಾಗಿ; ಏನೂ ಬೇಡ, ನಾನು ತಾಯಿಯ ಹತ್ತಿರ ಹೋಗಬೇಕು ಅಂತ ಹಂಬಲಿಸುವುದೋ ಅದೇ ರೀತಿ ಭಗವಂತನನಿಗಾಗಿ ಮನುಷ್ಯ ವ್ಯಾಕುಲ ಪಡಬೇಕು. ಆಹಾ! ಎಂತಹ ಅವಸ್ಥೆ! ಯಾವುದರಿಂದಲೂ ಅದು ತನ್ನ ತಾಯಿಯನ್ನು ಮರೆಯದು! ಯಾರಿಗೆ ಈ ಜಗತ್ತಿನ ಹಣ–ಹೆಸರು–ಸುಖಭೋಗಗಳು ರುಚಿಸವೋ, ಆತ/ಆಕೆ ಹೃತ್ಪೂರ್ವಕವಾಗಿ ಭಗವಂತನ ದರ್ಶನಕ್ಕಾಗಿ ಹಂಬಲಿಸುವನು. ಅಂತಹವರಿಗಾಗಿ ಭಗವತಿ ತನ್ನ ಎಲ್ಲ ಕೆಲಸಗಳನ್ನೂ ಬಿಟ್ಟೇ ಓಡಿ ಬರಬೇಕಾಗುತ್ತದೆ'. ಈ ಗುರು ವಾಕ್ಯದಲ್ಲಿ ವಿಶ್ವಾಸ ಬರಲು ಇನ್ನೂ ಎಷ್ಟು ಜನ್ಮಗಳನ್ನು ಎತ್ತಬೇಕೋ ಎಂದುಕೊಳ್ಳುತ್ತಾ ಸುಮ್ಮನೆ ತಲೆ ಬಾಗಿಸಿ ಕೈಮುಗಿದು ನಿಂತೆನು.

**ತಾಯಿ ದುರ್ಗೆಯ ನಿಜವನರಿಯುವ**
**ಧೀರರಾರೋ ಜಗದೊಳು!**
**ಆರು ದರುಶನ ವೇದಶಾಸ್ತ್ರ**
**ಪುರಾಣವರಿಯದು ಅವಳನು**
**ಕುಬ್ಜನಾದವ ಮುಗಿಲ ಚಂದ್ರನ**
**ಹಿಡಿವ ಯತ್ನದ ತೆರೆದಲಿ**
**ಬುದ್ಧಿಯರಿತರೂ ಹೃದಯವರಿಯದು**
**ತಾಯಿ ದುರ್ಗೆಯ ನಿಜವನು!**



ನೆನಪಿನ ಗಣಿಯಿಂದ ಈ ಹಾಡನ್ನು ಹೆಕ್ಕಿ ತೆಗೆದು ಮೆಲುಕು ಹಾಕಿದೆನು. ರಾಮಕೃಷ್ಣ ಪರಮಹಂಸರು ಪ್ರೇಮೋನ್ಮತ್ತರಾಗಿ ಭವತಾರಿಣಿಯ ಮುಂದೆ ಮತ್ತೆ ಮತ್ತೆ ಹಾಡುವ ಹಾಡಿದು ಎಂದು ಮಾಸ್ಟರ್ ಮಹಾಶಯ 'ವಚನವೇದ'ದಲ್ಲಿ ದಾಖಲಿಸಿರುವನಷ್ಟೆ. ಈ ಕವಿತೆಯ ಚುಂಬಕ ಶಕ್ತಿಯೇ ನಾನು ಇಂದು ಇಲ್ಲಿ ಹೀಗೆ ನಿಂತಿರುವುದಕ್ಕೆ ಕಾರಣ ಎಂದು ಆ ಕ್ಷಣ ನನಗೆ ಬೋಧೆಯಾಯಿತು. ಕಾಳಿಯ ಬಗ್ಗೆ ಇರುವ ವ್ಯಾಕುಲತೆಗಿಂತ ಕವಿತೆಯನ್ನು ಬೆನ್ನಟ್ಟುವ ಹಂಬಲವೇ ಹೆಚ್ಚು ಪ್ರಿಯವಾದದ್ದು ಎಂದೂ ನನಗೆ ಸ್ಪಷ್ಟವಾಯಿತು.

**ಅವ್ವಾ ನನ್ನನ್ನು ಎತ್ತಿಕೋ**
**ನಿನ್ನ ಹೆಗಲ ಮೇಲೆ ಹಾಕಿಕೋ**
**ಒಂದು ಮುತ್ತುಕೊಡು ಸಾಕು**
**ಜೀವ ಬಿಡುವೆನು...**

'ಜೀವ್ ಸೊಡ್ತಾ' ಎಂದು ತಾಯ ಮುಂದೆ ತಾಯಿ ಭಾಷೆಯಲ್ಲೇ ಮಾತು ಪೋಣಿಸಿದ್ದೆ. ಎದೆಯ ಭಾಷೆಯೇ ಎದೆಯ ಹಾಲಿನಂತೆ ಮಿಗಿಲೆಂದು ತಿಳಿಯಲು ತಜ್ಞರ ಸಮಿತಿ, ಕೋರ್ಟು–ಕಛೇರಿ ಬೇಕಾಗಿಲ್ಲವಷ್ಟೆ! ಬಾಯಿಂದ ರಕ್ತದ ಕೋಡಿ, ಕೊರಳಿಗೆ ರುಂಡಮಾಲೆ, ಸೊಂಟಕ್ಕೆ ನರಹಸ್ತಗಳ ಒಡ್ಯಾಣ! ನಾನು ಕಾಳಿಯನ್ನು ನೋಡುತ್ತಾ ಮೈಮರೆತೆ. ಈ ಕಾಳಿಯೇ ಅಲ್ಲವೇ, ರಾಮಕೃಷ್ಣರನ್ನು ಹರಸಿದ್ದು? ಈ ಕಾಳಿಯೇ ಅಲ್ಲವೇ, ವಿವೇಕಾನಂದರನ್ನು ಪೊರೆದದ್ದು? ಈ ಕಾಳಿಯೇ ಅಲ್ಲವೇ ಕುವೆಂಪು ಅವರನ್ನು ಕರೆದದ್ದು? ಅವರನ್ನು ನೋಡಿದ ಆ ಕಣ್ಣುಗಳೇ ನನ್ನನ್ನೂ ನೋಡುತ್ತಿರುವುದು? ತರತಮವಿಲ್ಲದ ತಾಯಿಭಾವ... ಯಾವ ದೇಶ, ಯಾವ ಕಾಲ? ಜೀವನ ಪ್ರವಾಹದಲ್ಲಿ ಈ ಚಣವೂ ಒಂದು ಬಿಂದು! ಏನೆಲ್ಲ ಅಂದುಕೊಳ್ಳುತ್ತಾ ಸುತ್ತಮುತ್ತ ನೋಡಿದೆ. ಭಕ್ತಿ ಪರಾಕಾಷ್ಠೆಯ ವಿವಿಧ ಭಾವ ಭಂಗಿಗಳು ಭಕ್ತಿಯ ಹೊಳೆಯಲ್ಲಿ ಹೂಗಳಂತೆ ತೇಲುತ್ತಾ ಕಾಳಿ ನದಿಯನ್ನು ಸೇರುತ್ತಿದ್ದವು. ಭವತಾರಿಣಿಗೆ ನಮಸ್ಕರಿಸಿ ಭಕ್ತರಿಂದ ನೂಕಿಸಿಕೊಳ್ಳುತ್ತಲೇ ಹೊರಬಂದು ಹಗಲೂ ಇರುಳೂ ಜಪತಪಗೈದ ಕಾಳಿಯನ್ನು ಧೇನಿಸಿದ ಶಿಷ್ಯರನ್ನೂ ಭಕ್ತರನ್ನೂ ಸೇವಿಸಿದ ಪರಮಹಂಸರ ಕೊಠಡಿಗೆ ಹೋಗಿ ಒಂದು ಮೂಲೆಯಲ್ಲಿ ಕುಳಿತೆನು. ನನ್ನ ಜೀವನದಲ್ಲೇ ಆ ದಿನ ಸ್ಮರಣೀಯ ದಿನ. ಪರಮಹಂಸರ ಕೊಠಡಿಯ ಎದುರಲ್ಲೇ ಶಾರಾದಾದೇವಿಯವರ ಪುಟ್ಟ ಕೊಠಡಿಯೂ(ನಹಬತ್ ಖಾನೆ) ಇತ್ತು. ಶಾರದಾ ದೇವಿಯನ್ನು ಪರಮಹಂಸರು ಜಗನ್ಮಾತೆಯೆಂದು ಪೂಜಿಸುತ್ತಿದ್ದರಷ್ಟೆ. ಆ ಅರ್ಥದಲ್ಲಿ ಅದು ಜಗನ್ಮಾತೆಯ ಕೊಠಡಿ. ಸರಿಯಾಗಿ ಗಾಳಿ ಬೆಳಕಿಲ್ಲದ, ಕೈಕಾಲು ಚಾಚಲೂ ಸಾಧ್ಯವಾಗದಂತಹ ಕೊಠಡಿ ಎಂದು ಕುವೆಂಪು ವಿಷಾದದಿಂದ 'ನೆನಪಿನ ದೋಣಿ'ಯಲ್ಲಿ ದಾಖಲಿಸುತ್ತಾರೆ. ಜಗನ್ಮಾತೆಯಾದರೆ ಏನಂತೆ? ಅವಳು ಕೊನೆಗೂ ಹೆಣ್ಣು ಎಂದುಕೊಳ್ಳುತ್ತಾ, ಕಿರಿದಾದರೂ ಸರಿಯೇ, ಸದ್ಯ ಅವಳಿಗೆ ತನ್ನದೇ ಆದ ಜಾಗ ಇತ್ತಲ್ಲ ಎಂದು ಸಮಾಧಾನಪಟ್ಟುಕೊಂಡು ಅಲ್ಲಿಂದ ಹೊರಬಂದೆನು.

**–ಸವಿತಾ ನಾಗಭೂಷಣ**

ಸಮಕಾಲೀನ

# ವಾಲ್ ಸ್ಟ್ರೀಟ್ ಮುತ್ತಿಗೆ: ಬಂಡವಾಳಶಾಹಿಗೊಂದು ಪರ್ಯಾಯದ ಹುಡುಕಾಟ

ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವಾದಿ ಚಳುವಳಿಗಳನ್ನು ಪ್ರಾಯೋಜಿಸುತ್ತಿರುವ ಅಮೆರಿಕಾದಲ್ಲೇ ಈಗ ನಿಜ ಪ್ರಜಾಪ್ರಭುತ್ವಕ್ಕಾಗಿ ಒಂದು ದೊಡ್ಡ ಚಳುವಳಿ ಆರಂಭವಾಗಿದೆ! 'ವಾಲ್ ಸ್ಟ್ರೀಟ್' ಮುತ್ತಿಗೆ' ಎಂಬ ಹೆಸರಿನಿಂದ ಈಗ ಜಗತ್ತಿನ ಗಮನ ಸೆಳೆದಿರುವ ಈ ಚಳುವಳಿ ಅಲ್ಲಿನ ಬಂಡವಾಳಶಾಹಿ ಅರ್ಥ ವ್ಯವಸ್ಥೆ ಸೃಷ್ಟಿಸಿರುವ ಸಾಮಾಜಿಕ ಅಸ್ತವ್ಯಸ್ತತೆಗಳ ಪರಿಣಾಮವಾಗಿ ಆರಂಭವಾಯಿತಾದರೂ, ಅದೀಗ 'ಪರ್ಯಾಯ ಜಗತ್ತು ಸಾಧ್ಯ' ಎಂಬ ಜಾಗತಿಕ ರಾಜಕಾರಣವನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯಬಯಸುವ ಚಳುವಳಿಯಾಗಿ ಮಾರ್ಪಾಡಾಗಿದೆ. ತನ್ನನ್ನು ತಾನು 'ಶೇ.೯೯'ರ ಚಳುವಳಿ ಎಂದು ಕರೆದುಕೊಳ್ಳುವ ಈ ಮುತ್ತಿಗೆ ಕಾರ್ಯಕ್ರಮ ಜಾಗತೀಕರಣದ ಮೂಲಕ ಈಗ ಮುಕ್ತ ಮಾರುಕಟ್ಟೆ ಆರ್ಥಿಕತೆಯ ರೂಪ ಪಡೆದಿರುವ ಕಾರ್ಪೋರೇಟ್ ಬಂಡವಾಳಶಾಹಿಯು ಶೇ೧ರಷ್ಟು ಜನರ ಪ್ರಜಾಪ್ರಭುತ್ವವನ್ನು ಸೃಷ್ಟಿಸಿ ಪ್ರಜಾಪ್ರಭುತ್ವದ ಮೂಲ ಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿದೆ ಎಂದು ಹೇಳುತ್ತದೆ.

ಅಮೆರಿಕಾ ತನ್ನ ಬಂಡವಾಳಶಾಹಿಯ ಜಾಗತೀಕರಣದ ಮೂಲಕ ತಾನು ಕೆಟ್ಟಿರುವುದಲ್ಲದೆ ತನ್ನೊಡನೆ ಆರ್ಥಿಕ ವ್ಯವಹಾರ ನಡೆಸುವ ಯೂರೋಪಿನ ಅನೇಕ ದೇಶಗಳ ಆರ್ಥಿಕತೆಯನ್ನು ಅಸ್ತವ್ಯಸ್ತಗೊಳಿಸಿದೆ. ಉದ್ಯೋಗ ಅಭದ್ರತೆ ಸಂಬಳ ಕಡಿತ, ಸಾರ್ವಜನಿಕ ಆರೋಗ್ಯ, ನೀರು, ರಸ್ತೆ, ವಿದ್ಯುತ್, ಶಿಕ್ಷಣ ಇತ್ಯಾದಿ ಸಾಮಾಜಿಕ ಸೇವೆಗಳಿಗೆ ಹಣದ ಕೊರತೆ ಇತ್ಯಾದಿ ಸಮಸ್ಯೆಗಳನ್ನು ಈ ಆರ್ಥಿಕತೆಗಳು, ವಿಶೇಷವಾಗಿ ಅಮೆರಿಕಾದ ಆರ್ಥಿಕತೆ ಎದುರಿಸುತ್ತಿದೆ.



ಇದಕ್ಕೆಲ್ಲ ಮೂಲ ಕಾರಣ ಅಮೆರಿಕಾದ ಬ್ಯಾಂಕಿಂಗ್ ಕ್ಷೇತ್ರ ಆರ್ಥಿಕ ನೈತಿಕತೆಯನ್ನು ಬುಡಮೇಲುಗೊಳಿಸಿ ಕೊನೆಗೆ ತಾನೇ ದಿವಾಳಿ ಎದ್ದಿರುವುದು. ಹಾಗಾಗಿಯೇ ಅಮೆರಿಕಾದ ಜನರು ಈ ಬ್ಯಾಂಕುಗಳ ಮುಖ್ಯ ಕಛೇರಿಗಳಿರುವ ನ್ಯೂಯಾರ್ಕಿನ ವಾಲ್ ಸ್ಟೀಟ್‌ಗೆ ಕಳೆದ ಎರಡು ತಿಂಗಳುಗಳಿಗೂ ಹೆಚ್ಚಿನ ಕಾಲದಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿ ಮುತ್ತಿಗೆ ಹಾಕಿ ತಮ್ಮ ಪ್ರತಿಭಟನೆ ಮತ್ತು ಖಂಡನೆಯನ್ನು ದಾಖಲಿಸುತ್ತಿದ್ದಾರೆ. ಇವರು ಪಕ್ಕದ ಝುಕ್ಕೋಟಿ ಉದ್ಯಾನವನದಲ್ಲಿ ಗುಡಾರಗಳನ್ನು ಹಾಕಿಕೊಂಡು ಅಲ್ಲಿಯೇ ಬದುಕುತ್ತಾ ಈ ಚಳುವಳಿಯನ್ನು ಮುಂದುವರೆಸಿದ್ದಾರೆ. ನ್ಯೂಯಾರ್ಕಿನಲ್ಲಿ ಮಾತ್ರವಲ್ಲ, ಅಮೆರಿಕಾ ಮತ್ತು ಯೂರೋಪಿನ ೩೦ಕ್ಕೂ ಹೆಚ್ಚು ನಗರಗಳಲ್ಲಿ ಇಂತಹ ಮುತ್ತಿಗೆ–ಪ್ರತಿಭಟನೆಗಳು ನಡೆದಿವೆ, ಈ ಎಲ್ಲ ದೇಶಗಳ ಭಿನ್ನಮತೀಯ ಚಿಂತಕರು, ಆರ್ಥಿಕ ತಜ್ಞರು, ಹೋರಾಟಗಾರರು ಈ ಪ್ರತಿಭಟನಾ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿ ಅವರಲ್ಲಿ ಸ್ಫೂರ್ತಿ ತುಂಬುತ್ತಿದ್ದಾರೆ. ಇದು ಸದ್ಯಕ್ಕೆ ನಿಲ್ಲದ ಚಳುವಳಿಯಾಗಿ ಹಬ್ಬತೊಡಗಿದೆ.

ಬಂಡವಾಳಶಾಹಿಯು ತನ್ನ ವಸಾಹತುಶಾಹಿ ಹುಟ್ಟುಗುಣದಿಂದಾಗಿಯೇ, ಜಗತ್ತನ್ನು ಅಲ್ಪಸಂಖ್ಯಾತ ಉಳ್ಳವರ ಮತ್ತು ಬಹುಸಂಖ್ಯಾತ ವಂಚಿತರ ಎರಡು ಪ್ರತ್ಯೇಕ ಜಗತ್ತುಗಳನ್ನಾಗಿ ಒಡೆಯುತ್ತದೆ ಎಂದು ಲೋಹಿಯಾ ಸೇರಿದಂತೆ ಹಲವು ಸಮಾಜವಾದಿ ಚಿಂತಕರು ಸಾರಿ ಹೇಳಿದ್ದ ಹಳೆಯ ಸತ್ಯವನ್ನು ಅಮೆರಿಕಾದ ಮತ್ತು ಯೂರೋಪಿನ ಅರ್ಥಶಾಸ್ತ್ರಜ್ಞರು ಈಗ ಸಂಶೋಧನೆ ಮಾಡಿ ಕಂಡುಕೊಳ್ಳುತ್ತಿದ್ದಾರೆ! ಹಾಗೇ, ಅಮೆರಿಕನ್ ಸಮಾಜದ ತುತ್ತ ತುದಿಯ ಶೇ.೧ರಷ್ಟು ಜನರ ಒಟ್ಟು ಸಂಪತ್ತು ತಳಗಿನ ಶೇ. ೯೦ರಷ್ಟು ಜನರ ಒಟ್ಟು ಸಂಪತ್ತಿಗಿಂತ ಹೆಚ್ಚಿದೆ ಎಂಬ ಸಂಗತಿಯ ಆಧಾರದ ಮೇಲೆ ಈಗ ಅವರು ಇನ್ನೊಂದು ಸಂಶೋಧನೆ ಮಾಡಿ ದೇಶದಲ್ಲಿ ಅಸಮತೆಯ ಪ್ರಮಾಣ ಹೆಚ್ಚುತ್ತಿದ್ದಂತೆ ಆ ದೇಶದ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ ಎಂಬ ಇನ್ನೊಂದು ಹಳೆಯ ಸಮಾಜವಾದಿ ಸತ್ಯವನ್ನು ಕಂಡುಕೊಂಡಿದ್ದಾರೆ! ೨೦೦೮ರ ಆರ್ಥಿಕ ಕುಸಿತದ ಸಂದರ್ಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮೆರಿಕನ್ ಅರ್ಥ ಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ಹೇಳಿದ್ದ 'ನಾವೀಗ ಈ ಬಿಕ್ಕಟ್ಟಿನ ಪರಿಹಾರ ಕುರಿತ ಹೊಸ ಹೊಳಹುಗಳಿಗಾಗಿ ಸಮಾಜವಾದಿ ಅರ್ಥಶಾಸ್ತ್ರದ ಕಡೆ ಕಣ್ಣು ಹಾಯಿಸಬೇಕಿದೆ' ಎಂಬ ಮಾತು ಈ ವಾಲ್ ಸ್ಟ್ರೀಟ್ ಮುತ್ತಿಗೆ ಚಳುವಳಿಯ ಘೋಷಣೆಗಳ ತುಂಬಾ ಅನುರಣಿಸುತ್ತಿರುವುದನ್ನು ನಾವು ಗಮನಿಸಬಹುದು. ಅವರೀಗ ಕೂಗಿ ಹೇಳುತ್ತಿದ್ದಾರೆ: ನೀವು ನಮ್ಮನ್ನು ಇಲ್ಲಿಂದ ಹೊರದೂಡಲಾರಿರಿ. ಏಕೆಂದರೆ ನಮಗೆ ಜ್ಞಾನೋದಯವಾಗಿದೆ; ಹೊಸ ವಿಚಾರ ಸಿಕ್ಕಿದೆ! ನಾವು ಇನ್ನೊಂದು ಜಗತ್ತು ಕಟ್ಟಬೇಕಿದೆ! ಅದಕ್ಕಾಗಿ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ಹಾಕಿ! ಬಡವರ ಎಲ್ಲ ಸಾಲಗಳನ್ನೂ ಮನ್ನಾ ಮಾಡಿ! ಕಾರ್ಪೋರೇಟ್ ಬಂಡವಾಳಶಾಹಿ ವ್ಯವಹಾರಗಳನ್ನು ಸರ್ಕಾರಿ ವ್ಯವಹಾರಗಳಿಂದ ಬೇರ್ಪಡಿಸಿ! ಪೆಟ್ರೋಲ್ ಆಧಾರಿತ ಆರ್ಥಿಕತೆಗೆ ಕಡಿವಾಣ ಹಾಕಿ;ಪರ್ಯಾಯ ಇಂಧನಕ್ಕಾಗಿ ಹುಡುಕಾಟ ನಡೆಸಿ. ನಮ್ಮ ಜೀವ ಪರಿಸರವನ್ನು ಸಂರಕ್ಷಿಸಿ!

ಈ ಘೋಷಣೆಗಳನ್ನು ಕೇವಲ ಅಮೆರಿಕಾ ಮತ್ತು ಯೂರೋಪಿನ ಆಡಳಿತಗಾರರು ಮಾತ್ರವಲ್ಲ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಆರಾಧಕರಾದ ನಮ್ಮ ದೇಶದ ಆಡಳಿತಗಾರರೂ–ವಿಶೇಷವಾಗಿ ಮನಮೋಹನ ಸಿಂಗ್ ಮತ್ತು ಅಹ್ಲೂವಾಲಿಯಾಗಳು– ಕೇಳಿಸಿಕೊಳ್ಳಬೇಕು! ಜೊತೆಗೆ ಹೊಸ ಅಭಿವೃದ್ಧಿ ವೇಗದ ರೋಚಕತೆಯಲ್ಲಿ, ಅದರ ಸುಪುಷ್ಠ ಫಲಗಳನ್ನು ಅನುಭವಿಸುತ್ತಾ ಮೈಮರೆತಿರುವ ಮಧ್ಯಮ ವರ್ಗದ ನಾವೂ! ಆದರೆ ಕೇಂದ್ರ ಸರ್ಕಾರ ತನ್ನ ಒಳಗಿನ ಮತ್ತು ಹೊರಗಿನ ಪ್ರಬಲ ವಿರೋಧದದ ನಡುವೆಯೂ, ಮೊನ್ನೆ ಚಿಲ್ಲರೆ ವ್ಯಾಪಾರದ ವಲಯದಲ್ಲೂ ನೇರ ವಿದೇಶೀ ಬಂಡವಾಳದ ಹೂಡಿಕೆಗೆ ಅನುಮೋದನೆ ನೀಡಿ ತನ್ನ ರಾಜಕೀಯ ಅಸೂಕ್ಷ್ಮತೆಯನ್ನು ಮೆರೆದಿದೆ, ಪ್ರಜಾಪ್ರಭುತ್ವದ ತಿರುಳನ್ನು ಧಿಕ್ಕರಿಸಿದೆ. ಅದು ಜನರಿಂದ ಪಾಠ ಕಲಿಯುವ ದಿನಗಳು ದೂರವಿಲ್ಲವೆಂದು ತೋರುತ್ತದೆ. ಅದೇನೇ ಇರಲಿ, ಈ ಸಂಚಿಕೆಯಲ್ಲಿ ಈ ಬಗ್ಗೆ ಎರಡು ಲೇಖನಗಳನ್ನು ನೀಡುತ್ತಿದ್ದೇವೆ. ಒಂದು, ಅರ್ಥಶಾಸ್ತ್ರದ ಜೊತೆ ವಾಣಿಜ್ಯ ವ್ಯವಸ್ಥಾಪನೆಯ ಕ್ಷೇತ್ರದಲ್ಲೂ ಪರಿಣತರಾದ ಎಂ.ಎಸ್. ಶ್ರೀರಾಮ್ ಅಮೆರಿಕಾದ ಆರ್ಥಿಕತೆಯ ಅವನತಿಯ ಮೂಲ ಕಾರಣಗಳನ್ನು ಗುರುತಿಸಿರುವ ಲೇಖನ. ಮತ್ತೊಂದು, 'ವಾಲ್ ಸ್ಟ್ರೀಟ್ ಮುತ್ತಿಗೆ'ಯ ಜನಸ್ತೋಮವನ್ನು ಉದ್ದೇಶಿಸಿ ಸ್ಲಾವಿಕ್ ಚಿಂತಕ ಸ್ಲಾವೋಜ್ ಜಿಜೆಕ್ ಮಾಡಿದ ಭಾಷಣ.–ಸಂ.

# ಮುಕ್ತ ಮಾರುಕಟ್ಟೆ ಆರ್ಥಿಕತೆ : ಕುಸಿಯುತ್ತಿರುವ ಬೇ-ಬುನಾದಿ ಗಾಳಿ ಗೋಪುರ

–ಎಂ.ಎಸ್. ಶ್ರೀರಾಮ್

**ಬು**ನಾದಿಯಿಲ್ಲದ ಬಹು ಮಹಡಿ ಕಟ್ಟಡ ಕುಸಿಯಲಾರಂಭಿಸುವಂತೆ ಇಂತಹ ಕಟ್ಟಡಗಳ ನಿರ್ಮಾತೃಗಳ ಕರ್ಮಭೂಮಿಯಾದ ವಾಲ್ ಸ್ಟ್ರೀಟ್‌ಗೆ ಜನತೆ ಮುತ್ತಿಗೆ ಹಾಕಿದೆ. ಬಂಡವಾಳಶಾಹಿ ಆರ್ಥಿಕತೆಯ ಮೆಕ್ಕಾ ಎನಿಸಿದ್ದ ಅಮೆರಿಕಾ ಈಗ ಇದ್ದಕ್ಕಿದ್ದಂತೆ ಆರ್ಥಿಕವಾಗಿ ಅಲುಗಾಡುತ್ತಿದೆ. ನಮ್ಮ 'ಇಂಡಿಯಾ ಶೈನಿಂಗ್'ನ ಹೊಳಪು ಹಾರಿಹೋದ ಹಾಗೆಯೇ ಅಮೆರಿಕಾದ ಹೊಳಪೂ ಮಂದವಾಗತೊಡಗಿದೆ. ಜೊತೆಗೆ ಆ ದೇಶ ತನ್ನೊಂದಿಗೆ ಐರೋಪ್ಯ ದೇಶಗಳನ್ನೂ ಬಲಿ ತೆಗೆದುಕೊಳ್ಳುತ್ತಿದೆ. ಗ್ರೀಸ್, ಇಟಲಿ ಮುಂತಾದ ದೇಶಗಳು ದಿವಾಳಿಯ ಅಂಚನ್ನು ತಲುಪಿವೆ. ಯೂರೋಪಿನ ಇಂತಹ ಸಮಸ್ಯೆಗಳಿಗೆ ಸ್ಥಳೀಯ ವಿತ್ತ ನೀತಿಗಳಿಗಿಂತ ಗಡಿಯಾಚೆಯಿಂದ ಬಂದಂತಹ ಬ್ಯಾಂಕಿಂಗ್ ವ್ಯವಹಾರಗಳ ನೀತಿಯೇ ಕಾರಣವಾಗಿದೆ. ಈ ಎಲ್ಲ ತಳಮಳ, ಗೊಂದಲಗಳ ಹಿನ್ನೆಲೆಯೇನು ಎಂಬುದನ್ನು ಆರ್ಥಿಕ ಪರಿಭಾಷೆಯಲ್ಲಿ ವಿವರಿಸುವುದು ತುಂಬ ಕಷ್ಟ ಆದರೂ ಆದಷ್ಟೂ ಸರಳಗೊಳಿಸಿಕೊಂಡು ಅರ್ಥ ಮಾಡಿಕೊಂಡರೆ, ನಮ್ಮ ದೇಶವೂ ಕೆಲವು ಪಾಠಗಳನ್ನು ಕಲಿಯಬಹುದು.

ಅಮೆರಿಕಾ ಮತ್ತು ಯೂರೋಪಿನ ಈ ಎಲ್ಲ ಅನಾಹುತಗಳ ಮೂಲವನ್ನು ನಾವು Financialisation ಎಂದು ಕರೆಯಲಾಗುವ ಅತಿ-ಆರ್ಥಿಕವಾದದಲ್ಲಿ ಕಾಣಬಹುದು. ಇದನ್ನು ಒಂದು ಸರಳ ಉದಾಹರಣೆಯ ಮೂಲಕ ವಿಷದೀಕರೀಸಬಹುದು. ಬೆಂಗಳೂರಿನ ಒಂದು ಕೊಳಗೇರಿಯಲ್ಲಿರುವ ಲಕ್ಷ್ಮಿ ಎಂಬ ಮಹಿಳೆ ತನ್ನ 'ಕೊಳಗೇರಿ ಬ್ಯಾಂಕ್'ನಿಂದ ಒಂದಿಷ್ಟು ಹಣಕಾಸಿನ ಸಾಲ ಪಡೆದು ಪ್ರತಿವಾರ ಕಂತು ಕಟ್ಟುತ್ತಿದ್ದಾಳೆಂದು ಭಾವಿಸೋಣ. ಆಕೆಗೆ ನಿಜವಾಗಿ ಸಾಲವನ್ನು ನೀಡಿದವರು ಯಾರು? ಅದು 'ಕೊಳಗೇರಿ ಬ್ಯಾಂಕ್'. ಆದರೆ ಈ ಬ್ಯಾಂಕ್ ಲಕ್ಷ್ಮಿಯ ಸಾಲವಲ್ಲದೆ ಅವಳ ಸಹಚರರದೂ ಸೇರಿದಂತೆ ಇತರ ಹಲವರು ಪಡೆದಿರುವ ಸಾಲಗಳನ್ನೆಲ್ಲ ಒಂದು 'ಕಟ್ಟು' ಮಾಡಿ, ಅದನ್ನು ಮತ್ತೊಂದು ಆರ್ಥಿಕ ಸಂಸ್ಥೆಗೆ (ಅಧಿಕ ಬಡ್ಡಿಗೆ) ಮಾರಾಟ ಮಾಡುತ್ತದೆ! ಕೊಟ್ಟ ಸಾಲ ವಸೂಲಿಯಾಗಬೇಕಾದುದರಿಂದ ಅದು ವಾಸ್ತವವಾಗಿ ಸಾಲ ಕೊಟ್ಟ ಬ್ಯಾಂಕಿನ ಆಸ್ತಿಯಾಗಿರಬೇಕು. ಆದರೆ ಈ ಆಸ್ತಿಯನ್ನು ಅತಿ ಆರ್ಥಿಕವಾದಿ ವ್ಯವಸ್ಥೆಯಲ್ಲಿ ಕಾರು, ನಿವೇಶನ, ಮನೆ ಇತ್ಯಾದಿ (ಅಡಮಾನ)ಆಸ್ತಿಗಳನ್ನು ಮಾರಿದಂತೆ ಮಾರಾಟ ಮಾಡುವ 'ಉದಾರ ನೀತಿ'ಯನ್ನು ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಲಕ್ಷ್ಮಿಗೆ ತಿಳಿಯದೆಯೇ ಅವಳ ಸಾಲ ಯಾವುದೋ ವಿದೇಶಿ ಬ್ಯಾಂಕಿನಂದ ಬಂದುಬಿಟ್ಟಿದೆ!

ಈ ಸಾಲವನ್ನು ವಸೂಲಿ ಮಾಡಿ ಮರುಪಾವತಿಸುವ ಜವಾಬ್ದಾರಿಯನ್ನು 'ಕೊಳಗೇರಿ ಬ್ಯಾಂಕ್' ಹೊತ್ತಿದೆಯಾದರೂ, ಈ ಸಾಲ ಸಂಬಂಧಿತ ಒಳಿತು-ಕೆಡಕು-ಲಾಭ-ನಷ್ಟಗಳ ಅಂತಿಮ ಫಲಾನುಭವಿ ವಿದೇಶೀ ಬ್ಯಾಂಕ್ ಆಗಿರುತ್ತದೆ. ಏಕೆಂದರೆ, ಈ ಸಾಲಗಳ 'ಕಟ್ಟು'ಗಳ ಗುಣಮಟ್ಟದ-ಆಧಾರ, ಮರುಪಾವತಿ ಸಾಧ್ಯತೆ, ಅವಧಿ ಇತ್ಯಾದಿಗಳ-ಬಗ್ಗೆ ವಿದೇಶಿ ಬ್ಯಾಂಕುಗಳಿಗೆ ಯಾವುದೇ ಜ್ಞಾನವೂ ಇರುವುದಿಲ್ಲ. ಅವು ಸಾಲಗಳ ಗುಣಮಟ್ಟವನ್ನು ಅಳೆಯುವ 'ಕ್ರೆಡಿಟ್ ರೇಟಿಂಗ್ ಏಜೆನ್ಸಿ'ಗಳೆಂಬ ಮಧ್ಯವರ್ತಿ ಸಂಸ್ಥೆಗಳನ್ನು ಅವಲಂಬಿಸುತ್ತವೆ. ಇಂತಹ ಹಲವು ಮಧ್ಯವರ್ತಿ ಸಂಸ್ಥೆಗಳು ಈಗ ಉದ್ಭವವಾಗಿದ್ದು, ಅವು ಎ, ಬಿ, ಸಿ, ಡಿ ಎಂಬ ಶ್ರೇಣೀಕರಣ ಮಾಡುವ ವಿಧಾನಗಳನ್ನು 'ಕಂಡು ಹಿಡಿದಿವೆ'. ಈ ವಿದೇಶೀ ಬ್ಯಾಂಕುಗಳು ತಾವು ಕೊಂಡ ಸಾಲಗಳ 'ಕಟ್ಟು'ಗಳನ್ನು ಈ ಶ್ರೇಣೀಕರಣಗಳ ಆಧಾರದ ಮೇಲೆ ಪ್ರಚಾರ ಮಾಡಿ, ಅವನ್ನು 'ಬಾಂಡು'ಗಳ ರೂಪದಲ್ಲಿ (ಷೇರು)ಮಾರುಕಟ್ಟೆಯಲ್ಲಿ ಮರುಮಾರಾಟಕ್ಕೆ ಇಟ್ಟು ಹಣ ಎತ್ತುತ್ತವೆ! ಅಂದರೆ ಇಸಗೊಂಡ ಈರಬದ್ರ ಯಾರೆಂದು ಕೊಟ್ಟ ಕೋಡಂಗಿಗೆ ಗೊತ್ತಿರುವುದಿಲ್ಲ! ಹಾಗೇ ಈ ಕೋಡಂಗಿ ಯಾರೆಂದು ಈರಬದ್ರನಿಗೂ ಗೊತ್ತಿಲ್ಲ! ಕೊಟ್ಟದ್ದು ಒಂದೇ ಸಾಲ, ತೆಗೆದುಕೊಂಡವರೂ ಒಬ್ಬರೇ, ವಸೂಲಾಗುವುದೂ ಒಂದೇ ಕಡೆಯಿಂದ. ಆದರೆ ಅದರ ಹಿನ್ನೆಲೆಯಲ್ಲಿ ಈ ಸಾಲದ ಮೇಲೆ ನಡೆಯುತ್ತಿರುವ ಆರ್ಥಿಕ ವಹಿವಾಟು ಮಾತ್ರ ಒಂದು ಮಾಯಾಜಾಲದಂತಿದ್ದು, ಇದರಲ್ಲಿ ಭಾಗಿಯಾದ ಯಾರೊಬ್ಬರಿಗೂ ಸುಲಭವಾಗಿ ಅರ್ಥವಾಗದಷ್ಟು ಜಟಿಲವಾಗಿದೆ!

ಹೀಗೆ ಒಂದು ಕಾಳೂ ಬೆಳೆಯದೆ, ಒಂದಂಗುಲ ಬಟ್ಟೆಯನ್ನೂ ನೇಯದೆ, ದಳ್ಳಾಳಿಗಳ ಒಂದು ಇಡೀ ಜಾಲವೇ ಈ ಸರಳ ಕೊಡು-ಕೊಳ್ಳುವಿಕೆಯ ನಡುವೆ ಬೆಳೆದು, ಅದನ್ನೊಂದು ಬೃಹತ್ 'ಉದ್ಯಮ'ವನ್ನಾಗಿ ಮಾಡಿ ಹೊಸ ಕಾಲದ 'ಉದ್ಯಮಿ'ಗಳ ಹೊಸ ತಳಿಯೊಂದನ್ನೇ ನಿರ್ಮಿಸಿರುವುದು ನಾವು ಇಲ್ಲಿ ಕಾಣಬಹುದಾಗಿದೆ. ಜಗತ್ತಿನ ಆರ್ಥಿಕ ಕ್ಷೇತ್ರದ ಅತಿ ಬುದ್ಧಿವಂತ ಮೆದುಳುಗಳೆಲ್ಲಾ ಈ ವ್ಯವಹಾರದ ರೂವಾರಿಗಳೆನಿಸಿದ್ದು, ಅವರು ಮಿಲಿಯಗಟ್ಟಲೆ ದಲ್ಲಾಳಿ ಹಣವನ್ನು ಕೊಳ್ಳೆ ಹೊಡೆದಿದ್ದಾರೆ. ಇದರ ಪೂರ್ಣ ಭಾರವನ್ನು ಸಾಲ ಪಡೆದವರೂ ಸೇರಿದಂತೆ ಈ ಸಾಲಗಳ ಮೇಲಿನ ಬಾಂಡುಗಳನ್ನು ಅವುಗಳ ಶ್ರೇಣೀಕರಣವನ್ನು ನಂಬಿ ಖರೀದಿಸಿದ ಬಡವರು ಮತ್ತು ಕೆಳ ಮಧ್ಯಮ ವರ್ಗದವರೂ ಹೊರಬೇಕಿದೆ. ಈಗ ನೋಡಿದರೆ ಈ ಗಾಯಗಳ ಮೇಲೆ ಬರೆ ಎಳೆದಂತೆ, ಹಲವು ರಾಷ್ಟ್ರಗಳ ಆರ್ಥಿಕತೆಯನ್ನೇ ವಿನಾಶದ ಅಂಚಿಗೆ ತಂದು ತಾನೂ ದಿವಾಳಿಯಾಗಿರುವ ಬ್ಯಾಂಕು ಮತ್ತು ಇತರೆ ಆರ್ಥಿಕ ಸಂಸ್ಥೆಗಳ ಉಳಿವಿಗಾಗಿ ಅಮೆರಿಕಾ ಸರ್ಕಾರ ಜನತೆಯ ವಿರೋಧದ ನಡುವೆಯೂ ಒದಗಿಸಿರುವ ಮಿಲಿಯಗಟ್ಟಲೆ ಪರಿಹಾರದ ಪ್ಯಾಕೇಜುಗಳನ್ನು ಈ ಬ್ಯಾಂಕು ಮತ್ತು ಸಂಸ್ಥೆಗಳ ಈ ಮಾಜಿ 'ಆಡಳಿತಗಾರರು' ತಮ್ಮ 'ಸೇವೆ'ಗಾಗಿ ಮಿಲಿಯಗಟ್ಟಲೆ ಡಾಲರ್‌ಗಳ ಬೋನಸ್, ಪರಿಹಾರ ಇತ್ಯಾದಿಗಳನ್ನು ಪಡೆದು ನಿರ್ಗಮಿಸುತ್ತಿದ್ದಾರೆ! ಇದು ಅಮೆರಿಕಾದ ಜನರನ್ನು ಮತ್ತಷ್ಟು ರೊಚ್ಚಿಗೆಬ್ಬಿಸಿದೆ. ಜನ ಈ ದೀರ್ಘಕಾಲಿಕ ಮತ್ತು ಬೃಹತ್ ಕೊಳ್ಳೆಗೆ ಬಲಿಯಾದ ಆರ್ಥಿಕತೆಯ ಪರಿಣಾಮವಾಗಿ ಹಿಂದೆಂದೂ ಕಾಣದ ಬೆಲೆಯೇರಿಕೆ ಮತ್ತು ನಿರುದ್ಯೋಗ ಕಂಡು ಗಾಬರಿಯಾಗಿದೆ. ಅದರ ಪರಿಣಾಮವೇ ವಾಲ್ ಸ್ಟ್ರೀಟ್ ಮುತ್ತಿಗೆ! ಇದು ಬಡ-ಕೆಳ ಮಧ್ಯಮ ವರ್ಗದವರ ಆರ್ಥಿಕತೆಗೆ ಮುತ್ತಿಗೆ ಹಾಕಿದ್ದ ಆರ್ಥಿಕ ಕ್ಷೇತ್ರದ ಬುದ್ಧಿಜೀವಿಗಳ ವಿರುದ್ಧ ಶ್ರೀಸಾಮಾನ್ಯ ಬುದ್ಧಿವಂತರು ಹಾಕಿರುವ ಮರುಮುತ್ತಿಗೆಯೂ ಹೌದು! ಇದು ಯಾವ ದಿಕ್ಕಿನಲ್ಲಿ ಬೆಳೆಯುವುದೋ ಈಗಲೇ ಹೇಳಲಾಗದಾದರೂ, ಇದನ್ನು ತಕ್ಷಣಕ್ಕೆ ಹತ್ತಿಕ್ಕುವುದು ಸಾಧ್ಯವಿಲ್ಲದಂತೆ ತೋರುತ್ತಿದೆ.

ಅತಿಯಾದ ಜಾಗತೀಕರಣ ನೀತಿಯಿಂದಾಗಿ ರೊಕ್ಕದ ರಾಷ್ಟ್ರೀಯ ಗುರುತು ಮಾಸಿಹೋಗುತ್ತಿರುವುದರಿಂದ ಅಮೆರಿಕಾಕ್ಕೆ ಹಿಡಿದ ಛಳಿಜ್ವರ ಇಡೀ ಐರೋಪ್ಯ ರಾಷ್ಟ್ರಗಳಿಗೆ ಹಬ್ಬಿ ಅವೂ ಹಾಸಿಗೆ ಹಿಡಿದಿವೆ. ಆದರೆ' ಸಮ್ಮಿಶ್ರ ರಾಜಕೀಯ ವಾತಾವರಣದಿಂದಾಗಿ ತುಸು ಹಿಡಿತ ಹೊಂದಿದ ಆರ್ಥಿಕ ನೀತಿಯನ್ನು ಅನುಸರಿಸುತ್ತಾ, ಹಳೇ ಕಾಲದ ನೇರ-ಸರಳ ಅಡಗೂಲಜ್ಜಿ ಶೈಲಿಯ ಹಣಕಾಸಿನ ವ್ಯವಹಾರ ನಡೆಸುತ್ತಾ ಬಂದಿರುವ ಭಾರತವೇ ಈಗ ಒಂದು ರೀತಿಯಿಂದ ಬುದ್ಧಿವಂತ ದೇಶದಂತೆ ಜಗತ್ತಿನಲ್ಲಿ ಕಾಣತೊಡಗಿದೆ! ಆದರೆ ಇಷ್ಟರವರೆಗೆ ಮಾತ್ರ ನಾವು ಸಮಾಧಾನಪಡಬಹುದು. ಏಕೆಂದರೆ ನಮ್ಮ ದೇಶದಲ್ಲಿ ಹೊಸದಾಗಿ ಮೂಡುತ್ತಿರುವ ಆರ್ಥಿಕ ಸಮಸ್ಯೆಗಳಿಗೇನೂ ಕೊರತೆಯಿಲ್ಲ. ಆದರೆ ನಮ್ಮದೇನಿದ್ದರೂ ದೇಸಿ ಸಮಸ್ಯೆಗಳು;ಆಮದಾದ ಸಮಸ್ಯೆಗಳಲ್ಲ! ಹೀಗಾಗಿ ನಾವು ಬೆಲೆಯೇರಿಕೆಯನ್ನೂ, ಹಣದುಬ್ಬರವನ್ನೂ ದೇಶಭಕ್ತಿಯ ಹುಮ್ಮಸ್ಸಿನಲ್ಲಿ ಭರಿಸಬಲ್ಲವಾಗಿದ್ದೇವೆ!

ಆದರೆ ಕ್ರಮೇಣ ಪಾಶ್ಚಾತ್ಯ ರಾಷ್ಟ್ರಗಳು ಮಾಡಿದ ತಪ್ಪನ್ನೇ ಆರ್ಥಿಕ ಉದಾರವಾದ, ಸುಧಾರಣೆಗಳ ಹೆಸರಿನಲ್ಲಿ ಮಾಡತೊಡಗಿರುವಂತೆ ತೋರುವ ಭಾರತಕ್ಕೆ ಇದು ಸರಿಯಾದ ವೇಳೆಗೆ ಎಚ್ಚರಿಕೆಯ ಘಂಟೆಯನ್ನು ಬಾರಿಸದಂತಾಗಿದೆ. ಈ ಎಚ್ಚರಿಕೆ ಘಂಟೆಯ ಮಜಕೂರು ಇಷ್ಟೇ: ಜಿಡಿಪಿ, ಒಟ್ಟಾರೆ ಬೆಳವಣಿಗೆ ದರ ಇತ್ಯಾದಿ ಮರೀಚಿಕೆಗಳ ಹಿಂದೆ ಬೀಳುವ ಭಾರತ ಕೆಲವರ ಪಾಲಿಗೆ 'ಇಂಡಿಯಾ ಶೈನಿಂಗ' ಆಗಬಹುದಾದರೂ, ಕೆಲವಷ್ಟೇ ಜನ ಶ್ರೀಮಂತರಾಗಿ ಒಟ್ಟಾರೆ ಬಡತನ ಹೆಚ್ಚುವುದು ಖಚಿತ. ಈ ಮಾರುಕಟ್ಟೆ ಡಾರ್ವಿನ್‌ವಾದವನ್ನು ಬಿಟ್ಟು ಎಲ್ಲರನ್ನೂ ಒಳಗೊಳ್ಳುವ ಆರ್ಥಿಕ ನೀತಿಯನ್ನು ನಮ್ಮದಾಗಿಸಿಕೊಳ್ಳುವ ಅವಶ್ಯಕತೆಯನ್ನು ಪಾಶ್ಚಾತ್ಯ ಜಗತ್ತಿನ ಮಾರುಕಟ್ಟೆಯ ಪತನ ನಮಗೆ ಮನದಟ್ಟು ಮಾಡಿದೆ ಎಂದು ಹೇಳಬಹುದು. *

# ಬಂಡವಾಳಶಾಹಿ–ಪ್ರಜಾಪ್ರಭುತ್ವದ ಮದುವೆ ಮುರಿದು ಬಿದ್ದಿದೆ!

## (ಸ್ಲಾವ್ ಚಿಂತಕ ಝಿಝೆಕ್, ಝುಕ್ಕೋಟಿ ಉದ್ಯಾನದಲ್ಲಿ ಮಾಡಿದ ಭಾಷಣದ ಕನ್ನಡಾನುವಾದ)



**ಅ**ವರು ನೀವೆಲ್ಲಾ ಸೋತು ಹೋದವರು ಎಂದು ಹೇಳುತ್ತಿದ್ದಾರೆ. ಆದರೆ ನಜವಾಗಿ ಸೋತವರು ವಾಲ್‌ಸ್ಟ್ರೀಟ್‌ನಲ್ಲಿದ್ದಾರೆ. ನಮ್ಮ ಬಿಲಿಯನ್‌ಗಟ್ಟಲೆ ಹಣದಿಂದ ಅವರನ್ನು ಪೋಷಿಸಲಾಗಿದೆ. ನಮ್ಮನ್ನೆಲ್ಲಾ ಸಮಾಜವಾದಿಗಳು ಅನ್ನುತ್ತಿದ್ದಾರೆ. ಆದರೆ ಇಲ್ಲಿ ಇರುವುದು ಶ್ರೀಮಂತರ ಸಮಾಜವಾದ ಮಾತ್ರ. ಅವರು ನಾವು ಖಾಸಗಿ ಆಸ್ತಿಯ ಹಕ್ಕನ್ನು ಗೌರವಿಸುತ್ತಿಲ್ಲ ಎನ್ನುತ್ತಾರೆ. ಆದರೆ ೨೦೦೮ರ ಆರ್ಥಿಕ ಕುಸಿತದಲ್ಲಿ ನಾವು ಹಗಲು–ರಾತ್ರಿ ಪ್ರಯತ್ನಿಸಿದರೂ ನಾಶಮಾಡಲಾಗದಷ್ಟು ಖಾಸಗಿ ಆಸ್ತಿ ಸರ್ವನಾಶವಾಯಿತು. ಅವರು ನಮ್ಮನ್ನು ಕನಸುಗಾರರು ಎನ್ನುತ್ತಾರೆ. ನಿಜವಾಗಿ ಕನಸುಗಾರರೆಂದರೆ–ಪ್ರಪಂಚ ಹೀಗೇ ನಿರಂತರವಾಗಿ ಮುಂದುವರೆಯುತ್ತದೆ ಎಂದು ಆಲೋಚಿಸುವವರು. ನಾವು ಕನಸುಗಾರರಲ್ಲ. ನಾವು ದುಃಸ್ವಪ್ನದಿಂದ ಎದ್ದೇಳುತಿದ್ದೇವೆ.

ನಾವು ಏನನ್ನೂ ನಾಶ ಮಾಡುತ್ತಿಲ್ಲ. ಈ ವ್ಯವಸ್ಥೆ ಹೇಗೆ ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತಿದೆ ಎಂಬುದನ್ನು ಗಮನಿಸುತಿದ್ದೇವೆ ಅಷ್ಟೆ. ಕಾರ್ಟೂನುಗಳಲ್ಲಿರುವ ಕ್ಲಾಸಿಕ್ ದೃಶ್ಯ ನಮಗೆಲ್ಲಾ ಪರಿಚಿತವೇ. ಒಂದು ಬೆಕ್ಕು ಪರ್ವತದ ತುತ್ತತುದಿ ತಲುಪಿ, ಮುಂದೆ ಕೆಳಗೇನೂ ಆಧಾರವಿಲ್ಲದಿರುವುದನ್ನು ಗಮನಿಸದೆ ಗಾಳಿಯಲ್ಲಿ ನಡೆಯತೊಡಗುತ್ತದೆ. ಅದು ಕೆಳಗೆ ನೋಡಿ ಏನೂ ಆಧಾರವಿಲ್ಲದಿರುವುದನ್ನು ಅರಿತ ಕೂಡಲೇ ಪ್ರಪಾತಕ್ಕೆ ಬೀಳುತ್ತದೆ. ನಾವು ಈಗ ಮಾಡುತ್ತಿರುವುದು ಅದನ್ನೇ. ವಾಲ್ ಸ್ಟ್ರೀಟ್‌ನಲ್ಲಿರುವವರಿಗೆ ನಾವು ಹೇಳುತಿದ್ದೇವೆ 'ಏ ಅಲ್ಲಿ ಕೆಳಗೆ ನೋಡಿ' ಎಂದು.

ಚೀನಾ ಸರ್ಕಾರ ೨೦೧೧ರ ಏಪ್ರಿಲ್ ತಿಂಗಳ ಹೊತ್ತಿಗೆ ಟಿ.ವಿ, ಚಲನಚಿತ್ರ ಹಾಗೂ ಕಾದಂಬರಿಗಳಲ್ಲಿ ವ್ಯಕ್ತವಾಗುವ ಪರ್ಯಾಯ ವಾಸ್ತವ ಮತ್ತು ಕಾಲಪ್ರಯಾಣವನ್ನು ನಿಷೇಧಿಸಿತು. ಇದು ಚೈನಾದ ಜನಕ್ಕೆ ಶುಭ ಸೂಚಕ ಚಿಹ್ನೆಯೇ! ಏಕೆಂದರೆ ಅವರು ಪರ್ಯಾಯದ ಬಗ್ಗೆ ಇನ್ನೂ ಕನಸು ಕಾಣಬಲ್ಲರು. ಹಾಗಾಗಿ ಅಲ್ಲಿನ ಸರ್ಕಾರ ಕನಸು ಕಾಣುವುದನ್ನೇ ಬಹಿಷ್ಕಾರ ಮಾಡಬೇಕಾದೀತು! ನಮ್ಮಲ್ಲಿ ಈ ರೀತಿ ಬಹಿಷ್ಕಾರದ ಅಗತ್ಯವೇ ಇಲ್ಲ. ಏಕೆಂದರೆ ಈ ಆಳುವ ಪ್ರಭುತ್ವವು ನಾವು ಕನಸು ಕಾಣುವ ಸಾಮರ್ಥ್ಯವನ್ನೇ ದಮನ ಮಾಡಿದೆ. ನಾವು ದಿನ ನಿತ್ಯ ನೋಡುವ ನಮ್ಮ ಚಲನಚಿತ್ರಗಳನ್ನೇ ಗಮನಿಸಿ; ಈ ಪ್ರಪಂಚ ಕೊನೆಗೊಳ್ಳುವುದನ್ನು ಕಲ್ಪಿಸಿಕೊಳ್ಳುವುದು ಎಷ್ಟು ಸುಲಭ! ಒಂದು ಆಕಾಶ ಕಾಯ ಎಲ್ಲಿಂದಲೋ ಬಂದು ಇಲ್ಲಿನ ಇಡೀ ಜೀವ ಜಗತ್ತನ್ನು ನಾಶ ಮಾಡುತ್ತದೆ. ಆದರೆ ಈ ಬಂಡವಾಳಶಾಹಿ ಕೊನೆಗೊಳ್ಳುವುದನ್ನು ಮಾತ್ರ ಇಲ್ಲಿ ಕಲ್ಪಿಸಿಕೊಳ್ಳಲಾರಿರಿ!

ಹಾಗಾದರೆ ನಾವಿಲ್ಲಿ ಏನು ಮಾಡುತ್ತಿದ್ದೇವೆ? ಈ ಸಂಬಂಧವಾಗಿ ನಿಮಗೆ ಕಮ್ಯೂನಿಸ್ಟ್ ಕಾಲದ ಅದ್ಭುತ ಜೋಕೊಂದನ್ನು ಹೇಳುವೆ.. ಸೈಬೀರಿಯಾದಲ್ಲಿ ಕೆಲಸ ಮಾಡಲು ಪೂರ್ವ ಜರ್ಮನಿಯಿಂದ ಒಬ್ಬ ಮನುಷ್ಯನನ್ನು ಕಳಿಸಲಾಯಿತು. ಆತನಿಗೆ ತನ್ನ ಪತ್ರಗಳನ್ನು ಕಮ್ಯೂನಿಸ್ಟ ಪಕ್ಷದ ಸೆನ್ಸಾರ್ ಸಮಿತಿಯವರು ಓದುತ್ತಾರೆ ಎಂದು ತಿಳಿದಿತ್ತು. ಆದ್ದರಿಂದ ಆತ ತನ್ನ ಸ್ನೇಹಿತರಿಗೆ ಹೀಗೆ ಹೇಳಿದ: 'ನಾವೊಂದು ಸಂಕೇತ ಭಾಷೆಯನ್ನು ಉಪಯೋಗಿಸೋಣ. ನಾನು ಬರೆದ ಪತ್ರ ನೀಲಿ ಮಸಿಯಲ್ಲಿದ್ದರೆ, ಅದರಲ್ಲಿರುವುದು ವಾಸ್ತವ ಎಂದು ಭಾವಿಸಬೇಕು. ಕೆಂಪು ಮಸಿಯಲ್ಲಿ ಬರೆದರೆ ಅದು ಸುಳ್ಳು ಎಂದು ಭಾವಿಸಬೇಕು'. ಒಂದು ತಿಂಗಳ ನಂತರ ಅವನ ಸ್ನೇಹಿತರಿಗೆ ಮೊದಲ ಪತ್ರ ತಲುಪಿತು. ಅವೆಲ್ಲವೂ ನೀಲಿ ಮಸಿಯಲ್ಲಿಯೇ ಇತ್ತು. ಅದರಲ್ಲಿ ಹೀಗೆ ಬರೆಯಲಾಗಿತ್ತು: 'ಇಲ್ಲಿ ಎಲ್ಲವೂ ಅದ್ಭುತವಾಗಿದೆ. ಅಂಗಡಿಗಳು ಆಹಾರ ಧಾನ್ಯಗಳಿಂದ ತುಂಬಿ ತುಳುಕುತ್ತಿವೆ. ಟಾಕೀಸುಗಳಲ್ಲಿ ಪಶ್ಚಿಮದ ಅತ್ಯುತ್ತಮ ಚಲನಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ. ಅಪಾರ್ಟ್‌ಮೆಂಟುಗಳು ವಿಶಾಲವಾಗಿದ್ದು, ವೈಭವದಿಂದ ಕೂಡಿದೆ. ಇಲ್ಲಿ ಕೊಳ್ಳಲಾಗದ ಒಂದೇ ಒಂದು ವಸ್ತು ಎಂದರೆ ಕೆಂಪು ಮಸಿ'!! ಇದೇ ರೀತಿಯಲ್ಲಿ ನಾವೂ ಬದುಕುತ್ತಿದ್ದೇವೆ. ನಮಗೆ ಬೇಕಾದ ಎಲ್ಲ ಸ್ವಾತಂತ್ರ್ಯಗಳಿವೆ. ಆದರೆ ಕೊರತೆ ಇರುವುದು ನಮ್ಮ ಸ್ವಾತಂತ್ರ್ಯಹೀನತೆಯನ್ನು ಅಭಿವ್ಯಕ್ತಿಸಬಲ್ಲ ಕೆಂಪು ಮಸಿಯದು. ಸ್ವಾತಂತ್ರ್ಯದ ಬಗ್ಗೆ ನಮಗೆ ಮಾತನಾಡಲು ಕಲಿಸಿರುವ ಬಗೆ ಮತ್ತು ಪರಿಭಾಷೆ–ಭಯೋತ್ಪಾದನೆ ವಿರುದ್ಧ ಸಮರ ಇತ್ಯಾದಿಗಳು–ಸ್ವಾತಂತ್ರ್ಯದ ಕಲ್ಪನೆಯನ್ನೇ ಹುಸಿಗೊಳಿಸುವಂತಿದೆ. ನೀವು ಈಗ ಇಲ್ಲಿ ಸೇರಿ ಮಾಡುತ್ತಿರುವುದು ಇದನ್ನೇ: ನೀವು ನಮಗೆ ಕೆಂಪು ಮಸಿಯನ್ನು ಒದಗಿಸುತ್ತಿದ್ದೀರಿ!

ಇಲ್ಲಿ ಒಂದು ಅಪಾಯವಿದೆ. ನೀವೇ ನಿಮ್ಮ ಪ್ರೀತಿಯ ಬಲೆಗೆ ಬೀಳಬೇಡಿ. ನಿಜ, ನಾವು ಚೆಂದದ ಕಾಲ ಕಳೆದೆವು. ಆದರೆ ನೆನಪಿಡಿ; ಉತ್ಸವಕ್ಕೆ ಸೇರುವುದು ಬಹು ಸುಲಭ. ನಾಳೆ–ನಾಡಿದ್ದು ಮನೆಗೆ ವಾಪಾಸಾಗಿ ಸಾಮಾನ್ಯ ಜೀವನಕ್ಕೆ ಬಿದ್ದ ಮೇಲೆ ಏನು ಮಾಡುತ್ತೇವೆ ಎಂಬುದು ನಿರ್ಣಾಯಕ. ಅಲ್ಲಿ ಏನಾದರೂ ಬದಲಾವಣೆ ಆಗುವುದೇ ಎಂಬುದು ಮುಖ್ಯ. 'ಆಗ ನಾವೆಲ್ಲ ಯೌವ್ವನಗರು... ಆ ದಿನಗಳು ಎಷ್ಟು ಚೆನ್ನಾಗಿತ್ತು.!' ಎಂದು ನೀವು ಈ ದಿನಗಳನ್ನು ನೆನಪು ಮಾಡಿಕೊಳ್ಳುವುದನ್ನು ನಾನು ಬಯಸುವುದಿಲ್ಲ. ನೆನಪಿಡಿ, ಇಲ್ಲಿ ಹೊಮ್ಮಿರುವ ಪ್ರಾಥಮಿಕ ಸಂದೇಶವೆಂದರೆ, 'ನಾವೀಗ ಪರ್ಯಾಯಗಳ ಬಗ್ಗೆ ಆಲೋಚಿಸಲಬಲ್ಲೆವು'. ಈ ನಂಬಿಕೆ ಕಳೆದುಕೊಂಡರೆ ಅತ್ಯುತ್ತಮವೆನಿಸುವ ಪ್ರಪಂಚದಲ್ಲಿ ನಾವು ಬದುಕಲಾರೆವು. ಆದರೆ ಇದನ್ನು ಸಾಧಿಸಲು ನಾವು ಬಹುದೂರ ಸಾಗಬೇಕಿದೆ. ಈ ಹಾದಿಯಲ್ಲಿ ಅನೇಕ ಕಠಿಣ ಪ್ರಶ್ನೆಗಳನ್ನು ಎದುರಿಸಬೇಕಿದೆ. ನಮಗೇನು ಬೇಡ ಎಂಬುದು ನಮಗೆ ಗೊತ್ತು. ಆದರೆ ನಮಗೇನು ಬೇಕು? ಯಾವ ಮತ್ತು ಎಂತಹ ಸಾಮಾಜಿಕ ಸಂಸ್ಥೆ ಅಥವಾ

ಸಂಘಟನೆ ಬಂಡವಾಳಶಾಹಿಗೆ ಪರ್ಯಾಯವಾಗಬಲ್ಲದು? ಯಾವ ರೀತಿಯ ಹೊಸ ನಾಯಕರುಗಳು ನಮಗೆ ಬೇಕಿದೆ?

ನೆನಪಿಡಿ. :ಭ್ರಷ್ಟಾಚಾರ ಅಥವಾ ದುರಾಸೆ ಸಮಸ್ಯೆಯಲ್ಲ. ವ್ಯವಸ್ಥೆ ನಿಜವಾದ ಸಮಸ್ಯೆ. ಈ ವ್ಯವಸ್ಥೆ ನೀವು ಭ್ರಷ್ಟರಾಗುವಂತೆ ಒತ್ತಾಯಿಸುತ್ತದೆ. ನಾವು ಎಚ್ಚರದಿಂದಿರಬೇಕಾದ್ದು ಕೇವಲ ವೈರಿಗಳ ಬಗೆಗಲ್ಲ. ಈ ಬದಲಾವಣೆಯ ಪ್ರಕ್ರಿಯೆಯನ್ನೇ ದುರ್ಬಲಗೊಳಿಸಲು ಯತ್ನಿಸುತ್ತಿರುವ ಛದ್ಮವೇಷದ ಸ್ನೇಹಿತರ ಬಗ್ಗೆಯೂ ಎಚ್ಚರದಿಂದಿರಬೇಕು. ಕೆಫಿನ್ ಇಲ್ಲದ ಕಾಫಿಯಂತೆ, ಆಲ್ಕೊಹಾಲ್ ಅಂಶವಿಲ್ಲದ ಬಿಯರ್‌ನಂತೆ ಅಥವಾ ಕೊಬ್ಬಿಲ್ಲದ ಐಸ್‌ಕ್ರೀಂನಂತೆ ಇವರು ನಮ್ಮ ಪ್ರತಿಭಟನೆಯನ್ನು ನಿರಪದ್ರವಿ ಒಣ ನೈತಿಕ ಪ್ರತಿಭಟನೆಯಾಗಿಸುತ್ತಿದ್ದಾರೆ. ಅವರು ಇದನ್ನೊಂದು ಜೀವ ಪ್ರಚೋದಕವಿಲ್ಲದ ಪ್ರಕ್ರಿಯೆಯನ್ನಾಗಿಸಲು ಯತ್ನಿಸುದ್ದಾರೆ. ನಾವೆಲ್ಲಾ ಇಲ್ಲಿ ಸೇರಿರುವುದುದ್ದು ಕೋಕ್ ಡಬ್ಬಿಗಳನ್ನು ಪುನರ್‌ನವೀಕರಿಸುವ ಅಥವಾ ಚಿಲ್ಲರೆ ಡಾಲರ್‌ಗಳನ್ನು ಸೇವಾ ಸಂಸ್ಥೆಗಳಿಗೆ ದಾನ ಕೊಡುವ ಅಥವಾ ಮೂರನೆ ಪ್ರಪಂಚದ ಹಸಿದ ಬಡಮಕ್ಕಳಿಗೆ ಶೇಕಡಾ ಒಂದರಷ್ಟು  ಹಣ ಹೋಗುತ್ತದೆ ಎಂಬ ಕಾರಣಕ್ಕೆ  ಎಲ್ಲ ತರಹದ ಭೋಗ ವಸ್ತುಗಳನ್ನು ಕೊಂಡು ಸಾರ್ಥಕ ಬದುಕು ನಡೆಸಿದ ಸಮಾಧಾನದ ದಿನಗಳು ಸಾಕು, ಇಂತಹ ಹುಸಿ ಸಾರ್ಥಕತೆ–ಸಮಾಧಾನಗಳ ಪ್ರಪಂಚ ಇನ್ನು ಬೇಡ ಎಂದು ಸಾರುವುದಕ್ಕೆ. ನಮ್ಮ ಕೆಲಸವನ್ನು ಹಾಗೂ ನಮ್ಮ ಸೆರೆಮನೆಗಳಲ್ಲಿನ ವಿಚಾರಣಾ ಕೈದಿಗಳ ಹಿಂಸಾತ್ಮಕ ವಿಚಾರಣೆಯನ್ನು ಹೊರಗುತ್ತಿಗೆ ನೀಡಿದ ನಂತರ, ನಮ್ಮ ಪ್ರೇಮ ಜೀವನವನ್ನು ಮದುವೆ ದಲ್ಲಾಳಿ ಸಂಸ್ಥೆಗಳು ಹೊರಗುತ್ತಿಗೆ ಪಡೆದ ನಂತರ, ನಮ್ಮ ರಾಜಕೀಯ ವ್ಯವಹಾರ–ಅನುಸಂಧಾನಗಳನ್ನೂ ಹೊರಗುತ್ತಿಗೆ ನೀಡಲು ಅವಕಾಶ ಮಾಡಿಕೊಟ್ಟಿರುವುದನ್ನು ನಾವು ಸಾಕಷ್ಟು ಕಾಲದಿಂದ ನೋಡುತ್ತಿದ್ದೇವೆ. ಇದು ನಿಲ್ಲಬೇಕು.

ನಾವು ಕಮ್ಯೂನಿಸ್ಟರಲ್ಲ, ಕಮ್ಯುನಿಸಂ ಎಂದರೆ ೧೯೯೦ರಲ್ಲಿ ಪತನಗೊಂಡ ವ್ಯವಸ್ಥೆ ಎಂಬುದಾದರೆ. ನೆನಪಿಡಿ; ಅವೊತ್ತಿನ ಕಮ್ಯುನಸ್ಟರೇ ಇವತ್ತಿನ ಅತಿ ದಕ್ಷ ಹಾಗೂ ನಿರ್ದಾಕ್ಷಿಣ್ಯರಾದ ಬಂಡವಾಳಶಾಹಿಗಳು. ಚೀನಾದಲ್ಲಿನ ಇವತ್ತಿನ ಬಂಡವಾಳಶಾಹಿ ವ್ಯವಸ್ಥೆ ನಮ್ಮ ಅಮೆರಿಕಾದ ಬಂಡವಾಳಶಾಹಿಗಿಂತ ಹೆಚ್ಚು ಚೈತನ್ಯಶಾಲಿಯಾಗಿದೆ. ಆದರೆ ಅವರಿಗೆ ಪ್ರಜಾಪ್ರಭುತ್ವದ ಅಗತ್ಯವಿಲ್ಲ. ಹಾಗಾಗಿ ಇಂದು ನೀವು ಬಂಡವಾಳಶಾಹಿಯನ್ನು ಟೀಕಿಸಿದರೆ ಅದು ಪ್ರಜಾಪ್ರಭುತ್ವ ವಿರೋಧಿ ಎಂಬ ಮಿಥ್ಯಾರೋಪಕ್ಕೆ ಒಳಗಾಗಿ ನರಳುವ ಅಗತ್ಯವಿಲ್ಲ. ಪ್ರಜಾಪ್ರಭುತ್ವ ಹಾಗೂ ಬಂಡವಾಳಶಾಹಿಯ ನಡುವಣ ಮದುವೆ ಮುರಿದು ಬಿದ್ದಿದೆ. ಬದಲಾವಣೆ ಸಾಧ್ಯ ಎನ್ನಿಸಿದೆ.

ಏನು ಸಾಧ್ಯ ಎಂಬುದನ್ನು ಇವತ್ತು ನಾವು ಹೇಗೆ ಅರ್ಥೈಸಬೇಕು? ಸಮೂಹ ಮಾಧ್ಯಮಗಳತ್ತ ಒಮ್ಮೆ ನೋಡಿ. ಒಂದೆಡೆ ತಂತ್ರಜ್ಞಾನದಲ್ಲಿ ಮತ್ತು ಲೈಂಗಿಕತೆಯಲ್ಲಿ ಪ್ರತಿಯೊಂದನ್ನೂ ಸಾಧಿಸಲು ಸಾಧ್ಯ. ನೀವು ಚಂದ್ರನತ್ತ ಪಯಣಿಸಬಹುದು ಅಥವಾ *ಬಯೋಜೆನೆಟಿಕ್* ತಂತ್ರಜ್ಞಾನದ ಮೂಲಕ ಅಮರರೂ ಆಗಬಹುದು. ಅಥವಾ ಪ್ರಾಣಿಗಲೋಂದಿಗೋ, ಮತ್ತಾವುದರೊಂದಿಗೋ ಸಂಭೋಗಿಸಲೂಬಹುದು. ಆದರೆ ನಮ್ಮ ಸಮಾಜ ಹಾಗೂ ಆರ್ಥಿಕತೆಯ ಕ್ಷೇತ್ರಗಳನ್ನೊಮ್ಮೆ ನೋಡಿ. ಇಲ್ಲಿ ಹೆಚ್ಚೂಕಡಿಮೆ ಎಲ್ಲವೂ ಅಸಾಧ್ಯವೆಂದು ಪರಿಗಣಿಸಲಾಗಿದೆ. ಶ್ರೀಮಂತರ ಮೇಲೆ ಒಂದಿಷ್ಟು ತೆರಿಗೆ ಹೆಚ್ಚು ಮಾಡಬೇಕೆನ್ನಿ. ಅವರು ಅದು ಅಸಾಧ್ಯ ಎನ್ನುತ್ತಾರೆ.. ಇದರಿಂದ ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ಎಚ್ಚರಿಸುತ್ತಾರೆ. ಆರೋಗ್ಯ ಸೇವಾ ಕ್ಷೇತ್ರಕ್ಕೆ ಸ್ವಲ್ಪ ಹೆಚ್ಚು ಹಣ ಬೇಕೆನ್ನಿ. 'ಇದು ಅಸಾಧ್ಯ. ಇದೇನು ಸರ್ವಾಧಿಕಾರಿ ಪ್ರಭುತ್ವವೋ?' ಎಂದು ಕೇಳುತ್ತಾರೆ. ನಿಮ್ಮನ್ನು ಅಮರರನ್ನಾಗಿಸುವ ಭರವಸೆ ನೀಡುತ್ತಾ, ಅದೇ ವೇಳೆ ಆರೋಗ್ಯ ಸೇವೆಗೆ ಸ್ವಲ್ಪ ಹೆಚ್ಚು ಹಣ ಬೇಕೆಂದರೆ ನಿರಾಕರಿಸುವ ಈ ಜಗತ್ತಿನಲ್ಲಿ ಎಲ್ಲೋ ಏನೋ ಬಹುಮುಖ್ಯವಾದ ದೋಷವಿದೆ. ಹಾಗಾಗಿ ನಾವೀಗ ಇಲ್ಲಿ ನಮ್ಮ ಆದ್ಯತೆಗಳನ್ನು ನೇರವಾಗಿ, ಸ್ಪಷ್ಟವಾಗಿ ನಿರೂಪಿಸಿಕೊಳ್ಳುವ ಜರೂರಿದೆ. ನಮಗೆ ಉನ್ನತ ಶ್ರೇಣಿಯ ಜೀವನಮಟ್ಟ ಬೇಕಿಲ್ಲ; ಆದರೆ ನಮಗೆ ಉತ್ತಮ ಗುಣಮಟ್ಟದ ಜೀವನ ಬೇಕಾಗಿದೆ. ನಾವು ಯಾವ ಅರ್ಥದಲ್ಲಿ ಕಮ್ಯೂನಿಸ್ಟರೆಂದರೆ ನಮಗೆ ಜನಸಾಮಾನ್ಯರ ಬದುಕಿನ ಬಗ್ಗೆ ಕಾಳಜಿ ಇದೆ ಎಂಬ ಅರ್ಥದಲ್ಲಿ.  ನಿಸರ್ಗದ ಮೇಲಿನ ದಾಳಿಯಿಂದ ಜನಸಾಮಾನ್ಯರಾದವರು, ಬೌದ್ಧಿಕ ಆಸ್ತಿ ಹಕ್ಕಿನಿಂದಾಗಿ ಖಾಸಗೀಕರಣಕ್ಕೊಳಪಟ್ಟು ಜನ ಸಾಮಾನ್ಯರಾದವರು, *ಬಯೊಜೆನೆಟಿಕ್ಸ್‌ಗೆ* ಬಲಿಯಾಗಿ ಜನಸಾಮಾನ್ಯರಾದವರು– ಇವರಿಗಾಗಿ, ಈ ಕಾರಣಕ್ಕೋಸ್ಕರವಾಗಿ ಮಾತ್ರ ನಾವು ಹೋರಾಡಬೇಕಿದೆ..


ಕಮ್ಯುನಿಸ್ಟರ ವೈಫಲ್ಯ ಸಂಪೂರ್ಣವಾದದ್ದು. ಆದರೆ ಜನಸಾಮಾನ್ಯರ ಬವಣೆಗಳು ಹಾಗೇ ಉಳಿದಿವೆ. ನಮ್ಮ ವಿರೋಧಿಗಳು 'ನೀವು ಅಮೆರಿಕನ್ನರಲ್ಲ' ಎನ್ನುತಿದ್ದಾರೆ. ಆದರೆ ಅಮೆರಿಕನ್ನರು ಎಂದು ಘೋಷಿಸಿಕೊಳ್ಳುವ ಸಂಪ್ರದಾಯಸ್ಥ ಮೂಲಭೂತವಾದಿಗಳಿಗೆ ನಾವು ನೆನಪಿಸಿಕೊಡಬೇಕಿದೆ. ಕ್ರಿಶ್ಚಿಯಾನಟಿ ಎಂದರೇನು? ಅದೊಂದು ಪವಿತ್ರ ಚೈತನ್ಯ. ಪವಿತ್ರ ಚೈತನ್ಯ ಎಂದರೇನು? ಅದೊಂದು ಪರಸ್ಪರ ಪ್ರೀತಿಯಿಂದ ಸಂಬಂಧಿತರಾದ ಮತ್ತು ಅದನ್ನು ಆಗು ಮಾಡಲು ತಮ್ಮದೇ ಆದ ಸ್ವಾತಂತ್ರ್ಯ ಮತ್ತು ಜವಾಬ್ದಾರಿಗಳನ್ನುಳ್ಳ ಸಮ ಸಮಾಜದ ಕನಸು ಕಾಣುವ ಆಸ್ತಿಕರ ಸಮುದಾಯ. ಈ ಅರ್ಥದಲ್ಲಿ ಈಗ ಪವಿತ್ರ ಚೈತನ್ಯ ಇಲ್ಲಿದೆ... ವಾಲ್‌ಸ್ಟ್ರೀಟ್‌ನಲ್ಲಿ ಈಗ ಪೇಗನ್ನರು ಅಪವಿತ್ರ ಮೂರ್ತಿಗಳನ್ನು ಪೂಜಿಸುತ್ತಿದ್ದಾರೆ. ನಮಗೀಗ ಬೇಕಾಗಿರುವುದು ತಾಳ್ಮೆ. ನನಗೆ ಈ ವಿಷಯದಲ್ಲಿ ಒಂದು ಭಯವಿದೆ. ಸ್ವಲ್ಪ ಸಮಯದ ನಂತರ ನಾವು ಮನೆಗೆ ಹಿಂದಿರುಗಿ,  ನಂತರ ವರ್ಷಕ್ಕೊಮ್ಮೆ ಇಲ್ಲಿ ಸೇರಿ ಬಿಯರ್ ಕುಡಿಯುತ್ತಾ 'ಕಳೆದ ವರ್ಷ ನಾವಿಲ್ಲಿ ಎಷ್ಟು ಚೆಂದದ ಕಾಲ ಕಳೆದೆವು!' ಎಂದು ಹಳೆಯ ನೆನಪುಗಳಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುವ ಭಯವದು. ಇಲ್ಲ, ಹೀಗಾಗಲು ಬಿಡುವುದಿಲ್ಲ ಎಂಬ ಆಶ್ವಾಸನೆಯನ್ನು ನಿಮಗೇ ನೀವೇ ಕೊಟ್ಟುಕೊಳ್ಳಿ. ಜನ ಬಹಳ ಬಾರಿ ಏನನ್ನೋ ಆಸೆ ಪಡುತ್ತಾರೆ; ಆದರೆ ನಿಜವಾಗಿ ಅದು ಅವರಿಗೆ ಬೇಕಿರುವುದಿಲ್ಲ ಎಂಬುದು ನಮಗೆ ಗೊತ್ತು. ಆದರೆ ನೀವು ಆಸೆ ಪಡುವುದನ್ನು ನಿಜವಾಗಿ ಪಡೆಯಲು ಹಿಂಜರಿಯಬೇಡಿ. ನಿಮಗೆಲ್ಲ ಧನ್ಯವಾದಗಳು.

(ಕನ್ನಡಕ್ಕೆ: **ಟಿ.ಅವಿನಾಶ್**).

**ಪರ್ಸಂಗ**

# ಮಾದೇವ ಸಮಾಜವಾದಿ ಆದ ಕತೆ...

**–ರವಿಚಂದ್ರ ಚಿಕ್ಕೆಂಪಿಹುಂಡಿ**



**ಪ್ರ**ತಿ ವರ್ಷ ಸ್ವಾತಂತ್ರ ದಿನಾಚರಣೆ ಅಂಗೆ ಈ ದಿನವೂ ಬೆಳ್ಳಂಬೆಳಗ್ಗೆ ಸ್ಕೂಲ್ ಮುಂದೆ ಹಾಜರಾಗಿದ್ದ ಮಾದೇವನಿಗೆ ನಿರಾಶೆ ಕಾದಿತ್ತು. ಪಕ್ಕದಲ್ಲಿದ್ದವರು  "ಯೋ ಇವತ್ತು ಹೈಕ್ಳಾಟ ಇಲ್ವಂತ ಕಣ. ಇಸ್ಕೂಲ್ನವ್ರು ಅದ್ಯಾರ್ನ ಕರಸಿದರಂತ. ಅವ್ರು ಅದ್ಯಾನ ಬಾಷ್ಣ ಮಾಡಕ್ ಬಂದಿದರಂತ ಕಣ ಅಂದ್ರು. ಅವರು ಆಗೆ ಹೇಳಿದ ತಕ್ಷಣ ಮಾದೇವ  "ಥೂಥೇರಿಕಿ ಹೊಲ್ದ ಕತ ನೋಡಿ ತಲ್ಕೆಟ್ಟೋಗಿ ಹೈಕ್ಳಾಟ ನೊಡಮು ಅಂತ ಬಂದ್ರ, ಇನ್ನ್ ಇವ್ರ ಬಾಷ್ಣ ಬ್ಯಾರಿಯ... ಅದ್ಯಾನ್ ಮಾತಾಡಿರ ತಾಡ್ಯಪ್ಪ ಅದ್ನು ನೋಡೆಬುಡಮು" ಅಂತ ವೇದಿಕೆಯ ಹತ್ತಿರಕ್ಕೆ ಬಂದ. ವೇದಿಕೆಯ ಮೇಲೆ 'ಸಮಾಜವಾದಿ ಗೆಳೆಯರು'ಅಂತ ಬರೆದು ನೇತು ಹಾಕಿದ್ದ ಬ್ಯಾನರ್ ನೋಡಿದ. ಮೊದಲೆಲ್ಲ ರೈತಸಂಘ, ಹಸಿರು ಸೇನೆ, ಆರೆಸೆಸ್, ದಲಿತ ಸಂಘರ್ಷ ಸಮಿತಿ, ಸಿನಮಾ ನಟರ ಅಭಿಮಾನಗಳ ಸಂಘ, ಹೀಗೆ ಇನ್ನು ಹಲವಾರು ಸಂಘದ ಹೆಸರಿನ ಬ್ಯಾನರ್‌ಗಳು ಊರೊಳಗೆ ನುಗ್ಗಿದ್ದರಿಂದ ಅವುಗಳನ್ನು ನೋಡಿದ್ದ ಮಾದೇವನಗೆ ಹತ್ತರ ಮಧ್ಯೆ ಇದೂ ಒಂದರಂತೆ ಕಂಡು ಪಿಚ್ಚೆನಿಸಿ 'ಎಲ್ರೂ ಒಂದಿಯ ಆದ್ರ ಹೆಸರ್ ಬ್ಯಾರ್ ಬ್ಯಾರಿಯ' ಅಂತ ಬೇಸರದಿಂದಲೇ ಭಾಷಣ ಕೇಳಿಸಿಕೊಳ್ಳತೊಡಗಿದ. ಕೇಳಿಸಿಕೊಳ್ಳತೊಡಗಿದಂತೆ ಆಶ್ಚರ್ಯವಾಯಿತು.

ಭಾಷಣ ಮಾಡ್ತಾ ಇದ್ದವರಲ್ಲಿ ಒಬ್ಬರು ಸಾವಯವ, ಬೀಜಸಂಗ್ರಹ ಅಂದ್ರು. ಇನೊಬ್ಬರು ಸಾಹಿತ್ಯ ಚಳುವಳಿ ಅಂದ್ರು. ಮತ್ತೊಬ್ಬರು ಭೂಮಿ ಬಿಸಿಯಾಗಿದೆ, ಅದು ಬಿಸಿಯಾಗಿರುವುದರಿಂದ ಹೇಗೆ ತೊಂದರೆಗಳು ಎದುರಾಗುತ್ತವೆ, ನೀರನ್ನ ಕಾಪಾಡಿ ಅದನ್ನ ಉಳಿಸುವ ಕುರಿತು ಸಿನಮಾ ಒಂದನ್ನ ತೋರಿಸಿ ಭಾಷಣ ಮುಗಿಸಿದರು.

ಹೊಲದ ಕಡೆ ಹೆಜ್ಜೆ ಹಾಕ್ತ ಮನಸ್ಸಿನಲ್ಲೆ ಲೆಕ್ಕ ಹಾಕತೊಡಗಿದ್ದ ಮಾದೇವ. 'ಅವ್ರೆ ಮದಲ್ ಬಂದವುರ್ಲಿ ಒಬ್ರು ಕಬ್ಬು ಬತ್ತ ಅಂದ್ರು, ಆದ್ರ ಜ್ವಾಳ ರಾಗಿ ಕಾಳು–ಕಡ್ಡಿ ಅಂತ ಮಾತಾಡದ್ದ ಕಾಣ್ಣಿಲ್ಲ, ಇನ್ನೊಬ್ರು ಜ್ಯಾತಿ ಅನ್ಯಾಯ ಅಂದ್ರು, ಆ ತುಂಡೈಕ ಪಿಚ್ಚರ್‌ನವ್ರ ಪೋಟ ಎತ್ಕಂದು ಕುಣುದ್ರು, ಅದ್ಯಾರ ಅವ್ರು ವೊರ್ದೇಸ್‌ದವುರ್ ಕಂಡಂಗ ವರ್ಷಕ್ಕೊಂದ್‌ಸತಿ ಒಂದೊಂದ್ ಚಡ್ಡಿ ಸಿಗಸ್ಕಂದು ಕೈಲಿ ಒಂದೊಂದ್ ದೊಣ್ಣ ಇಡ್ಕಂದು ದೇಶ, ಧರ್ಮ, ಆಣ ಮಾಡಿ ಸಪ್ತ ಮಾಡಿ ಅಂದ್ಬುಟ್ಟು ಹೊಂಟೊದ್ರು, ಇವತ್ ಬಂದಿದವ್ರು ಮಾತ್ರ ಅದ್ನೆಲ್ಲ ಬುಟ್ಬುಟ್ಟು ಭೂಮಿ ಬಿಸಿಯಾಗದ ಅಂತ ಪಿಚ್ಚರ್ ತೋರುಸ್ತರ... ಕಳ್ಳ ಬೀಜ ಮಾರ್ಕೆಟ್‌ಗ ಬಂದವ ಹುಷಾರಾಗಿರಿ ಅಂತರ, ಕಂಪನಿಗಳು ನಮ್ನ ನಂಬಿಸಿ ಮೋಸ ಮಾಡ್ತವ ಅಂತ ಅದ್ಯಾನೆನ ಯೋಳ್ತರಲ್ಲಪ್ಪ. ವಾಗವತ್ಗ ಅವುರ್ನ ಒಂದ್ಸತು ಮಾತಾಡ್ಸ್ ಬುಡ್ಬೇಕು' ಅಂತ ಹೊಲದೊಳಗೆ ಅವರಿಗಾಗಿ ದಾರಿ ಕಾಯ್ತ ನಿಂತ.

ರೈತರಿಗೆ ಒದಗುವ ಪರೋಕ್ಷ ಸಂಕಟಗಳ ಕುರಿತು ಅಗಾಧವಾಗಿ ಮಾತಾಡಿದ್ದ ಸಮಾಜವಾದಿ ಗೆಳೆಯರು ಊರಿನ ಜನರ ಸತ್ಕಾರದೊಂದಿಗೆ ಬೀಳ್ಕೊಂಡು ನಗರಕ್ಕೆ ಹೋಗುವ ಬಸ್ಸು ಹತ್ತಲು ಒಂದುವರೆ ಮೈಲು ದೂರ ಇದ್ದುದರಿಂದ ಕಾಲುನಡಿಗೆಯಲ್ಲಿ ಹೊಲಗಳ ನಡುವೆ ದಾರಿ ಸವೆಸುತ್ತಿದರು. ಅವರ ಎದುರಿಗೆ ಹತ್ತಿ ಹೊಲದೊಳಗಿಂದ ಬಂದು ಪ್ರತ್ಯಕ್ಷನಾದ ಮಾದೇವ 'ನಮಸ್ಕಾರ ಸಾ... ನನ್ನೆಸ್ರು ಮಾದೇವ ಅಂತಸಾ .... ಈ ಹೊಲ ನಮ್ದಿಯಸಾ' ಅಂತ ಮಾತಿಗೆ ಸುರುಮಾಡಿದ.

'ಅಲ್ಲಾಸಾ... ಅದ್ಯಾನ ನೀಮು ಭಾಷಣ್ದಲಿ ಬಿತ್ನ ಕಾಳ್ಗ ಬೆರ್ಕ ಮಾಡ್ತರ ಅಂತಿದ್ರ್ಯಲ್ಲ... ನಾವೆಲ್ಲ ಈಗ ಬಿತ್ನ ಕಾಳ್ನ ಗೊಬ್ಬರ್ದಂಗ್ಡಿ ಇಲ್ದೆರ ಸೊಸೈಟಿಯಿಂದ್ಲಿಯಸಾ ತರದು. ಮೊದ್ಲೆಲ್ಲ ಎಲ್ಲಾ ಬಿತ್ನನುವಿ ಮನಲೆ ವತ್ತರ್ಸಿ ಮಡಿಕತಿದ್ರು ಈಗ ಅದೆಲ್ಲ ಎಲ್ಲಿದ್ದು ಬುಡಿಸಾ... ಈಗೆಲ್ಲ ಯಲ್ಲ ಅಂಗ್ಡಿಯಿಂದ್ಲಿಯ, ಹತ್ತಿ, ಜ್ವಾಳ್ಯಂತ, ರಾಗ್ಯಂತ, ಕಳ್ಳಕಾಯಂತ, ಅವ್ರ್ಯಂತ, ಅಲ್ಸಂದ್ಯಂತ, ಎಲ್ಲಾ ಬಿತ್ನನುವಿ ಸೊಸೈಟಿಲೆ ಕೊಡ್ತರಸಾ. ಅದ್ಯಾನ್ಯಾರು ಎಡ್ವಟ್ಟಾಗಿದ್ದಸಾ ಅಗರ ಯಾಕಂದ್ರ, ನೀವೆ ನೋಡಿಸಾ... ಇಲ್ಲಿ ಈ ಹತ್ತಿ ಮೈಳೆಲ್ಲವಿ ಎದಮಟ್ಟಕ್ ಬೆಳ್ದು ಹೂ ಬುಟ್ಟವ. ಆದ್ರ ಕಾಯೆ ಆಗಿಲ್ಲಸಾ. ಎಲ್ರುವಿ ಈಸತು ಮಾದೇವನ್ಗ ಒಳ್ಳೆ ಫಸ್ಲು ಕಣ, ಒಳಿ ಲಾಟ್ರಿ ಹೊಡ್ದಂಗಾಯ್ತು ಅಂತ ಅಂತಿದ್ರು. ಈಗಾಗ್‌ಕೂತದ.... ನನ್ನ್ಂತರನಿಯ ಇಲ್ಲಿ ಎಲ್ರುವಿ ಇನ್ನೂರ್ ಎಕರ್‌ಗಂಟ ಹತ್ತಿ ಹಾಕರಸಾ. ಎಲ್ಲರ್ದುರ್ಗ ಇಂಗೆ ಆಗದ ಯಾನ್ಮಾಡದು ಅಂತೆ ಗೊತ್ತಾಯ್ತಿಲ್ಲಸಾ" ಅಂದ.

ಸ್ವಲ್ಪ ಹೊತ್ತು ಹತ್ತಿ ಹೊಲದೊಳಗೆ ಕೂತ ಸಮಾಜವಾದಿ ಗೆಳೆಯರು ಒಂದು ಪ್ಯಾಕ್ ಸಿಗರೇಟ್ ಖಾಲಿ ಮಾಡಿ ಅದು ಮುಗಿಯುವುದರೊಳಗೆ ಒಂದು ನಿರ್ಧಾರಕ್ಕೆ ಬಂದಿದ್ದರು. 'ಒಂದ್ ಕೆಲ್ಸ ಮಾಡಿ ಮಾದೇವ್ ಅವ್ರೆ. ನೀವು ನಾಳೆ ಸೊಸೈಟಿಯಿಂದ ಕೊಟ್ಟಿದ್ದ ಹತ್ತಿ ಬೀಜದ ಬ್ಯಾಗು, ಸೊಲ್ಪ ಹತ್ತಿ ಬೀಜ, ಅವರು ಕೊಟ್ಟಿದ್ದ ಬಿಲ್ಲು ಎಲ್ಲಾ ತಗೊಂಡು ನಗರಕ್ಕೆ ಬನ್ನಿ" ಅಂತ ಹೇಳಿ ಅವರು ಯಾವಾಗಲು ಕೂರುತ್ತಿದ್ದ ಟೀ ಅಂಗಡಿ ಅಡ್ರೆಸ್ ಕೊಟ್ಟು ಹೊರಟ್ರು

ಮಾರನೆ ದಿನ ಬೆಳಗಿನ ಜಾವವೆ ಸಮಾಜವಾದಿ ಗೆಳೆಯರು ಕೊಟ್ಟಿದ್ದ ಅಡ್ರೆಸ್ ಮುಂದೆ ಹಾಜರಾಗಿದ್ದ ಮಾದೇವ. ಸಮಾಜವಾದಿ ಗೆಳೆಯರು ಟೀ ಅಂಗಡಿ ಹತ್ತಿರ ಬರುತ್ತಿದ್ದಂತೆಯೆ ತಂದಿದ್ದ ಹತ್ತಿ ಬೀಜದ ಬ್ಯಾಗು, ಬಿಲ್ಲು ಎರಡನ್ನು ಅವರ ಕೈಗಿತ್ತ. ಆ ಸಮಾಜವಾದಿ ಗೆಳೆಯರು ಟೀ ಅಂಗಡಿಯೊಳಗೆ ಒಂದು ಟೀ, ಒಂದು ಸಿಗರೇಟ್ ಮುಗಿಯುವುದರೊಳಗೆ ಆ ಹತ್ತಿ ಬೀಜದ ಕಂಪನಿಯ ವಿರುದ್ಧ ಕೇಸ್ ಹಾಕಲು ನಿರ್ಧರಿಸಿ ಎದ್ದರು. ಮಾದೇವನನ್ನು ಕರೆದುಕೊಂಡು ಹೋಗಿ ಗ್ರಾಹಕರ ನ್ಯಾಯಲದಲ್ಲಿ ನೂರು ರುಪಾಯಿ ಖರ್ಚಿನೊಂದಿಗೆ ಬೀಜ ಕೊಟ್ಟ ಕಂಪನಿಯ ವಿರುದ್ಧ ಒಂದು ಕೇಸ್ ಹಾಕಿಸಿದರು.

ರಾತ್ರಿಯಿಡಿ ನಿದ್ದೆ ಬಾರದೆ ಹೊಲದೊಳಗಿನ ಅಟ್ಟದ ಗುಳ್ಳಿನೊಳಗೆ ಒದ್ದಾಡುತ್ತಿದ್ದ ಮಾದೇವ 'ಇವುರ್ನತಾನಿಯ ಯಾಗ್ಯ ನಂಬದು... ಒಬ್ಬ ಕಿಲಸ್ತರವ, ಇನ್ನೊಬ್ಬ ಗವುರ್ಮೆಂಟ್ ಕೆಲಸ್ದವ, ಇನ್ನೊಬ್ಬ ಯಾಪಾರ್ದವ, ಇನ್ನೊಂದಿಬ್ರು ಒಂದ್ ಜುಬ್ಬ ಸಿಗಾಕಂದು ಗಡ್ಡ ಬುಟ್ಕಂದು ತಿರ್ಗಾಡ್ತಿದ್ರು... ನೊಡಮು ತಾಡ್ಯಪ ಯಾರ್ ಕೈ ಬುಟ್ರುವಿ ದೇವ್ರು ಅನ್ನವ ಒಬ್ಬ ಅವ್ನಲ್ಲ' ಅಂತ ದಿಂಬಗ್ ತಲೆ ಕೊಟ್ಟ.

ಮಾದೇವ ಹಾಕಿದ್ದ ಅರ್ಜಿ ದಿನಕ್ಕೊಂದು ರೂಪ ಪಡ್ಕೊಂಡು ದೊಡ್ಡ ಗಲಾಟೆಯಾಗೋಕೆ ಶುರುವಾಯ್ತು. ಸಮಾಜವಾದಿ ಗೆಳೆಯರೆಲ್ಲ ಮಾದೇವನ ಊರಿಗೆ ಇನ್ನೊಂದು ಭೇಟಿ ಕೊಟ್ಟು ಅವನ ಮೂಲಕ ಊರಿನ ಜನರನ್ನೆಲ್ಲ ಅರಳಿ ಕಟ್ಟೆ ಹತ್ತಿರಕ್ಕೆ ಸೇರಿಸಿದ್ರು. ಮಾದೇವ 'ಇಲ್ ಕ್ಯೊಳ್ಳಪ ನಾನುವಿ ಇದ್ನ ನಂಬಿರ್ನಿಲ್ಲ ಕಣ. ಆದ್ರ ಅವ್ರಿಯ ಮುಂದಕ್ ನಿಂತ್ಕಂದು ಬರಿ ನೂರುಪಾಯಿನ್ ಖರ್ಚ್ಲಿ ಕೋರ್ಟ್ಗ ಕೇಸ್ ಹಾಕ್ಸರ. ನಾಳ್ಗ ನನ್ನ್ ಜೊತಲಿ ಬರೊರೆಲ್ಲವಿ ಬಿತ್ನ ಕಾಳನ್ ಬ್ಯಾಗು, ಬಿಲ್ಲು ,ನೂರ್ ರೂಪಾಯಿ ತಕಂದು ಬನ್ನಿ ಕೇಸ್ ಹಾಕಮು" ಅಂತ ಹೇಳಿದ. ಸಭೆ ಮುಗಿಯಿತು.

ಮಾರನೆಯ ದಿನ ಬೀಜ ಕಂಪನಯ ವಿರುದ್ಧ ಇದ್ದ ಮಾದೇವನ ಒಂದು ಅರ್ಜಿಯ ಜೊತೆಗೆ ನೂರು ಅರ್ಜಿ ಆಗಿದ್ದವು. ಸಮಾಜವಾದಿ ಗೆಳೆಯರ ಜೊತೇಲಿ ಮಾದೇವ, ಮಾದೇವನ ಜೊತೇಲಿ ಊರಿನ ಜನ, ಆ ಊರಿನ ಜನರ ಜೊತೇಲಿ ಸುತ್ತಮುತ್ತಲ ಊರಿನ ಜನ ಸೇರಿಕೊಂಡು ರಸ್ತೆ ತಡೆ ಅಂತ ಬೀದಿಗೆ ಇಳದ್ರು. ದಿನೆ–ದಿನೇ ಅದು ರಾಜಕಾರಣದ ತಿರುವು ಪಡೆದು ಇಡೀ ಜಿಲ್ಲೆಯ ಹತ್ತಿ ಹಾಕಿದ್ದ ರೈತರು ಗ್ರಾಹಕರ ನ್ಯಾಯಲಯದಲ್ಲಿ ಬೀಜ ಕಂಪನಿಯ ವಿರುದ್ಧ ಅರ್ಜಿ ಹಾಕೋದಕ್ಕೆ ಶುರುಮಾಡಿದರು. ತನಿಖೆ ನಡೆಯೋದಕ್ಕೆ ಆರಂಭ ಆಯ್ತು. ಸರ್ಕಾರಿ ಅಧಿಕಾರಿಗಳು ಬಂದು ಈ ಪ್ರದೇಶದ ಮಣ್ಣೇ ಸರಿ ಇಲ್ಲಾ ಅಂದ್ರು. ಕೃಷಿ ವಿಜ್ಞಾನಿ ಒಬ್ರು ಬಂದು ಮಣ್ಣು ಸರಿಯಾಗಿದೆ, ಬೀಜ ಬಂಜೆ ಅಂದ್ರು. ಒಟ್ಟಿನಲ್ಲಿ ಮೂರು ತಿಂಗಳೊಳಗೆ ಮೊದಲನೆ ಅರ್ಜಿದಾರ ಮಾದೇವನಿಗೆ ಎಕರೆಗೆ ಎರಡು ಸಾವಿರ ರುಪಾಯಿ ಪರಿಹಾರ ಬಂತು.

ಪರಿಹಾರದ ದುಡ್ಡು ತೆಗೆದುಕೊಳ್ಳಲು ನಗರಕ್ಕೆ ಬಂದಿದ್ದ ಮಾದೇವ ಸಮಾಜವಾದಿ ಗೆಳೆಯರು ಕೂತಿದ್ದ ಟೀ ಅಂಗಡಿ ಅಡ್ರೆಸ್ಸಿಗೆ ಬಂದು ಸಮಾಜವಾದಿ ಗೆಳೆಯರ ಟೀ ಪಾರ್ಟಿಯೊಂದಿಗೆ ಸೇರಿಕೊಂಡು ಮಾತಿಗೆ ಶುರು ಮಾಡಿದ: 'ಅಂತು ಇವತ್ತು ಪರಿಹಾರ ಬಂತುಸಾ. ಅವತ್ತು ನೀಮು ಯೊಳ್ದೆ ಇದ್ದಿದ್ರ ನಮ್ಗ ಇದೆಲ್ಲಾ ಗೊತ್ತಾಯ್ತಿರ್ನಿಲ್ಲ ನೋಡಿ. ಇದೆ ಇಷ್ಟಾದ್ರ... ಇನ್ನು ಎಲ್ಲೆಲ್ಲಿ ಯಾನ್ಯಾನ್ ಕಾದಿದ್ದ, ಯಾರ್ ಯಾರ್ ಯಾವ್ ಯಾವ್ ರೂಪ್ದಲಿ ಮೋಸ ಮಾಡಿರ... ಎಲ್ಲಾ ಗಾಳಿ ಗಂಟು. ಒಟ್ನಲ್ಲಿ ನಿಮ್ ಜೊತಲಿದ್ರ ಇಂತೆವೆಲ್ಲ ಗೊತ್ತಾಯ್ತುವ ನೊಡ್ಯಪ' ಅಂತ ಗ್ಲಾಸಿನೊಳಗಿದ್ದ ಒಂದು ಗುಟುಕು ಟೀಯನ್ನ ಸೊರ್ ಅಂತ ಎಳ್ದ್ ಬಾಯಲ್ಲುರಿತಿದ್ದ ಮೋಟ್ ಬೀಡಿನ ಟೇಬಲ್ಲಿನ ಹಲಗೆ ಮೇಲೆ ತೀಡಿ, 'ಸಾ ನನ್ನು ನಿಮ್ ಸಮಾಜ್ವಾದಿಗ್ ಸೇರಸ್ಕಳಿ ಮಂತ' ಅಂದ!

*

## ಇಂಧನ ಬೆಲೆ ಏರಿಕೆ: ಒಂದು ಸಲಹೆ

ಪ್ರತಿ ಬಾರಿ ಪೆಟ್ರೋಲ್ ಬೆಲೆ ಹೆಚ್ಚಿದಾಗಲೂ ಶ್ರೀಸಾಮಾನ್ಯರೂ, ಪ್ರತಿಪಕ್ಷದವರೂ ಆಡಳಿತ ಪಕ್ಷಕ್ಕೆ ಹಿಡಿ ಶಾಪ ಹಾಕುತ್ತಾರೆ. ಆಡಳಿತ ಪಕ್ಷ– ಅದು ಯಾವುದೇ ಆಗಿರಲಿ– ಅಂತಾರಾಷ್ಟ್ರೀಯ ಮಾರುಕಟ್ಟೆಯತ್ತ ಕೈ ತೋರಿಸುತ್ತದೆ. ದಿನ ಕಳೆದಂತೆ ಜನ ಅದಕ್ಕೇ ಹೊಂದಿಕೊಳ್ಳುತ್ತಾರೆ. ಕೆಲವು ಸಮಯದ ನಂತರ ಮತ್ತೆ ಪೆಟ್ರೋಲ್ ಬೆಲೆ ಏರುತ್ತದೆ. ಮತ್ತೆ ಅದೇ. ಆದರೆ ಈ ವಿಷಯದಲ್ಲಿ ನಾಗರಿಕರಾದ ನಮ್ಮ ಕರ್ತವ್ಯ ಏನೂ ಇಲ್ಲವೆ? ನಾವು ಪ್ರಾಮಾಣಿಕವಾಗಿ ಚಿಂತಿಸಬೇಕಿದೆ. ನಾವು ಹೀಗೆ ಮಾಡಬಹುದು:

೧. ವಾರದಲ್ಲಿ ಒಂದು ನಿರ್ದಿಷ್ಟ ದಿನ ನಮ್ಮ ಇಂಧನಚಾಲಿತ ವಾಹನವನ್ನು ಕಡ್ಡಾಯವಾಗಿ ಬಳಸದಿರಲು ಸಂಕಲ್ಪ ಮಾಡುವುದು. ಅಂದು ಕಾಲ್ನಡಿಗೆಯಲ್ಲಿ ಅಥವಾ ಸೈಕಲ್ ಮೇಲೆ ಸಂಚಾರ ಮಾಡಬಹುದು. ತೀರಾ ಅಗತ್ಯವಾದಲ್ಲಿ ಸಾರ್ವಜನಿಕ ವಾಹನ ಬಳಸಬಹುದು.

೨. ಸರ್ಕಾರದ ಆದೇಶದ ಅಗತ್ಯವಿಲ್ಲದ ಇಂತಹ ಕಾರ್ಯಕ್ರಮವನ್ನು ಆಯಾ ಜಿಲ್ಲಾಧಿಕಾರಿಗಳು ಆಸಕ್ತಿ ವಹಿಸಿ ಕೈಗೆತ್ತಿಕೊಳ್ಳುವಂತೆ ಎಲ್ಲ ಜನ ಸಂಘಟನೆಗಳು ಒಟ್ಟುಗೂಡಿ ಪ್ರೇರಿಸಬೇಕು.

೩. ಈ ಕಾರ್ಯಕ್ರಮದ ಉದ್ಘಾಟನೆಯ ದಿನ ಊರಿನಲ್ಲಿ ಪ್ರಚಾರಕ್ಕಾಗಿ ಸಾಮೂಹಿಕ ಸೈಕಲ್ ಜಾಥಾ ಅಥವಾ ಪಾದಯಾತ್ರೆ ನಡೆಸಬೇಕು. ಪ್ರತಿ ವಾಹನದಾರನೂ ತನ್ನ ವಾಹನದ ಮೇಲೆ 'ಈ ದಿನದಂದು ನಾನು ಈ

(೧೬ನೇ ಪುಟ ನೋಡಿ)

## ದಾಖಲೆ

# ಲೋಹಿಯಾರ ಕೊನೆಯ ಸಂದರ್ಶನ...

**೧೯೬೭ರ ಜುಲೈ ೩೧ ಹಾಗೂ ಆಗಸ್ಟ್ ೩ರಂದು ಎರಡು ಭಾಗಗಳಲ್ಲಿ ಲೋಹಿಯಾರೊಂದಿಗೆ ಪ್ರೊ. ಬ್ರಾಸ್ ಎಂಬ ವಿದೇಶಿ ಪತ್ರಕರ್ತರೊಬ್ಬರು ನಡೆಸಿದ ಈ ಸಂದರ್ಶನ ಬಹುಶಃ ಅವರು ತಮ್ಮ ಜೀವಿತದಲ್ಲಿ ನೀಡಿದ ಕೊನೆಯ ಸಂದರ್ಶನವಿರಬಹುದು. ಲೋಹಿಯಾರ ಕಾಂಗ್ರೆಸ್ಸೇತರವಾದ ಎಂಬ ಕಾರ್ಯಕ್ರಮದ ಪರಿಣಾಮವಾಗಿ ೧೯೬೭ರ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಷ್ಟ್ರದಲ್ಲಿ ಮೊದಲ ಬಾರಿಗೆ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಿಂದ ಪದಚ್ಯುತಗೊಂಡು ಕೇಂದ್ರದಲ್ಲೂ ಅದು ತನ್ನ ಬಲವನ್ನು ಗಣನೀಯವಾಗಿ ಕಳೆದುಕೊಂಡು ಆಂತರಿಕ ತಳಮಳವನ್ನು ಎದುರಿಸುತ್ತಿದ್ದ ಸಂದರ್ಭವದು. ಲೋಹಿಯಾ ಆಗ ಮೊದಲ ಬಾರಿಗೆ ರಾಷ್ಟ್ರದ ಅಧಿಕಾರ ರಾಜಕಾರಣದ ಕೇಂದ್ರ ಬಿಂದುವಿಗೆ ಬಂದು ಎಲ್ಲ ರಾಜಕೀಯ ವೀಕ್ಷಕರ ಗಮನ ಸೆಳೆದಿದ್ದರು. ಕೇಂದ್ರದಲ್ಲಿ ಮೊದಲ ಬಾರಿಗೆ ಸಮ್ಮಿಶ್ರ ಸರ್ಕಾರದ ಸಾಧ್ಯತೆ ಮೂಡಿ ರಾಜಕೀಯ ದೃಷ್ಟಿಯಿಂದ ಕುತೂಹಲಕಾರಿಯೆನ್ನಿಸುವ ಹಲವು ಪ್ರಶ್ನೆಗಳು ಮುಂಚೂಣಿಗೆ ಬಂದಿದ್ದವು. ಇಂತಹ ಕೆಲವು ಪ್ರಶ್ನೆಗಳಿಗೆ ಲೋಹಿಯಾ ಇಲ್ಲಿ ಉತ್ತರಿಸಿದ್ದಾರೆ. 'ಜನತಾ' ಪತ್ರಿಕೆ ಹೊರತಂದ ಲೋಹಿಯಾ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಸಂದರ್ಶನದ ಧ್ವನಿಮುದ್ರಣದಲ್ಲಿ ಹಲವು ದೀರ್ಘ ಅಡಚಣೆಗಳಿದ್ದು, ಅದರಲ್ಲಿ ಇಂದಿನ ಸಂದರ್ಭಕ್ಕೆ ಕುತೂಹಲಕಾರಿಯೆನಿಸುವ ಒಂದೆರಡು ಪ್ರಶ್ನೋತ್ತರಗಳನ್ನಷ್ಟೇ ಆಯ್ದು ಇಲ್ಲಿ ನೀಡಲಾಗಿದೆ.–ಸಂ**

**ಪ್ರೊ. ಬ್ರಾಸ್:** ನಾನು ನಿಮ್ಮಿಂದ ಭಾರತೀಯ ಸಮಾಜವಾದಿ ಚರಿತ್ರೆಯ ಇತಿಹಾಸ ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಮತ್ತು ಜಯಪ್ರಕಾಶ್(ನಾರಾಯಣ), ಅರುಣಾ(ಅಸೀಫ್ ಅಲಿ), ಆಚಾರ್ಯ ನರೇಂದ್ರದೇವ, ಅಶೋಕ ಮೆಹ್ತಾ ಹಾಗೂ ನಿಮ್ಮ ನಡುವಣ ಸಂಬಂಧಗಳ ಬಗ್ಗೆ ಕೇಳಬಯಸುತ್ತೇನೆ. ಹೇಳಿ, ನೀವು ನಿಮ್ಮ ಕೆಲವು ಗೆಳೆಯರು ಹೇಳುವ ಹಾಗೆ ಓರ್ವ ಜಗಳಗಂಟರೋ ಅಥವಾ ಅಲ್ಲವೋ?

**ಲೋಹಿಯಾ:** ಹೌದು, ಹಾಗಂತ ಹೇಳುವವರು ಇದ್ದಾರೆ. ಆದರೆ ವಿಚಿತ್ರ ಎಂದರೆ, ಈ ಗೆಳೆಯರಲ್ಲಿ ಯಾರೊಬ್ಬರೊಂದಿಗೂ ಯಾವುದೇ ವಿಷಯದ ಬಗೆಗೂ ಜಗಳವಾಡದ ಏಕೈಕ ವ್ಯಕ್ತಿ ಎಂದರೆ ನಾನೇ. ಅವರು ಸುಳ್ಳು ಹೇಳುವುದಿಲ್ಲವಾದರೆ, ಅವರೆಲ್ಲರೂ ಈ ಮಾತನ್ನು ಒಪ್ಪಲೇಬೇಕು. ಜಯಪ್ರಕಾಶ್, ಅರುಣಾ, ಅಚ್ಯುತ್(ಪಟವರ್ಧನ್) ಎಲ್ಲರೂ ಒಂದಲ್ಲ ಒಂದು ವಿಷಯದ ಮೇಲೆ ಪರಸ್ಪರ ಜಗಳ ಆಡುತ್ತಲೇ ಇರುತ್ತಿದ್ದರು. ಆದರೆ ನಾನೆಂದೂ ಆಡಿಲ್ಲ. ಅಶೋಕ ಮತ್ತು ಜಯಪ್ರಕಾಶರ ನಡುವೆ ಮಾರಾಮಾರಿಯೇ ನಡೆದಿದೆ. ಆದರೆ, ನನ್ನಲ್ಲೇನೋ ದೋಷವಿರಬೇಕು ಅಥವಾ ನನ್ನ ದುರಾದೃಷ್ಟವಿರಬೇಕು, ಅದಕ್ಕೇ ಈ ಎಲ್ಲ ನಿಂದನೆ. ನೀನು ನಮ್ಮೊಂದಿಗೆ ಎಂದೂ ಜಗಳ ಆಡಲಾಗದಿರುವ ಕಾರಣದಿಂದಲೇ ನಿನ್ನೊಂದಿಗೆ ಸಂಬಂಧಗಳು ಕಷ್ಟ ಎಂದು ಒಮ್ಮೆ ಜಯಪ್ರಕಾಶ್ ನನಗೆ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದೇನೋ. ಜಯಪ್ರಕಾಶ್ ಪ್ರಕಾರ, ಜಗಳ ಆಡುವುದರ ಮೂಲಕವೇ ನಾವು ಒಂದಲ್ಲ ಒಂದು ವಿಷಯದ ಬಗ್ಗೆ ಒಂದುಗೂಡಬಹುದು. ಆದರೆ ರಾಜಕಾರಣದಲ್ಲಿ ಜಗಳಗಳು ಎಂತಹ ವಿಷಯಗಳ ಬಗ್ಗೆ ನಡೆಯುವುವು ಎಂಬುದು ಎಲ್ಲರಿಗೂ ಗೊತ್ತು... ಅವು ಆತ್ಯಂತಿಕವಾಗಿ ತಾತ್ವಿಕ ವಿಷಯಗಳ ಬಗ್ಗೆ ಜಗಳಗಲ್ಲ... (ಅಡಚಣೆ)

**ಪ್ರೊ. ಬ್ರಾಸ್:** ನೀವು ಡಿ.ಎಂ.ಕೆ. ಜೊತೆ ಕೆಲಸ ಮಾಡಬಲ್ಲಿರಾ? ನೀವೇ ಹೇಳಿದಂತೆ, ಶ್ರೀಮತಿ ಗಾಂಧಿ ಮತ್ತು ಅವರ ಜೊತೆ ಕಾಂಗ್ರೆಸ್ ಇನ್ನೆರಡು ಮೂರು ವರ್ಷಗಳಲ್ಲಿ ಹೋದರೆ, ನೀವು ಡಿ.ಎಂ.ಕೆ. ಜೊತೆ ಮತ್ತು ಅದರ ಜೊತೆ ಜನಸಂಘ ಕೆಲಸ ಮಾಡಲು ಸಾಧ್ಯ ಅನ್ನಿಸುತ್ತದಾ

**ಲೋಹಿಯಾ:** ಜನಸಂಘ–ಡಿ.ಎಂ.ಕೆ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಒಂದು ವಿಷಯ. ಕಳೆದ ಚುನಾವಣೆಯಲ್ಲಿ ಜನಸಂಘ ನನ್ನ ವಿರುದ್ಧ ಅಭ್ಯರ್ಥಿ ನಿಲ್ಲಿಸಿತ್ತು. ಇದು ಬಹಳ ಜನಕ್ಕೆ ಗೊತ್ತಿಲ್ಲ. ಎಲ್ಲ ವಿರೋಧ ಪಕ್ಷಗಳನ್ನೂ ಒಗ್ಗೂಡಿಸುವ ನನ್ನ ಕಾರ್ಯತಂತ್ರದಿಂದಾಗಿ ಎಲ್ಲರೂ ನನ್ನ ಬಗ್ಗೆ ಅನುಕೂಲವಾಗಿದ್ದರು ಎಂಬ ಕಲ್ಪನೆಯಲ್ಲಿ ಜನರಿದ್ದಾರೆ. ಆದರೆ ವಾಸ್ತವ ಸ್ಥಿತಿ ಹಾಗೇನೂ ಇಲ್ಲ. ಜನಸಂಘ ನನ್ನ ವಿರುದ್ಧ ಅಭ್ಯರ್ಥಿಯನ್ನು ನಿಲ್ಲಿಸಿದ್ದಷ್ಟೇ ಅಲ್ಲ, ಸ್ಪರ್ಧೆಯನ್ನು ತುಂಬಾ ಕೆಳಮಟ್ಟಕ್ಕೆ ಒಯ್ದಿತು. ಈಗಿರುವ ರಾಜಕೀಯ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಸಬಾರದೆಂದಷ್ಟೇ ಕೆಳಮಟ್ಟದ ಸ್ಪರ್ಧೆ ಎಂಬ ಈ ನಾಗರಿಕ ಭಾಷೆಯನ್ನು ಬಳಸುತ್ತಿದ್ದೇನೆ. ಅವರು ಏನು ಮಾಡಿದರು ಗೊತ್ತೆ? ನಮ್ಮ ಪಕ್ಷದಿಂದಲೇ ಓರ್ವ ಮುಸ್ಲಿಂ ಕಾರ್ಯಕರ್ತನನ್ನು ಸೆಳೆದುಕೊಂಡು ಹೋದರು. ಮುಸ್ಲಿಂ ಮತದಾರರು ಹೆಚ್ಚಿರುವ ಹಳ್ಳಿಗಳಲ್ಲಿ ಈ ಜನಸಂಘಿಯ ಅಂದರೆ ಈ ಮುಸ್ಲಿಂ ಜನಸಂಘಿಯ ಬಾಯಲ್ಲಿ–ಆತ ಕಳೆದ ಚುನಾವಣೆಯಲ್ಲಿ ನನ್ನ ಚುನಾವಣಾ ಏಜೆಂಟನಾಗಿದ್ದ–ಲೋಹಿಯಾ ಇಸ್ಲಾಂನ ಶತ್ರು ಮತ್ತು ಕೊರಾನ್‌ನ ಉಪದೇಶಗಳ ವಿರೋಧಿ ಎಂದು ಹೇಳಿಸತೊಡಗಿದರು...

**ಪ್ರೊ. ಬಾಸ್:** ಬಹುಶಃ ನೀವು ಆಗ ಸಮಾನ ನಾಗರಿಕ ಸಂಹಿತೆ ಪರವಾಗಿ...

**ಲೋಹಿಯಾ:** ಹೌದು ನಾನು ಸಮಾನ ನಾಗರಿಕ ಸಂಹಿತೆ ಅಗತ್ಯವೆಂದು ಹೇಳಿದ್ದೆ. ಆದರೆ ಅದು ಜನಸಂಘದ ಬಾಯಲ್ಲಿ ಈ ಬಣ್ಣ ಪಡೆದು ಹೊಮ್ಮುವುದೆಂದರೆ...

**ಪ್ರೊ. ಬ್ರಾಸ್:** ನೀವು ಅದರ ಪರ ಇದ್ದಿರಲ್ಲವೆ?

**ಲೋಹಿಯಾ:** ಹೌದು; ನಾನು ಈಗಲೂ ಸಮಾನ ನಾಗರಿಕ ಸಂಹಿತೆಯ ಪರವಾಗಿರುವೆ. ಆದರೆ ಜನಸಂಘವೂ ಅದರ ಪರವಾಗಿತ್ತು. ಆದರೆ ಈ ಜನಸಂಘ ನನ್ನನ್ನು ಸೋಲಿಸಲು ತನ್ನ ಈ ಘೋಷಿತ ಕಾರ್ಯಕ್ರಮಕ್ಕೇ ವಿದಾಯ ಹೇಳಿ, ನಾನು ಕುರಾನ್ ನಿಯಮಗಳ ವಿರೋಧಿಯಾಗಿದ್ದು, ಒಂದು ಸಮಾನ ನಾಗರಿಕ ಸಂಹಿತೆ ಬೇಕೆಂದು ಪ್ರತಿಪಾದಿಸುತ್ತಿರುವವನೆಂದು ಮುಸ್ಲಿಂ ಮತದಾರರಿಗೆ ಹೇಳಲು ನನ್ನ ಪಕ್ಷದಿಂದಲೇ ಓರ್ವ ಮುಸ್ಲಿಂ ಪಕ್ಷಾಂತರಿಯನ್ನು ಬಳಸಿಕೊಂಡಿತು. ಹಾಗಾಗಿ ನೀವು ದಯವಿಟ್ಟು ಈಗ ಜನಸಂಘ ಮತ್ತು ನನ್ನ ಸಂಬಂಧ ಕುರಿತ ವಿಷಯವನ್ನು ಹೆಚ್ಚು ಕೆದಕಲು ಹೋಗಬೇಡಿ... ನನ್ನ ದೇಶದಲ್ಲಿ ರಾಜಕಾರಣವೆಂಬುದು ತಾತ್ವಿಕ ನೆಲೆ ತಲುಪಲು ಇನ್ನೂ ಬಹು ದೀರ್ಘ ದಾರಿ ಕ್ರಮಿಸಬೇಕಿದೆ.

**ಪ್ರೊ. ಬ್ರಾಸ್:** ಆಯಿತು, ಅದನ್ನು ಅಲ್ಲಿಗೇ ಬಿಡೋಣ. ನೀವು ಕೇಂದ್ರ ಸರ್ಕಾರದಲ್ಲಿ ಡಿ.ಎಂ.ಕೆ.ಯೊಂದಿಗೆ ಕೆಲಸ ಮಾಡಬಲ್ಲಿರಾ?

**ಲೋಹಿಯಾ:** ಅಂತಹ ಸಮಯ ಬಂದರೆ ಜನಸಂಘದೊಂದಿಗೂ ಕೆಲಸ ಮಾಡಬಲ್ಲೆ...

**ಪ್ರೊ. ಬ್ರಾಸ್:** ನೀವು ಕೆಲಸ ಮಾಡಬಲ್ಲಿರಿ ಎಂದು ನನಗೆ ಗೊತ್ತು....

**ಲೋಹಿಯಾ:** ಹೌದು, ಇಷ್ಟೆಲ್ಲ ಪಡಿಪಾಟಲುಗಳ ಹೊರತಾಗಿಯೂ... ಏಕೆಂದರೆ ರಾಜಕಾರಣ ನನಗೆಂದೂ ವೈಯುಕ್ತಿಕ ನೆಲೆಯ ವ್ಯವಹಾರವಾಗಿಲ್ಲ. ನಿಜ, ಇಂಥದೆಲ್ಲ ನನಗೆ ನೋವನ್ನುಂಟು ಮಾಡುತ್ತದೆ. ಯಾರಿಗೆ ನೋವಾಗುವುದಿಲ್ಲ ಹೇಳಿ? ನಾನೇನೂ ದೇವ ಮಾನವನಲ್ಲವಲ್ಲ! ನನಗೆ ನೋವಾಗುತ್ತದೆ, ನೋವಾಗಿದೆ... ಆದರೂ ನಾನು ಜನಸಂಘದೊಂದಿಗೆ ಕೆಲಸ ಮಾಡುವೆ. ಡಿ.ಎಂ.ಕೆ. ಬಗ್ಗೆ ಹೇಳುವುದಾದರೆ, ತಮ್ಮ ಪಕ್ಷಕ್ಕೆ ಅತಿ ಹತ್ತಿರವಾದ ಪಕ್ಷವೊಂದೇನಾದರೂ ಈ ದೇಶದಲ್ಲಿದ್ದರೆ ಅದು ನನ್ನ ಪಕ್ಷ ಎಂದು ಈಗಾಗಲೇ ಅಧಿಕೃತವಾಗಿಯೇ ಅದರ ನಾಯಕರು ಹೇಳಿದ್ದಾರೆ. ಅಷ್ಟೇ ಅಲ್ಲ, ನನ್ನ ಭಾಷಾ ನೀತಿ ಬಗ್ಗೆ ಅವರ ಭಿನ್ನಾಭಿಪ್ರಾಯವಿದ್ದರೂರೂ ಅವರು ನಿರ್ದಿಷ್ಟವಾಗಿ ನನ್ನ ಹೆಸರನ್ನು ಉಲ್ಲೇಖಿಸಿದ್ದಾರೆ...

**ಪ್ರೊ. ಬ್ರಾಸ್:** ಹಾಗಿದ್ದಲ್ಲಿ ಮುಂದೆ ಅಂತಹ ಯಾವುದೇ ಆತ್ಯಂತಿಕ ಘರ್ಷಣೆ ಇಲ್ಲವೆಂದು ನೀವು ಹೇಳುತ್ತಿದ್ದೀರಿ

**ಲೋಹಿಯಾ:** ಅಲ್ಲ, ಅಲ್ಲ, ಖಂಡಿತ ಹಾಗಲ್ಲ. ಅಂತಹ ನಿರ್ಣಯಕ್ಕೆ ಓಡಬೇಡಿ. ಅದು ಬಹಳ ಅವಸರದ ನಿರ್ಣಯವಾದೀತು!

**(ಕನ್ನಡಕ್ಕೆ:** ಡಿಎಸ್ನೆನ್)

ಸಾಹಿತ್ಯ ಸಂಸ್ಕೃತಿ ಇತ್ಯಾದಿ


# ಎಡಗೈಯಲ್ಲಿ ಹಿಟ್ಟು, ಜೊನ್ನೇಲಿ ಎಸ್ರು...

**ಇದು ತುಮಕೂರು ಸೀಮೆಯ ಜಿ. ಸಂಜೀವರಾಯ ಅವರು ಇತ್ತೀಚೆಗೆ ಪ್ರಕಟಿಸಿರುವ 'ಹೊರಬೀಡು' ಎಂಬ ಪುಸ್ತಕದಿಂದ ಆಯ್ದ ಒಂದು ಅಧ್ಯಾಯ. ದಲಿತ ಹಿನ್ನೆಲೆಯಿಂದ ಬಂದಿರುವ ಈ ಲೇಖಕರು ಈ ಪುಸ್ತಕದಲ್ಲಿ ತಮ್ಮ ಬಾಲ್ಯದ ಹಲವು ನೆನಪುಗಳನ್ನು ಅವುಗಳ ಹಿಂದಿನ ಅನುಭವದ ಕಚ್ಚಾತನ ಕೆಡದಂತೆ ತಮ್ಮದೇ ಭಾಷೆಯಲ್ಲಿ ದಾಖಲಿಸಿದ್ದಾರೆ. ಈ ನಿರೂಪಣಾ ಶೈಲಿಯ ಸರಳತೆಯಲ್ಲಿ ವ್ಯಕ್ತವಾಗುವ ಹಸಿ ಮುಗ್ಧತೆ ಮತ್ತು ಅದರ ಜೊತೆಗಾರನಂತೆ ಮೂಡಿರುವ ಪ್ರಾಮಾಣಿಕತೆ ಇವರ ಬರಹಕ್ಕೊಂದು ವಿಶಿಷ್ಟ ಬೆಡಗು ನೀಡಿದೆ.**

**ಈಗ ತುಮಕೂರಿನಲ್ಲಿ ಪಶುವೈದ್ಯರಾಗಿರುವ ಸಂಜೀವರಾಯರು ತಮ್ಮ ಬದುಕನ್ನೊಮ್ಮೆ ಹಿನ್ನೋಡಿರುವ ಈ ಪ್ರಯತ್ನದಲ್ಲಿ ನಮ್ಮ ಇತ್ತೀಚಿನ ದಲಿತ ನಿರೂಪಣೆಗಳಲ್ಲಿ ಕಾಣೆಯಾಗಿರುವ ಅಂತರ್ಮುಖತೆ ಮತ್ತು ಬರ್ಹಿಮುಖತೆಗಳ ವಿಶಿಷ್ಟ ಮುಖಾಮುಖಿಯಲ್ಲಿ ಹುಟ್ಟುವ ಜೀವನ ಪ್ರೀತಿ ಮತ್ತು ಅದರ ಹಿನ್ನೆಲೆಯಲ್ಲಿ ಜಿನುಗುವ ತಿಳಿಹಾಸ್ಯದ ಮೂಲಕ ಇನ್ನೂ ತಮ್ಮೊಳಗೆ ಹಬೆಯಾಡುತ್ತಿರುವಂತಿರುವ ನೋವಿಗೆ ಒಂದು ಸ್ಪಂದನಶೀಲತೆಯನ್ನು ಒದಗಿಸಿದ್ದಾರೆ. ಹೀಗಾಗಿ ಇದು ಸಮಾಜವಾದಿ ಕಥನವೆನ್ನಿಸಿಕೊಂಡಿದೆ.**

**ಕನ್ನಡವು ಜಾತಿ ಶ್ರೇಣೀಕರಣದ ಸಂಜ್ಞೆಗಳನ್ನೂ, ಧ್ವನಿ ಚಹರೆಗಳನ್ನೂ ನೆನಪುಗಳನ್ನೂ ಹೊತ್ತ ಭಾಷೆಯಾಗಿರುವದರಿಂದ, ದಲಿತರು ಮತ್ತು ಶೂದ್ರರು ಇತ್ತೀಚೆಗೆ ಕನ್ನಡದ ವಾರಸುದಾರಿಕೆಯ ಹಂಗು ತೊರೆದು ಇಂಗ್ಲಿಷ್ ಕಡೆ ಒಲವು ತೋರುತ್ತಿದ್ದಾರೆ ಎಂದು ವಾದಿಸತೊಡಗಿರುವ ಕೆಲ ನಮ್ಮ ಬುದ್ಧಿಜೀವಿ ಗೆಳೆಯರು ಈ ಕಥನವನ್ನೊಮ್ಮೆ ಅದರ ಭಾಷಾ ವೈಖರಿಗಾಗಿ, ಆ ಭಾಷೆಯಲ್ಲಿ ತುಂಬಿ ತುಳುಕುತ್ತಿರುವ ಜೀವಂತಿಕೆಗಾಗಿಯಾದರೂ ಪರಾಂಬರಿಸಬೇಕು.–ಸಂ.**

ಪುಸ್ತಕ: **ಹೊರಬೀಡು** ಲೇ: **ಡಾ. ಜಿ. ಸಂಜೀವರಾಯ** ಪ್ರ: **ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು–೭೨** ಪು: **೬೮** ಬೆ: **ರೂ.೬೦/–**




**ಪಿ**ಯುಸಿಯಲ್ಲಿ ಕೆಮಿಸ್ಟ್ರಿ ಪಾರ್ಟ್ ಫೇಲಾಗಿ ಮತ್ತೆ ಊರಿಗೆ ಸೇರ್‌ಬೇಕಾಗಿ ಬಂತು. ಊರಿನಲ್ಲಿ ಹಿಟ್ಟು ಖಾರ ಉಂಡುಕೊಂಡು ಗಾಳೀನಲ್ಲಿ ತೂರ್‌ಕೊಂಡು ಹೋಗುವಂತೆ ಇದ್ದ ನಾನು ತುಮಕೂರು ಮದ್ದು ಮಂದಿರದ ಚಿತ್ರಾನ್ನ, ಪುಳಿಯೋಗರೆ, ಪಲಾವು ಕುಷ್ಕ, ಇಡ್ಲಿ, ದೋಸೆ ಇದ್ರ ಜೊತೆಗೆ ಭಾನುವಾರ ಬಾಡೂಟ ಉಂಡು ಕೊಬ್ಬಿದ ಕುರಿಯಾದೆ. ಮಸಾಲೆ ದೋಸೆ ಮಾಡಿದ ದಿವ್ಸ ಸಾಲಾಗಿ ಕ್ಯೂ ನಿಂತುಕೊಂಡು ಒಂದೆರಡ್ ಪಿರಿಯಡ್ ಪಾಠಾನೂ ಕಳಕೊಂಡಿದ್ದೂ ಉಂಟು. ಒಂದ್ಸಿವ ದೋಸೆಗಾಗಿ ಲಂಬಾಣಿ ಹುಡುಗರ್ಗೂ ಮತ್ತು ಮಾದಿಗರ ಹುಡುಗರ್ಗೂ ಸೌದೆ ಕಟ್ಟಿಗೆಗಳಿಂದ ದೊಡ್ಡ ಯುದ್ಧವೇ ನಡ್ದು ಹೋಯ್ತು. ಅಕ್ಕಪಕ್ಕದೋರು, ರೋಡಗೋಗೋರು ಇವ್ರ್‌ಗೇನ್ ಮಾನ ಮರ್ಯಾದೆ ಐತಾ, ಊಟಕ್ಕೆ ಕಿತ್ತಾಡಿ ಸಾಯ್ತಾವೆ ಅಂತ ಬೈಯ್ಕೋತಾ ಇದ್ರು. ವಾರ್ಡನ್ ಮತ್ತು ಸೂಪರ್ವೈಸರ್ ಇವರ ಜೊತೆ ಹಾಸ್ಟೆಲ್ ನಡ್ಸೋಕೆ ಸಾಕಾಗಿ ಹೋಗ್ತಾ ಇದ್ರು.

ಎರಡ್ವರ್ಷನೂ ಕಷ್ಟಪಟ್ಟು ಓದ್ದೆ. ಆದ್ರೆ ಕೆಮಿಸ್ಟ್ರಿ ಮಾತ್ರ ಕೈಕೊಡ್ತು. ಊರಿಗೋಗಿ ಮತ್ತೆ ಅದೇ ಕೂಲಿ, ಬೆಟ್ದಾಗೆ ದನ ಮೇಯ್ಸೋದು, ಸೌದೆ ತಂದು ಲಾಟ್ ಮಾಡುವುದು, ಊರಿನೋರ ಜೊತೆಯಲ್ಲಿ ಕೂಲಿ ಕೆಲಸಕ್ಕೆ ಹೊಂದಿಕೊಂಡು ಹೋದೆ. ನಮ್ಮೂರ್ನಾಗೆ ಕೂಲಿ ಸಿಗ್ಲಿಲ್ಲ ಅಂದ್ರೆ ಪಕ್ದೂರ್‌ಗೆ ಕೂಲಿಗೋಗ್ತಾ ಇದ್ವಿ. ದೊಡ್ಡ ಅಗ್ರಹಾರದ ಪಕ್ಕದ ದವಲಯ್ಯನಗಿರಿ ಪಾಳ್ಯಕ್ಕೆ ನಮ್ಮಟ್ಟಿಯ ಪುಟ್ಟಕ್ಕಜ್ಜಿ, ರಾಮಯ್ಯನ ಜೊತೆಗೂಡಿ ಭತ್ತ ಬಡಿಯುವುದಕ್ಕೆ ಹೋದೆ. ದೊಡ್ಡ ಅಗ್ರಹಾರ ತುಂಬಾ ದೊಡ್ಡ ಊರು. ಹೆಚ್ಚಾಗಿ ಲಿಂಗಾಯ್ತ್ರು ಮತ್ತು ಒಕ್ಕಲಿಗರುಗಳಿಗೆ ನಾಲಕ್ಕೆಕರೆ, ಐದೆಕರೆ ಗದ್ದೆಗಳಿದ್ದವು. ನಮ್ಮಟ್ಟಿವ್ರೆಲ್ಲಾ ಗದ್ದೆ ಕುಯ್ಲು ಸಮಯಕ್ಕೆ ಸರಿಯಾಗಿ ಒಂದೊದ್ ವಾರದ್ ಕಾಲ ಟೆಂಟ್ ಹಾಕ್ತಾ ಇದ್ರು. ಹಾಗಾಗಿ ನಾನೂ ಕೂಡ ರಾಮಣ್ಣನ ಜೊತೆಗೂಡಿ ದವಲಯ್ಯನಗಿರಿ ಪಾಳ್ಯದ ರಾಮಕೃಷ್ಣಪ್ಪನವರ ಮನೆಗೆ ಸಾಯಂಕಾಲದೊತ್ತಿಗೆ ಭತ್ತ ಬಡಿಯೋದಕ್ಕೆ ಹೋದೆ.



ರಾಮಕ್ರಷ್ಣಪ್ಪ ಒಕ್ಕಲಿಗರಾದ್ರೂ ಊರಿನಲ್ಲಿ ಒಳ್ಳೇ ರೈತರು, ಕೂಲಿಗೋಗೋರಿಗೆ ಯಾವತ್ತೂ ಮೋಸ ಮಾಡದೆ ಬೀಡಿ ಬೆಂಕಿಪೊಟ್ಟಣ ಕೊಟ್ಟು ನೋಡಿಕೊಳ್ತಿದ್ರು. ರಾಮಣ್ಣ ಎಲ್ರಿಗೂ, 'ಪಿಯುಸಿ ಓದಿರೋ ಹುಡುಗನ್ರಪ್ಪೋ, ಕೆಲ್ಸದಾಗೆ ಸ್ವಲ್ಪ ಸರಿದೂಗಿಸಿಕೊಂಡು ಹೋಗ್ಬೇಕು. ಅವ್ರ ಅಪ್ಪ ಅಮ್ಮ ನನ್ನ ಸಂಗ್ಡ ಕಳ್ಸವ್ರೆ' ಎಂದು ಎಲ್ಲಾಗ್ರೂ ಹೇಳ್ತಿದ್ದ. ನಮ್ ಜೊತೆಗೆ ಇನ್ನೂ ನಾಲ್ಕೈದು ಜನ ಆಳು ಕೂಲಿಗೆ ಬಂದಿದ್ರು. 'ಬಿಡು ರಾಮಪ್ಪೋ ನಾವ್ ಬಂದಿರೋದು ಕೂಲಿ ಕೆಲ್ಸಕ್ಕೆ. ನಮ್ಮ ಐಕಳು ನಾಲಕ್ ಅಕ್ಷರ ಕಲ್ತವೆ. ಅವ್ರೂ ಎಲ್ಲಾದ್ರೂ ಕೂಲಿಗೆ ಹೋದ್ರೆ ಅವ್ರ್ ಹೊಟ್ಟೆಗೆ ಹಾಕ್ಕೊಳ್‌ಬೇಕೋ ಇಲ್ವೋ' ಎಂದು ಒಬ್ಬೊಬ್ರು ಒಂದೊಂದು ಮಾತ್ ಹೇಳ್ತಿದ್ರು.

ಅವ್ರ ಮಾತುಗಳಿಂದ ನನಗೆ ದೊಡ್ಡ ಜೀವಾನೇ ಬಂತು. ಏಕೆಂದರೆ ತುಮಕೂರು ಹಾಸ್ಟೆಲ್‌ನಲ್ಲಿ ಉಂಡುಕೊಂಡು ಕೆಲ್ಸ ಮಾಡುವುದು ಮರ್ತು ಹೋಗಿತ್ತು. ಮೈ ಆಗ್ಲೇ ಬಗ್ತಾ ಇರ್ಲಿಲ್ಲ. ಎತ್ತ ಕಡೆ ಹೋದ್ರೂ ನೆರಳಿಗೆ ಹೋಗಿ ಕೂತ್ಕೋಳಾಣ ಅನ್ನಿಸ್ತಾ ಇತ್ತು. ರಾಮಣ್ಣನಿಗೆ ನನ್ನ ಕಂಡ್ರೆ ಬಾಳಾ ಪ್ರೀತಿ. ಅವನ ಹೆಂಡ್ತಿ ತಮ್ಮ ಪಿಯುಸಿಯಲ್ಲಿ ಎಲ್ಲಾ ಪಾರ್ಟ್‌ಗಳೂ ಫೇಲಾಗಿ ನನ್ನದು ಮಾತ್ರ ಒಂದೇ ಪಾರ್ಟ್ ಫೇಲಾಗಿತ್ತು. 'ಬಿಡ್ ಮರಿ, ನೀನಾದ್ರೂ ಎಂಗೋ ವಾಸಿ, ತುಮಕೂರ್‌ಗೋಗಿದ್ಕ್ಕೂ ಒಂದ್ರಾಗಿ ಮಾತ್ರ ಫೇಲಾದೆ. ನಮ್ಮೋನು ನೋಡೀಗಾ... ಕೊರಟಗೆರೆ ತುಮಕೂರು ಅಲ್ಕಂಡವ್ನೆ' ಎಂದ.

ನಾನೂ ಯಾವಾಗ್ಲೂ ಕೂಲಿ ಹೋದ್ರೆ ರಾಮಣ್ಣನ ಜೊತೆಗೇನೆ ಹೋಗ್ತಾ ಇದ್ದೆ. ಅವನು ನನ್ನ ಪಾಲಿಗೆ ದೇವ್ರಾಗಿದ್ದ. ಕೆಲವ್ರು ವಾದಿ ಮಾಡ್ತಾ ಇದ್ದು, ಅವ್ರವ್ರ ಸಾಲು ಮುಂದೆ ಕುಯ್ಕೊಂಡೋಗಿ ನೆರಳ್ನಲ್ಲಿ ಕೂತ್ಕೊಂತಾ ಇದ್ರು. ರಾಮಣ್ಣ ಮಾತ್ರ ನಾನೇನಾದ್ರೂ ಹಿಂದೆ ಬಿದ್ದಿದ್ದರೆ ಬಂದು ಎದುರ್ಸಾಲು ಕುಯ್ತಾ ಇದ್ದ. ಹಾಗಾಗಿ ನನಗೆ ಅಣ್ಣನಾಗಿ ಹಿತರಕ್ಷಕನಾಗಿದ್ದ.

ನಾನೂ ಸಹ ಅವರ್ಜೊತೆಗೆ ಕಂತೆಗಳು ಮಾಡ್ಕೊಂಡು ಬಡೀತಾ ಇದ್ದೆ. ರಾಮಕೃಷ್ಣಪ್ನೋರು ಕೈಯ್ನಾಗೆ ಕಾಫಿ ಜೊತೆಗೆ ಸಿಲ್ವರ್ ಲೋಟ್‌ಗಳು ಹಿಡ್ಕೊಂಡು ಬಂದ್ರು. 'ಬರ್ರಪ್ಪೋ... ಕಾಪಿ ತಣ್ಣಗಾಗ್ತೈತೆ. ಕಾಪಿ ಕುಡ್‌ದು ಬಡೀವ್ರಂತೆ' ಎಂದರು. ಎಲ್ರೂ ಒಂದೊದ್ ಸಿಲ್ವರ್ ಲೋಟ ತಗೊಂಡು ವಲ್ಲೀಬಟ್ಟೆಗೆ ಸುತ್‌ಕೊಂಡು ರಾಮಕೃಷ್ಣಪ್ನೋರ್ ಮುಂದೆ ಲೋಟು ಹಿಡಿದು ಕಾಫಿಗಾಗಿ ಕೈನೀಡಿದ್ವಿ. ಕಾಫಿ ಕುಡಿದ ಮೇಲೆ ಲೋಟಗಳನ್ನು ಕೆಲ್ಸ ಮುಗಿಯಗಂಟ ಹುಲ್‌ಗಿಲ್‌ನಲ್ಲಿ ಕಳೀಬ್ಯಾಡ್ರೀ ಅಂತ ಹೇಳಿದ್ರು. ರಾತ್ರಿ ಹತ್ತು ಗಂಟೇ ತನ್‌ಕ ಭತ್ತ ಬಡೀತಾ ಇದ್ರೆ ಬಣವೆ ಖಾಲಿ ಆಗ್ತಾ ಇತ್ತು. ಕೆಲವ್ರು ಕೈಯಾರ್ಸಿಕೊಳ್ಳಾಕಂತ ಕತ್ಲೆಲ್ಲೇ ಹೊರ್‌ಗಡೀಕೆ ಹೋದ್ರೆ ಇನ್ಕೆಲ್ವು ಬೀಡಿಗಳ ಸೇದ್ಕಂಡು ಕೂತ್ಕೊಂಡ್ರು.

ಧನುರ್ಮಾಸದ ಚಳಿ ಎದೆ ಗುಂಡಿಗೇನ ನಡುಗಿಸ್ತಿತ್ತು. ಹಾಸ್ಟೆಲ್‌ನಲ್ಲಿ ಚೆನ್ನಾಗಿ ಉಂಡುಕೊಂಡು ದತ್ತ ಬಾಟನಿ, ಡಿಸೋಜ ಕೆಮಿಸ್ಟ್ರಿ ಪುಸ್ತಕಗಳನ್ನು ರಾತ್ರಿ ಹೊತ್ತು ತಲೆದಿಂಬು ಮಾಡಿಕೊಂಡು ಸುಖನಿದ್ರೆ ಮಾಡ್ತಿದ್ರೆ ಹಳ್ಳಿ ಕಷ್ಟಗಳು ಮರೆತು ಹೋಗ್ತಾ ಇದ್ವು. ಓದಿನಲ್ಲಿ ಏರುಪೇರು ಆದ್ರೆ ಮತ್ತೆ ವಿಸ್ಮಯ ಬದುಕಿನ ಜೀವನಕ್ಕೆ ತಳ್ಳುತ್ತದೆ. ಹೊತ್ತು ಊಟಕ್ಕಾಗಿ ನೂರಾರು ಬವಣೆಗಳನ್ನು ಅನುಭವಿಸಬೇಕಾಗುತ್ತದೆ, ಕಷ್ಟಗಳ ಸರಮಾಲೆಯನ್ನು ನೇತಾಕಿಕೊಂಡು ಊರೂರು ತಿರುಗಬೇಕಾಗುತ್ತದೆ, ಇಂತ ಹತ್ತು ಹಲವು ಯೋಜನೆಗಳು ತಲೆ ತುಂಬಿಕೊಂಡು, ನಾನು ಪಾಸಾಗಿದ್ದರೆ ಯಾವ್ದಾದ್ರೂ ಡಿಗ್ರಿ ಮಾಡ್ಕೊಂಡು ಹಾಸ್ಟೆಲ್ ಜೀವನ ಅನುಭವಿಸ್ಬೋದಾಗಿತ್ತು. ತಲೆಯಲ್ಲಿ ಹುಳುಗಳಾಗಿ ಯೋಚನೆಗಳು ಮರುಕಳಿಸುತ್ತಿದ್ದವು.

ದೂರದ ಬೆಳದಿಂಗಳಿನಲ್ಲಿ ರಾಮಕೃಷ್ಣಪ್ಪ ಮತ್ತು ಅವರ ಹೆಂಡ್ತಿ ರಂಗಮ್ಮ ಕೈಯಾಗೆ ಬ್ಯಾಟರಿ ಹಿಡ್ಕೊಂಡು ರಂಗಮ್ಮ ತಲೆ ಮೇಲೆ ಬುತ್ತಿ ಹೊತ್ಕೊಂಡು, ರಾಮಕೃಷ್ಣಪ್ಪ ಕುಡಿಯುವ ನೀರಿನ ಬಿಂದಿಗೆ ಜೊತೆಯಾಗಿ ಬರ್ತಾ ಇದ್ರು. ಭತ್ತ ಬಡ್ದು ಸುಸ್ತಾದ ಜೀವಕ್ಕೆ ಊಟ ನೋಡಿದ ತಕ್ಷಣ ಮರುಜೀವವೇ ಬಂದಂತಾಯ್ತು. 'ಬರ್ರಪ್ಪೋ... ಬರ್ರಪ್ಪೋ... ಬರ್ರಿ...' ಅನ್ನುವ ಹೊತ್ತಿಗೆ ಬಣವೆ ಎಲ್ಲ ಖಾಲಿಯಾಗಿತ್ತು. ಎಲ್ರೂ ತೊಳ್ಕೊಂಡು ಸಿಲ್ವರ್ ಲೋಟಾ ತೊಗೊಂಡು ಸಾಲಾಗಿ ಊಟಕ್ಕೆ ಕುಂತ್ವಿ. ರಾಮಕೃಷ್ಣಪ್ನೋರು ಒಂದೊಂದು ಜೊನ್ನೆ ಮುತುಗದ(ಊಟದ ಎಲೆ) ಎಲೆ ನೀಡಿದ್ರು. 'ಎಲೆಗಳು ದೊಡ್ಡವು ಸಿಕ್ಲಿಲ್ಲ. ಸಣ್ಣದಾಗವೆ. ಎಡಗೈ ಅಂಗೈ ಮೇಲಿಟ್ಕೊಂಡು ಮುದ್ದೆ ಉಣ್‌ಬೇಕು' ಅಂತ ಹೇಳ್ತಿದ್ದಂಗೆ ರಂಗಮ್ಮ ಎಲ್ರ ಕೈಗೂ ಒಂದೊದ್ ಮುದ್ದೆ ತಂದ್ ಹಾಕಿದ್ರು. ಜೊನ್ನೇಲಿ ಮೊಳಕೆ ಹುರುಳಿಕಾಳಿನ ಎಸರಿನಲ್ಲಿ ಹಿಟ್ಟು ಮುರುಕೊಂಡು ಬೆಳ್ದಿಂಗ್ಳಲ್ಲಿ ಒಂದೊಂದು ತುತ್ತು ಮಾಡ್ಕೊಂಡು ಗುಳಂ...ಗುಳುಂ... ಅಂತ ನುಂಗ್ತಾ ಇದ್ರೆ ದೇಹದಲ್ಲೆಲ್ಲಾ ಶಕ್ತಿಯ ಪರಮಾತ್ಮ ಓಡಾಡಿದಂತಾಗಿ ನಿಶ್ಯಕ್ತಿಯ ಜೀವಕ್ಕೆ ಮತ್ತು ಬಂದಂಗಾಯ್ತು. ಎಲ್ರೂ ಎರಡೆರಡು ಮುದ್ದೆ, ಜೊನ್ನೆಗೆ ಒಂದಿಷ್ಟು ಅನ್ನ ಹಾಕಿ ಕಲ್ಸ್ಕಂಡು ಉಂಡ್ವಿ. ರಾಮಕೃಷ್ಣಪ್ನೋರು ಎಲ್ರಿಗೂ ಅಡಿಕೆ, ಎಲೆ, ಬೀಡಿ, ಬೆಂಕಿಪಟ್ಣ ನೀಡಿ, 'ನೋಡ್ರಪ್ಪೋ ರಾತ್ರೇನೇ ಎತ್ತುಗಳ್ ಕಟ್ಕೊಂಡು ಒಕ್ಣೆ ಮಾಡ್ಬಿಡ್ರಿ. ಬೆಳಿಗ್ಗೆ ಬಿಸ್ಲು ಜಾಸ್ತಿಯಾಗ್ತೈತೆ. ತಂಪೊತ್ನಾಗೆ ಒಕ್ಣೆ ಮಾಡಿದ್ರೆ ನಿಮ್ಗೂ ಜೀವಕ್ಕೆ ಹರ್ಷ ಆಗ್ತೈತೆ. ಬೇಕಾರಿನ್ನೊಂದ್ಸಲ ಕಾಫಿ ತಂದೊಡ್ತೀನಿ' ಎಂದ್ರು.

ನನ್ನ ಎತ್ತುಗಳನ್ನು ಮೇಟಿ ಸುತ್ತ ಹೊಡೆಯೋದಕ್ಕೆ ಬಿಟ್ರು. ಉಳಿದೋರು ಕಣದ ಸುತ್ತ ಹುಲ್ಲು ಹರಡ್ತಾ ಇದ್ರು. ಸುಮಾರು ರಾತ್ರಿ ಎರಡು ಗಂಟೆ ಹೊತ್ಗೆ ಎಲ್ಲಾ ಹುಲ್ಲನ್ನು ಒಕ್ಣೆ ಮಾಡಿ ದೂರ ಎಳಕೊಂಡೋಗಿ ಗುಡ್ಡೆಗಳನ್ನು ಹಾಕೋಷ್ಟೊತ್ತಿಗೆ ಬೆಳ್ಳಿಚುಕ್ಕಿ ನೆತ್ತೀ ಮೇಲೆ ಬಂದಿತ್ತು. ಕೊರೆಯೋ ಚಳೀನಲ್ಲಿ ಗೋಣೀಚೀಲಗಳನ್ನು ಸುತ್ತಿಕೊಂಡು ಒಬ್ರೊಬ್ರು ಒಂದೊಂದು ಹುಲ್ಲಿನ ಗುಡ್ಡೆಗಳಲ್ಲಿ ಮಲಗಿದ್ದಷ್ಟೇ. ಬೆಳಿಗ್ಗೆ ರಾಮಕೃಷ್ಣಪ್ನೋರು ಬಂದು ಕಾಪಿ ಕುಡೀವ್ರಂತೆ ಕರೆದಾಗ್ಲೇನೇ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ಕೆಲವ್ರು ಹೊರಗಡಿಕ್ಹೋದ್ರೆ, ಇನ್ಕೆಲವ್ರು ಮುಖ ತೊಳ್ಕೊಂಡು ರಾಮಕೃಷ್ಣಪ್ನೋರ ಮುಂದೆ ಕಾಫಿಗಾಗಿ ಕೈಯೊಡ್ಡಿದ್ವಿ.


ನಮ್ಮೂರಿನಲ್ಲಿ ಯಾರಿಗೇ ಕೂಲೀ ಹೋದ್ರೂನೂ ಬಾಳೆಲೆನೋ ಅಥವಾ ಅಡಿಕೆ ಪಟ್ಟೇನೋ ಕೊಡ್ತಾ ಇದ್ರು. ಆದ್ರೆ ಇವರು ಮಾತ್ರ ಹೀಗೆ ಮಾಡಿದ್ರು ಎಂಬ ಯೋಚನೆ ತಲೆಯಲ್ಲಿ ಮೊಳಕೆ ಹೊಡೆಯೋಕೆ ಶುರುಮಾಡ್ತು. ನಿಜವಾಗಿ ಇವ್ರು ಅಸ್ಪೃಶ್ಯತೆಯನ್ನು ಆಚರಣೆ ಮಾಡಿದ್ರೋ, ಇಲ್ಲ, ಎಲೆಗಳು ಇರಲಿಲ್ಲವೋ ಎಂಬ ದ್ವಂದ್ವ ತಲೇನ ಕೊರೆಯೋಕೆ ಶುರು ಮಾಡ್ತು. ರಾಮಣ್ಣನ ಹತ್ರ ಈ ವಿಷಾಯನ ಹೇಳಿದ್ದಿಕ್ಕೆ, 'ಅವೆಲ್ಲಾ ಯೋಚ್ನೆ ಮಾಡ್ಬಾರ್ದು. ನಾವ್ ಬಂದಿರೋದು ಹೊಟ್ಟೆಪಾಡು, ಕೂಲಿಕೆಲ್ಸಕ್ಕೆ. ಅವ್ರು ಅನ್ನ ಕೊಟ್ಟ ದೇವರು. ಅವ್ರು ಕೈಯಾಗಿಟ್ರೂ ತಿನ್ಬೇಕು. ಹಸಿದ ಹೊಟ್ಟೆಗೆ ಅನ್ನ ಕೊಟ್ಟ ದಣಿ. ಅದೆಲ್ಲ ಯೋಚ್ನೆ ಬ್ಯಾಡ,' ಎಂದು ನೆಲ್ಲುಲ್ಲಿನಂದ ಪಂಟೆಹುರಿ ಮಾಡೋದಿಕ್ಕೆ ಕಡ್ಡಿ ಕೊಟ್ಟ. ರಾಮಣ್ಣ ಸ್ವಲ್ಪ ಸ್ವಲ್ಪ ಹುಲ್ಲನ್ನು ಬಿಡೋದಕ್ಕೆ ಶುರು ಮಾಡ್ದ. ಮಧ್ಯಾಹ್ನದೊತ್ತಿಗೆ ಹುಲ್ಲು ಚೆನ್ನಾಗಿ ಒಣಗ್ತು. ಹುಲ್ಲನ್ನೆಲ್ಲ ಚೆನ್ನಾಗಿ ಪೆಂಡಿಗಳನ್ನು ಮಾಡಿ ರಾಮಕೃಷ್ಣಪ್ನೋರ ಹಿತ್ತಲಿಗೆ ಹೊತ್ತಾಕಿದ್ವಿ. ಇನ್ಕೆಲ್ವು ಭತ್ತನ್ನೆಲ್ಲಾ ಸ್ವಚ್ಛ ಮಾಡಿ ಮೂಟೆಗಳನ್ನು ಮಾಡ್ತಾ ಇದ್ರು. ಸಾಯಂಕಾಲದೊತ್ತಿಗೆ ಭತ್ತದ ಮೂಟೆಗಳ್ನೆಲ್ಲಾ ಅವ್ರ ಮನೆಗೆ ಹೊತ್ತಾಕಿದ ಮೇಲೆ ನಮ್ಮೆಲ್ಲಾ ಕೂಲಿಯ ಭತ್ತವನ್ನು ಚೀಲಕ್ಕೆ ಹಾಕಿದ್ರು. ಚೀಲಗಳನ್ನು ತಲೆ ಮೇಲೆ ಹೊತ್ಕೊಂಡು, 'ಬರ್ತೀವ್ ರಾಮಕೃಷ್ಣಣ್ಣೋ...' ಅಂತ ಹೇಳಿ ಸಾಯಂಕಾಲದ ಕತ್ತಲಿನಲ್ಲಿ ಅಗ್ರಹಾರದಿಂದ ಕೆರೆ ಏರಿ ಮೇಲೆ ಬರ್ತ ಇದ್ರೆ ಹಾಸ್ಟೆಲ್‌ನಲ್ಲಿ ಪ್ರತಿನಿತ್ಯ ಅನ್ನ ಉಣ್ತಿದ್ದ ನನಗೆ ಒಂದ್ವಾರನಾದ್ರೂ ಅನ್ನ ಉಂಡನೆಂಬ ಖುಷಿ ಒಂದ್ಕಡೆ ಆದ್ರೆ, ರಾಮಕೃಷ್ಣಪ್ಪ ಜೊನ್ನೇಲಿ ಎಸ್ರು, ಅಂಗೈಗೆ ಮುದ್ದೆ ಹಾಕಿದ್ದು ತಪ್ಪು ಎಂಬ ತರ್ಕ ಮನಸ್ಸಿನಲ್ಲಿ ಕುದೀತಾ ಇತ್ತು.

**–ಜಿ.ಸಂಜೀವರಾಯ**

## ಪುಸ್ತಕಾವಲೋಕನ

# ಸಾಂಗತ್ಯ ಕಥನ...

ಪುಸ್ತಕ: **ನನ್ನ ತೇಜಸ್ವಿ** ಲೇ: **ರಾಜೇಶ್ವರಿ ತೇಜಸ್ವಿ** ಪ್ರ: **ಪುಸ್ತಕ ಪ್ರಕಾಶನ, ಮೈಸೂರು** ಪುಟಗಳು: **೨೪೮** ಬೆಲೆ: **ರೂ. ೩೬೯/–**




ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಕನ್ನಡ ಸಾಂಸ್ಕೃತಿಕ ಲೋಕದ ವಿಶಿಷ್ಟ ಹೆಸರು. ಕನ್ನಡದ ಅನನ್ಯ ಲೇಖಕರಾಗಿ, ಸಮಾಜವಾದಿ ಚಿಂತಕರಾಗಿ, ರೈತ, ದಲಿತ, ಪರಿಸರ ಮತ್ತು ಕನ್ನಡ ಚಳುವಳಿಗಳ ಆತ್ಮೀಯ ಒಡನಾಡಿಯಾಗಿ ಅವರು ಕಟ್ಟಿಕೊಂಡ ಬದುಕನ್ನು ಅವರ ಪತ್ನಿ ರಾಜೇಶ್ವರಿ ತೇಜಸ್ವಿ ತಾವು ಕಂಡಂತೆ ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. 'ನನ್ನ ತೇಜಸ್ವಿ' ಎಂಬ ತನ್ನ ಶೀರ್ಷಿಕೆಯ ಮೂಲಕವೇ ರಾಜೇಶ್ವರಿಯವರು ಓದುಗರಿಗೆ ಈ ಕೃತಿಯಲ್ಲಿರುವುದು ನನ್ನ ತೇಜಸ್ವಿಯೇ ಹೊರತು ನಿಮ್ಮ ತೇಜಸ್ವಿಯಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ನಿಜ, ಕೃತಿಯೊಂದು ಹೊರಬಂದ ಮೇಲೆ ಅದರ ಸಂಪೂರ್ಣ ಹಕ್ಕುದಾರರು ಓದುಗರೇ ಆಗಿರುತ್ತಾರೆ. ಆದರೆ ಓದುಗರಿಗೆ ಅದುವರೆಗೂ ಪರಿಚಯವಿಲ್ಲದ ತೇಜಸ್ವಿ ವ್ಯಕ್ತಿತ್ವದ ಇನ್ನೊಂದು ಪರಿಯನ್ನು ಅಧಿಕೃತವಾಗಿ ತಾನು ತಿಳಿಸುತ್ತಿದ್ದೇನೆ ಎಂಬುದೇ ಈ ಶೀರ್ಷಿಕೆ ಹುಟ್ಟಲು ಕಾರಣವಾಗಿರುವಂತೆ ತೋರುತ್ತದೆ. ಅದರಂತೆ ಇಲ್ಲಿ ತೇಜಸ್ವಿಯವರ ವೈಯುಕ್ತಿಕ ಜೀವನದ ಹಲವು ಮುಖಗಳು ಅನಾವರಣಗೊಂಡಿವೆ. ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡ ನುಡಿ ಲೋಕದಲ್ಲೇ ವಿಶೇಷವೆನಿಸುವಂತೆ, ತಮ್ಮ ಪ್ರೇಮ ಪತ್ರಗಳನ್ನು ಪ್ರಕಟಗೊಳಿಸುವ ಹೆಜ್ಜೆಯೊಂದನ್ನು ರಾಜೇಶ್ವರಿ ಇಟ್ಟಿದ್ದಾರೆ. ಈ ಪತ್ರಗಳ ವಿಚಿತ್ರ ಬಣ್ಣ–ಬೆಡಗುಗಳನ್ನು ಅವುಗಳನ್ನು ಓದಿಯೇ ಅರಿಯಬೇಕು!

ಇದು ತೇಜಸ್ವಿ ಕುರಿತ ಕೃತಿಯಾದರೂ ಇನ್ನೊಂದು ರೀತಿಯಲ್ಲಿ ಇದು ರಾಜೇಶ್ವರಿಯವರ ಆತ್ಮ ಕಥನವೂ ಹೌದು. ಆತ್ಮಕಥನವೆಂದ ಮೇಲೆ ತನ್ನ ಸುತ್ತಿನ ಅನೇಕ ವ್ಯಕ್ತಿಗಳ ಮತ್ತು ಘಟನೆಗಳ ಉಲ್ಲೇಖ ಇದ್ದೇ ಇರುತ್ತವೆ ಮತ್ತು ಅದನ್ನು ಲೇಖಕರು ತಮ್ಮ ಅನುಭವಕ್ಕೆ ದಕ್ಕಿದ ರೀತಿಯಲ್ಲಿ

ಬರೆದುಕೊಳ್ಳುತ್ತಾರೆ. ಈ ಕೃತಿಯಲ್ಲಿ ಸಮಾಜವಾದಿ ಚಳುವಳಿಯೂ ಸೇರಿದಂತೆ ಕರ್ನಾಟಕದ ಹಲವು ಚಳುವಳಿಗಳ ಕುರಿತು ವಿವರಗಳು ಬರುತ್ತವೆ. ಹಲವಾರು ವ್ಯಕ್ತಿಗಳ ಉಲ್ಲೇಖ ಬರುತ್ತದೆ. ಇವನ್ನೆಲ್ಲಾ ಲೇಖಕಿ ತನ್ನದೇ ಭಾಷಾ ಲಯದಲ್ಲಿ ಮಂಡಿಸುತ್ತಾ ಹೋಗುತ್ತಾರೆ. ಆದರೂ, ಯಾವುದೇ ಆತ್ಮಕಥನದಲ್ಲಿ ಉಲ್ಲೇಖಗೊಳ್ಳುವಂತಹ ವ್ಯಕ್ತಿ ವಿವರಗಳಿಗೆ ಇನ್ನೊಂದು ಮುಖವಿರುತ್ತದೆ ಎಂಬ ಎಚ್ಚರದೊಂದಿಗೇ ಇಂತಹ ಕೃತಿಗಳನ್ನು ಓದಬೇಕಾಗುತ್ತದೆ. ಈ ಕೃತಿಯಲ್ಲೂ ತೇಜಸ್ವಿಯವರ ಸಮಾಜವಾದಿ ಗೆಳೆಯರ ಕುರಿತು ಅಲ್ಲಲ್ಲಿ ವ್ಯಕ್ತವಾಗುವ ರಾಜೇಶ್ವರಿಯವರ ಅಭಿಪ್ರಾಯಗಳನ್ನು ಈ ದೃಷ್ಟಿಯಿಂದ ಗಮನಿಸಬೇಕಾಗುತ್ತದೆ.

ಈ ಕೃತಿಯಲ್ಲಿ ಬರುವ ಕುವೆಂಪು ಕುರಿತ ವಿವರಗಳನ್ನು ಓದುವಾಗ ಒಂದು ವಿಶೇಷ ಅನುಭವವಾಗುತ್ತದೆ. ಕುವೆಂಪು ಕೃತಿಗಳಿಗೆ ಇರುವ ವ್ಯಾಪ್ತಿ ಕುವೆಂಪು ವ್ಯಕ್ತಿತ್ವಕ್ಕೂ ಇದೆ. 'ನೆನಪಿನ ದೋಣಿಯಲ್ಲಿ', 'ಅಣ್ಣನ ನೆನಪು', 'ಮಗಳು ಕಂಡ ಕುವೆಂಪು'ವಿನಲ್ಲಿಲ್ಲದ ಕೆಲವು ವಿವರಗಳು ಈ ಕೃತಿಯಲ್ಲಿ ಸಿಗುತ್ತವೆ. ತೇಜಸ್ವಿಯ ಮದುವೆಯ ಸನ್ನಿವೇಶವನ್ನೇ ಗಮನಿಸಿ. ಪ್ರೀತಿಸಿ ಆರು ವರ್ಷಗಳ ನಂತರ ಇದ್ದಕ್ಕಿದ್ದಂತೆ ಒಂದು ದಿನ ತೇಜಸ್ವಿ, ರಾಜೇಶ್ವರಿಗೆ ಸ್ಕೂಟರ್ ಹತ್ತು ನಮ್ಮ ಮನೆಗೆ ಹೋಗೋಣ ಎನ್ನುತ್ತಾರೆ. ರಾಜೇಶ್ವರಿ, ಕೆಲವು ಬಟ್ಟೆಗಳನ್ನು ತುಂಬಿಕೊಂಡು ಅಣ್ಣ, ಅಮ್ಮರ ಕಾಲಿಗೆ ನಮಸ್ಕರಿಸಿ ಹೊರಟುಬಿಡುತ್ತಾರೆ. ತೇಜಸ್ವಿ ತಾನೇ ಕಟ್ಟಿದ ಕಾಡಿನ ಮನೆಗೆ ಅವರನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಇನ್ನಾರೂ ಇಲ್ಲ. ಕೆಲವು ಗೆಳೆಯರಷ್ಟೇ. ನಾಲ್ಕು ದಿನ ಬಿಟ್ಟು ಕುವೆಂಪು, ಹೇಮಾವತಿ, ತಂಗಿಯರು, ರಾಜೇಶ್ವರಿಯವರ ಮನೆಮಂದಿ ಮೊದಲಾದವರ ಎದುರಲ್ಲಿ ಮಂತ್ರಮಾಂಗಲ್ಯ ರೀತಿ ಮದುವೆ ಆಗುತ್ತದೆ. ಒಟ್ಟು ಸನ್ನಿವೇಶದಲ್ಲಿ ಕುವೆಂಪು ಮಾತ್ರವಲ್ಲ, ರಾಜೇಶ್ವರಿಯವರ ಅಮ್ಮನನ್ನೂ ಒಳಗೊಂಡು ಎಲ್ಲರ ಪ್ರಬುದ್ಧ ಮತ್ತು ಆಧುನಿಕ ನಡವಳಿಕೆ ವಿಶೇಷ ಅನಿಸುತ್ತದೆ. ಇಂತಹ ಅನೇಕ ವಿವರಗಳಿಂದಾಗಿಯೇ ಈ ಕೃತಿ ಓದುಗರ ಗಮನ ಸೆಳೆಯುವುದು.

ತೇಜಸ್ವಿಯವರ ಒರಟು ಅಥವಾ ನೇರ ವ್ಯಕ್ತಿತ್ವದ ಕುರಿತು ಸಾರ್ವಜನಿಕ ಪರಿಚಯ ಕನ್ನಡಿಗರಿಗೆ ಇದೆ. ಖಾಸಗಿಯಾಗಿಯೂ ಅವರು ಹೀಗೇ ಇದ್ದರೇ ಎಂಬ ಕುತೂಹಲ ಹುಟ್ಟುವುದೂ ಸಹಜ. ರಾಜೇಶ್ವರಿಯವರಿಗೂ ಮೊದಮೊದಲು ತೇಜಸ್ವಿಯ ಪರಿ ವಿಚಿತ್ರ ಅನ್ನಿಸಿದ್ದಿದೆ. ತನ್ನ ಜೀವನ ಬರೀ ಇವರ ಬೇಟೆಯ ಬಲಿಗಳನ್ನು ರುಚಿ ರುಚಿಯಾಗಿ ಅಡುಗೆ ಮಾಡುವುದರಲ್ಲೇ ಕಳೆದು ಹೋಗುತ್ತಿದೆ ಎಂಬ ಭಾವವೂ ಅವರನ್ನು ಕಾಡಿದೆ. ಆದರೆ ತಾನು ಆ ಭಾವನೆಗಳಿಂದೆಲ್ಲಾ ಬಹಳ ಬೇಗ ಹೊರಬಂದೆ ಮತ್ತು ಬದುಕನ್ನು ನೋಡುವ ಕ್ರಮವನ್ನೇ ಬದಲಿಸಿಕೊಂಡೆ. ಆದ್ದರಿಂದಲೇ ತನಗೆ ಬದುಕಿನ ಸುಖಗಳನ್ನು ಅನುಭವಿಸಲು ಸಾಧ್ಯವಾಯಿತು ಎನ್ನುತ್ತಾರೆ ರಾಜೇಶ್ವರಿ. ತೇಜಸ್ವಿಯ ಮುಂಗೋಪದ ಸ್ವಭಾವ, ಅವರ ಬೈಗುಳದ ಭಯ ಇದೆಲ್ಲಾ ಅವರ ಬದುಕಿನ ಮಾಮೂಲೀ ವಿಷಯವೇ ಆದಂತೆ ಅವರ ನಿರೂಪಣೆಯಲ್ಲಿ ಅನ್ನಿಸುತ್ತದೆ.

ರಾಜೇಶ್ವರಿ ಪ್ರತಿಭಾವಂತೆ. ಗಂಭೀರ ಓದು, ಗಂಭೀರ ಆಸಕ್ತಿಗಳು ಅವರಿಗಿರುವುದು ಮತ್ತು ಎಂತಹದೇ ವಿಚಾರಗಳನ್ನಾದರೂ ತನ್ನದೇ ನಿಲುವಿನಲ್ಲಿ ನೋಡಬಲ್ಲ ಜೀವನ ದೃಷ್ಟಿಯೂ ಅವರಿಗಿರುವುದು ಈ ಪುಸ್ತಕದ ಮೂಲಕ ತಿಳಿಯುತ್ತದೆ. ತೇಜಸ್ವಿ ಇದನ್ನೆಲ್ಲಾ ಅವರಲ್ಲಿ ಗಮನಿಸಿದ್ದರೇ, ಅವರೇಕೆ ಮೊದಲು ಬರೆಯಲಿಲ್ಲ ಎಂಬೆಲ್ಲಾ ಪ್ರಶ್ನೆಗಳು ಈ ಕೃತಿಯ ಓದುಗರಲ್ಲಿ ಮೂಡಬಹುದು. ಆದರೆ ರಾಜೇಶ್ವರಿ ಅವರು ತಮ್ಮ ಯಾವ ಆಸಕ್ತಿಯನ್ನೂ ಬಲಿಕೊಟ್ಟಂತೆ ಕಾಣುವುದಿಲ್ಲ. ಬದಲಿಗೆ, ತೇಜಸ್ವಿಯ ಆಸಕ್ತಿಗಳೊಂದಿಗೆ ಸಹಕರಿಸುತ್ತಲೇ ತನ್ನದೇ ಜಗತ್ತೊಂದನ್ನು ತನ್ನಷ್ಟಕ್ಕೆ ತಾನೇ ಕಟ್ಟಿಕೊಂಡು ತನ್ನಿಚ್ಛೆಯಂತೆ ಬದುಕಿದ್ದಾರೆ. ಅವರ ಆಸಕ್ತಿ ಇದ್ದದ್ದು ಅಡುಗೆಯಲ್ಲಿ, ಕೈತೋಟ ಮಾಡುವುದರಲ್ಲಿ, ಕ್ರೋಶಾ ಹೆಣೆಯುವುದರಲ್ಲಿ, ಮಕ್ಕಳು ಗೆಳೆಯರೊಂದಿಗೆ ಒಡನಾಡುವುದರಲ್ಲಿ. ಇದನ್ನೆಲ್ಲ ಒಳಗೊಂಡ ಬದುಕನ್ನು ಅವರು ಅವರಿಗೆ ಬೇಕಾದಂತೆ ಕಟ್ಟಿಕೊಂಡಿದ್ದಾರೆ. ತೇಜಸ್ವಿ ಬೈದರೂ ಅದನ್ನೇನೂ ನಿಲ್ಲಿಸಿಲ್ಲ ಮತ್ತು ಕ್ರಮೇಣ ವಯಸ್ಸಾದಂತೆ ತನ್ನ ಆಸಕ್ತಿಗಳನ್ನು ತಮ್ಮ ಪತ್ನಿಯ ಮೇಲೆ ಹೇರುವುದನ್ನು ತೇಜಸ್ವಿಯೂ ನಿಲ್ಲಿಸಿ ಮಾಗಿದಂತೆನಿಸುತ್ತದೆ.

ಜಗತ್ತು ಮನ್ನಿಸುವ ಸಾಹಿತಿಗಳ ಒಡನಾಟದಲ್ಲಿದ್ದೂ ಬದುಕಿನಲ್ಲಿ ಅದಷ್ಟೇ ದೊಡ್ಡದಲ್ಲ, ದಿನದಿನದ ತನ್ನ ಬದುಕಿನ ರೀತಿಯೂ ದೊಡ್ಡದೇ ಎಂಬ ರೀತಿಯಲ್ಲಿ ರಾಜೇಶ್ವರಿ ಬದುಕಿರುವ ವಿವರಗಳು ಪರೋಕ್ಷವಾಗಿಯಾದರೂ ಈ ಪುಸ್ತಕದಲ್ಲಿ ಕಾಣಸಿಗುತ್ತವೆ.. ಅವರಿಗೆ ಉದ್ಯೋಗಕ್ಕೆ ಹೋಗಲು ಆಸಕ್ತಿ ಇರಲಿಲ್ಲ. ಬರೆಯುವ ಇಚ್ಛೆಯೂ ಇರಲಿಲ್ಲ. ಹೋರಾಟದಲ್ಲಿ ತಾನೊಬ್ಬಳೇ ತೊಡಗಿಕೊಳ್ಳುವ ಬಯಕೆಯೂ ಇರಲಿಲ್ಲ. ಅವರಿಗಿದ್ದದ್ದು ಗೃಹಿಣಿಯ ಬದುಕಿನ ಬಯಕೆ ಮಾತ್ರ. ಅದರಂತೆ ಅವರು ಬದುಕಿದರು. (ಒಂದು ವೇಳೆ ಹೆಣ್ಣೊಬ್ಬಳಿಗೆ ಆ ಎಲ್ಲ ಬಯಕೆ ಇದ್ದೂ, ಆಗಲೂ ಇದೇ ಸಂತೃಪ್ತಿ ಸಿಕ್ಕಿರುತ್ತಿತ್ತು ಅಂದಿದ್ದರೆ ಅದು ಇನ್ನೂ ದೊಡ್ಡ ವಿಷಯವೆನಿಸಿಕೊಳ್ಳುತ್ತದೆ ಮತ್ತು ಅದೇ ನಿಜವಾದ ಅಗ್ನಿಪರೀಕ್ಷೆಯ ಜಯವಾಗುತ್ತದೆ.)

ತೇಜಸ್ವಿ ಮತ್ತು ರಾಜೇಶ್ವರಿಯವರ ಸಾಂಗತ್ಯ ಬೆಳೆಯುತ್ತಾ ಹೋಗುವುದರ ಒಂದು ಚಿತ್ರ ಈ ಕೃತಿಯಲ್ಲಿದೆ. ಇದನ್ನೇ ಕೊನೆಯಲ್ಲಿ ತೇಜಸ್ವಿ 'ಇಷ್ಟು ದಿನ ನನಗೆ ಕಂಪೆನಿ ಕೊಟ್ಯಲ್ಲೆ!' ಎಂದು ಉದ್ಗರಿಸುವುದು. ತಮ್ಮ ದಾಂಪತ್ಯದಲ್ಲೊಂದು ಕಂಪಾನಿಯನ್‌ಶಿಪ್ ಸಾಧ್ಯವಾದ್ದರ ಕುರಿತು ತೇಜಸ್ವಿಗೆ ಮೆಚ್ಚುಗೆಯ ಜೊತೆಗೆ ಬೆರಗೂ ಇದೆ ಮತ್ತು ಇದು ಸಾಧ್ಯವಾದದ್ದು ರಾಜೇಶ್ವರಿಯಿಂದ ಎಂಬ ಅರಿವೂ ಇದೆ. ಈ ಉದ್ಗಾರ ಈ ಹೊತ್ತಿಗೆಯ ಹೈಲೈಟ್ ಅನ್ನಿಸುತ್ತದೆ. ಈ ಕಾರಣಕ್ಕೆ "ನನ್ನ ತೇಜಸ್ವಿ ಕಾಡಿನ ಉಸಿರಿನಲ್ಲಿ ಉಸಿರಾಗಿ ಹೋದರು. ಅವರ ವಾಸನೆ ನನ್ನ ಉಸಿರಿನಲ್ಲಿದೆ, ನನಗೆ ಅವರು ಬೇಕು"(ಪು:೫೩೭) ಎಂಬ ರಾಜೇಶ್ವರಿಯವರ ಮಾತು ನಮ್ಮೊಳಗೂ ಮಾರ್ದನಿಸುತ್ತದೆ.

**–ಸಬಿತಾ ಬನ್ನಾಡಿ**

ಇಂಧನ ಬೆಲೆ ಏರಿಕೆ... (೧೨ನೇ ಪುಟದಿಂದ ಮುಂದುವರೆದದು)

**ವಾಹನವನ್ನು ಬಳಸುವುದಿಲ್ಲ' ಎಂಬ ಸ್ಟಿಕರ್ ಹಚ್ಚಬೇಕು. ಪ್ರತಿ ಪೆಟ್ರೋಲ್ ಬಂಕ್ ಬಳಿ ಈ ಬಗ್ಗೆ ಸೂಚನಾ ಫಲಕ ಇರಬೇಕು.**

**ಇದೆಲ್ಲದರಿಂದ ಏನಾಗಬಹುದು? ಗೊತ್ತಿಲ್ಲ. ಕಾಲಕ್ರಮದಲ್ಲಿ ಸೈಕಲ್ ಬಳಕೆಯಂತಹ ಪರ್ಯಾಯ ಸಂಚಾರ ಕ್ರಮಗಳತ್ತ ಜನತೆಯ ಗಮನ ಹರಿಯಬಹುದು. ಪ್ರತ್ಯಕ್ಷವಾಗಿ ಜನರ ಆರೋಗ್ಯ ಸುಧಾರಿಸಬಹುದು. ಪರೋಕ್ಷವಾಗಿ ಪರಿಸರ ಮಾಲಿನ್ಯ ಕಡಿಮೆಯಾಗಬಹುದು. ಹಾಗಾದರೆ, ನಮ್ಮ ನಮ್ಮ ಊರುಗಳಲ್ಲಾದರೂ, ನಮ್ಮ ನೆರೆಹೊರೆಯಲ್ಲಾದರೂ, ನಮ್ಮ ಗೆಳೆಯರ ಮಧ್ಯೆಯಾದರೂ ನಾವು ಏಕೆ ಈ ಪ್ರಯತ್ನ ಮಾಡಬಾರದು?**

–ಕೆ.ವೆಂಕಟರಾಜು, ಓರ್ವ ಸೈಕಲ್ ವಿಹಾರಿ ಚಾಮರಾಜನಗರ

**ಮುದ್ರಕರು: ತಾರಾ ಪ್ರಿಂಟರ್ಸ್, # ೨೮೫/ಎಫ್, ಉತ್ತರಮಠ ರಸ್ತೆ, ೫ನೇ ಪಶ್ಚಿಮ ತಿರುವು, ಮೈಸೂರು–೫೭೦ ೦೦೪**

ತೆರದ ಅಂಚೆ

ಇವರಿಗೆ,

**If undelivered, please return to D.S. Nagabhushana, HIG-5, 'Nudi', Kallahalli Extension, Vinoba Nagara, Shivamogga - 577204 (Karnataka)**